ಶನಿವಾರ, ಜನವರಿ 18, 2025 | ₹ 7.00

www.prajavani.net

prajavani·net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಲಾವಿದ
ಮಂಗಳೂರಿನ ಮಂಗಳಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 'ಕರ್ನಾಟಕ ಕ್ರೀಡಾಕೂಟ -2025' ರಲ್ಲಿ ಪಾಲ್ಗೊಂಡಿದ್ದ ಕಲಾವಿದ



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER

ಕ್ಲಾಸಿಫೈಡ್ಸ್

REAL ESTATE SELLING

Sites

Anjanapura

ANJANAPURA SITE for Sale 4th Block 30x40 facing South good location immediate construction near last Busstop. 9845132011, 9663554448

Banashankari

BANASHANKARI 6TH STAGE- BDA-AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

BANASHANKARI 6TH Stage 2nd Block 30x40, South Facing/7th Block 50x80, East Facing 60feet Road: 9900097239

Cunningham Road

QUEENS ROAD 2031sft southwest corner property for sale.Call for price. Contact svr@pavithraconstructions.in

Girinagar

GIRINAGAR 4TH phase Corner prime residential location measuring 2600 sqft SITE for Sale Price 5.3 crore. Genuine buyers contact: 9611843935

General

BUYING/ SELLING BDA and BMRD E-Katha Properties Contact SUNSTONE Properties: 9980433004 Genuine Buyers & Sellers Only

Kanakapura Road

KAGGALIPURA 'E' Khatha Site Sale 60x90 West Facing Gated Community 3,950/- Psqft. Negotioble 9740150364/ 8884707773

Kempegowda Layout

***NADAPRABHU* KEMPEGOWDA** LAYOUT 5th Block 30X40 E/F,7th Block 30x40 E/F,50x80 W/F,and 8th Block 40x60 W/F.Contact: 9686469799

KEMPEGOWDA LAYOUT, Commercial BDA Site for Sale 20x30, 30x40, 40x60, 50x80, Contact: Kumar 9945119449

NADA PRABHU Kempegowda Layout BDA 30x40 South Facing, 2nd Block, I Sector, Direct Owner: 9980860138

Magadi Road

15X50 SITE WF Herohalli, Sunkadakatte, Vigneshwaranagara, Magadi Road, Near Metro, E-Katha, 52L Owner 9739957911

Nagarabhavi

40X60 PLOT N/F BDA 60ft Road, RHCS Layout Near 'D' Group Layout, Nagarabhavi, Bengaluru, Excellent Residential Location. Rs.17500 /sqft (Slightly Negotiable), Genuine Buyer Only Contact: 9480217325

Rajarajeshwari Nagar

40X77 (3080.SQFT.) East`Facing, A & E Khata, BBMP`Site Sale`at SrinivasaNagar Near Krishnappa Layout,RR.Nagar Price: 3.10.Cr. Call: 9167979901.

RMV

RMV NEW BEL Road Semi Commercial 40x65 Site Sale Call: 9845623970/ 9739400838/ Broker's Excuse

Vishweshwariah Layout

"VISHVESWARAIAH 6TH-BLOCK 50x80 East facing Allotte Site sale 60`feet Road,Near KLE Law College Genuine`buyers only`Contact: 9945662333"

AVAILABLE 30X40 BDA Site Viswesavaraiah Layout 1st Block Near 100ft Parallel Road, Just 1km From Shirke Apartment Beautiafull Location: 9035470616

***VISHVESHWARIAH* LAYOUT** 3rd Block 40x60 East Facing, 6th Block 40x60 South Facing. Contact: 9686469799

30X40 BDA Site Sale Vishveshwaraiah Layout 1st Block Near Shirke Apartment Alati Site (Agent Excuse) Direct Buyers Only: 9611103609

"AVAILABLE/ WANTED Sites Vishveshwaraiah any Block Kempegowda Layout Good location, Genuine Buyers/ Sellers Contact: 7259675150"

Yeshwanthpur

PEENYA YESHWANTPURA 36x80 Commercial 5 Floors Building Sale Good Rentel in Come Call: 9845623970/ 9739400838

Kengeri

PREMIUM VILLA PLOT 30X80.1 West facing The Green Valley Address Gated community BDA approved eKhatha contact 9243113714

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

House

Basaveshwaranagar

SALE KHB Colony Near Basaveshwara Nagar Old House 45X65 Very Good Location. 9448045601/ 9535811626

Jayanagar

SALE HOUSES & Flats Jayanagar JPNagar Banashankari 30x40 30x50, 40x60, 60x90 Price 2.9cr To 10cr CLASSIC ESTATES 9845302589

Kanakapura Road

4 BEDROOM Designed Stone Constructed Duplex House And Hallow Bricks Factory For Sale Contact: 9916817739

Padmanabha Nagar

PADHMANABHA NAGAR 30x40 West facing Two BHK Two Houses (Ground and First) 2,90,00,000/-, J.P.Nagar 30x40, 3,20,00,000/- Murali 9845232711

Konanakunte Cross

SALE 40X50 Corner 2 BHK House With 4 Shops Konanakunte Near Sowdhamini Contact: 9845289422

Agricultural Land Converted

Hosur Road

KUDLU, OFF HOSUR Main Road, 80000sft. Land for`Sale 6,000/- Sft, 3KM from Kudlu-Gate Metro`Station, BBMP `A`Katha, 2`side 50'Road, Suitable for Apartment (Agents Excuse) -9731775536.

Commercial Land

Electronic City

SALE 28000SFT KIADB suitable for Industrial/ Commercial at Electronic City Phase 2,facing North and South both sides 40feet road width. Call Verna Developers, MG-Road. 9916310226/ 9620253180.

Mysore

MYSORE EXPRESS Highway Property near Srirangapatna, Close to Exit Point is for sale /JV. Area 2.1 Acres Commercially Converted Land. Residential Developement Possible Contact 9741019028

Commerical

Seshadripuram

SHALIMAR GALAXY Sheshdripuram 675sft Office Space For Sale 110 Lacs 2nd Floor Sunil: 9845201710

Flat

Basavanagudi

BASAVANAGUDI SALE FLAT BRAND NEW 2050 SFT NEAR KR-PARK OC-CC 3.4 Corer NEGO. SHIVU 9880004149

Jayanagar

JAYANAGAR 1ST BLOCK 3FLATS available East facing- 3BHK-1448 Sft +undivided 602 Sft 1st, 2nd, 3rd Floor Each Flat 2.15 Crores. Full cheque payment, negotiate direct owner ESHWARI ENTERPRISES: 98454-97163

Uttarahalli

2/3/4 BHK New FLATS SALE, A Khatha, Ready-move. 40L/ 75L/ 1Cr. Carparking, Cauvery, Vaasthu. 9945224058, 6360501159.

Industrial & Factory

Magadi Road

CHANNAPPA INDUSTRIAL Area Near Kamakshipalya Industrial Area 80X60 Shead Opposite Masala Factory: 9448045601/ 9535811626

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Sites

Multiple Locations

WANTED BDA SITES Anjanapura- Arkavathi Banashankari 6th Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI, 9900268073 9448068073.

Anjanapura

WANTED BDA Site Anjanapura, Banashankari 6thStage,Vishweshwaraiahlayout & any BDA Katha & Mysore MUDA Sites, immediate settlement, genuine Sellers Contact:9902038118,9449060605

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT: 9845062822/ 8660751654

BANASHANKARI 6TH Stage, Anjanapura, Kanakapura Road, All Measurement, Buying and Selling. Brokers Excuse. Call: 9731814437.

RENTAL PROPERTIES

Accommodation Available

Commercial

FOR RENT Commercial Building, First Floor Measurement: 5400 Sq. ft, Carpet Area 4000 Sq. ft, No.6, West of Chord Main Road Near Navarang Circle Next to Swathi Restaurant Bangalore-10, Contact: 8970435166/ 9945079235

LONG TERM Office Rental Old Airport Road VDB TOUCHDOWN Next to HAL Museum. 7447Sqft Fully Fitted Out Office with 96 Work Stations 5 Cabins 3 Meeting 1 Board, 1 MD Cabin, 1 Cafeteria. WhatsApp Msg Only: 9845031550

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

RENT VACANT Industrial. Converted land 4 Acres Near Nelamangala. 1 km from the state highway 74, 40ft Wide Road with a compound wall North Facing Property as per Vastu 9845038343 reddymrr@gmail.com

Flats

FOR IMMEDIATE Rent/ Sale 2 BHK Flat, 5th Phase, J.P.Nagar. Negotiable. 9108523435/ 9448451122/ 7760804890.

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements, GANESH SHENOY 8310028157

BUSINESS

Business Offers

Finance

LOAN MELA (CIBIL NOT REQUIRED) Quick Process, MSME, Project, Machinery, Personal, Home, Secured and Unsecured Loan Call:7975708647

Business For Sale

BREWERY & RESTAURANT for Sale in JPNagar 5HL Brewing Capacity 11,200sqft G+5 Premium Floors in prime location licensed & Ready-to-operate Call:6361237545

MORE Classifieds IN MAIN ISSUE

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್





24ಕ್ಕೆ ಸನ್ನತಿ ಪಂಚಶೀಲ ಪಾದಯಾತ್ರೆ ಸಮಾರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂಧ್ರಪ್ರದೇಶದ ಬುದ್ಧವನ ಮಾದರಿಯಲ್ಲಿ ಕಲಬುರಗಿಯ ಬೌದ್ಧ ಐತಿಹಾಸಿಕ ಕ್ಷೇತ್ರ ಸನ್ನತಿಯ ಅಭಿವೃದ್ಧಿ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬೌದ್ಧರು ಹಮ್ಮಿಕೊಂಡಿದ್ದ ಪಾದಯಾತ್ರೆ ಇದೇ 24ರಂದು ಇಲ್ಲಿನ ಸ್ವಾತಂತ್ರ್ಯ ಉದ್ಯಾನ ತಲುಪಲಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಭಾರತೀಯ ಬೌದ್ಧ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಎಂ.ವೆಂಕಟಸ್ವಾಮಿ, 'ಬೌದ್ಧ ಬಿಕ್ಕುಣಿ ಭಂತೆ ಬೋಧಿದತ್ತ ನೇತೃತ್ವದಲ್ಲಿ 2024ರ ನವೆಂಬರ್ 15ರಂದು ಪಾದಯಾತ್ರೆ ಆರಂಭವಾಗಿತ್ತು. ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯನಗರ, ಬಳ್ಳಾರಿ, ಚಿತ್ರದುರ್ಗ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಮೂಲಕ ಸಂಚರಿಸಿ, ಹಲವು ಗ್ರಾಮಗಳಲ್ಲಿ ವಾಸ್ತವ್ಯ ಮಾಡಿ ಧಮ್ಮ ಸಂದೇಶ ನೀಡಲಾಗಿದೆ. ಇದೇ 19 ರಂದು ಪಾದಯಾತ್ರೆಯು ಬೆಂಗಳೂರು ನಗರ ಪ್ರವೇಶಿಸಲಿದೆ. 23 ರಂದು ನಾಗಸೇನ ಬುದ್ಧ ವಿಹಾರದಲ್ಲಿ ವಾಸ್ತವ್ಯ ಹೂಡಲಿದೆ. 24ರಂದು ಬೆಳಿಗ್ಗೆ 9 ಗಂಟೆಗೆ ಮೆರವಣಿಗೆ ಮೂಲಕ ಸ್ವಾತಂತ್ರ್ಯ ಉದ್ಯಾನ ತಲುಪಿ, ಸಮಾರೋಪಗೊಳ್ಳಲಿದೆ' ಎಂದು ಹೇಳಿದರು.

'ಸನ್ನತಿಯನ್ನು ಜಾಗತಿಕ ಮಟ್ಟದ ಸೆವೆನ್ ಸ್ಟಾರ್ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಬೇಕು. ಸನ್ನತಿ ಅಭಿವೃದ್ಧಿ ಮಂಡಳಿಯನ್ನು ಪೂರ್ಣಪ್ರಮಾಣದಲ್ಲಿ ರಚಿಸಬೇಕು. ಬೌದ್ಧರ ಸಮಸ್ಯೆಗಳ ಪರಿಹಾರಕ್ಕಾಗಿ ಕರ್ನಾಟಕ ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪಿಸಿ, ಕನಿಷ್ಠ ₹1 ಸಾವಿರ ಕೋಟಿ ಅನುದಾನ ಮೀಸಲಿಡಬೇಕು. ಗೌತಮ ಬುದ್ಧ ಜಯಂತಿಗೆ ಸಾರ್ವತ್ರಿಕ ರಜೆ ಘೋಷಿಸಬೇಕು. ಫೆಬ್ರುವರಿ 12ರಂದು ಸಾಮ್ರಾಟ್ ಅಶೋಕ ಸನ್ನತಿ ಉತ್ಸವವನ್ನು ಸರ್ಕಾರದ ವತಿಯಿಂದ ಆಚರಿಸಬೇಕು' ಎಂದು ಆಗ್ರಹಿಸಿದರು.

ಒಂದೇ ವರ್ಷದಲ್ಲಿ ನಾಲ್ವರು ನಿರ್ದೇಶಕರನ್ನು ಕಂಡ ಕ್ಯಾನ್ಸರ್ ಚಿಕಿತ್ಸಾ ಸಂಸ್ಥೆ

ಕಿದ್ವಾಯಿ ಆಸ್ಪತ್ರೆಗೆ ಭಾರವಾದ 'ಪ್ರಭಾರ'

• ವರುಣ ಹೆಗಡೆ

ಬೆಂಗಳೂರು: ಕ್ಯಾನ್ಸರ್ ಚಿಕಿತ್ಸೆಗೆ ಹೆಸರಾಗಿರುವ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಕಳೆದ ಒಂದು ವರ್ಷದಲ್ಲಿ ನಾಲ್ವರು ನಿರ್ದೇಶಕರನ್ನು ಕಂಡಿದ್ದು, ಪೂರ್ಣಾವಧಿ ನಿರ್ದೇಶಕರ ನೇಮಕಾತಿ ನಡೆಯದಿದ್ದರಿಂದ ಸಂಸ್ಥೆಯ ಕಾರ್ಯ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ.

ಈ ಸಂಸ್ಥೆಗೆ ಕಳೆದ ಒಂದು ವರ್ಷದಿಂದ ಪೂರ್ಣಾವಧಿ ನಿರ್ದೇಶಕರಿಲ್ಲ. 2022ರ ಅಕ್ಟೋಬರ್ 17 ರಂದು ನಿರ್ದೇಶಕರಾಗಿ ನೇಮಕಗೊಂಡಿದ್ದ ರೇಡಿಯೇಷನ್ ಆಂಕಾಲಜಿ ವಿಭಾಗದ ಮುಖ್ಯಸ್ಥ ಡಾ.ವಿ.ಲೋಕೇಶ್ ಅವರನ್ನು ಅಧಿಕಾರ ದುರ್ಬಳಕೆ, ಅಕ್ರಮ ಸೇವಾ ಬಡ್ತಿ, ವೈದ್ಯಕೀಯ ನಿರ್ಲಕ್ಷ್ಯ ಸೇರಿ ವಿವಿಧ ಆರೋಪಗಳಿಗೆ ಸಂಬಂಧಿಸಿದಂತೆ 2024ರ ಫೆಬ್ರುವರಿಯಲ್ಲಿ ಅಮಾನತು ಮಾಡಲಾಗಿತ್ತು.

ಬಳಿಕ ಸರ್ಜಿಕಲ್ ಆಂಕಾಲಜಿ ವಿಭಾಗದ ಮುಖ್ಯಸ್ಥ ಡಾ. ಸೈಯದ್ ಅಲ್ತಾಫ್ ಅವರನ್ನು ಪ್ರಭಾರ ನಿರ್ದೇಶಕರನ್ನಾಗಿ ನೇಮಿಸಲಾಗಿತ್ತು. ತಾಂತ್ರಿಕ ಕಾರಣದಿಂದ ತೆರವಾದ ಈ ಸ್ಥಾನಕ್ಕೆ ಡಾ. ತೇಜಸ್ವಿನಿ ಬಿ. ಅವರ ನೇಮಕಾತಿ ನಡೆದಿತ್ತು. ನಂತರದ ಮೂರು ತಿಂಗಳ ಅವಧಿಯಲ್ಲಿಯೇ ಡಾ. ರವಿ ಅರ್ಜುನ್ ಅವರು ಪ್ರಭಾರ ನಿರ್ದೇಶಕರಾಗಿ ನೇಮಕಗೊಂಡಿದ್ದು, ಅವರು ಇದೇ ತಿಂಗಳು ನಿವೃತ್ತಿ ಹೊಂದಲಿದ್ದಾರೆ. ಪೂರ್ಣಾವಧಿ ನಿರ್ದೇಶಕರಿಲ್ಲದ ಪರಿಣಾಮ ಔಷಧ ಖರೀದಿ ಸೇರಿ ವಿವಿಧ ಟೆಂಡರ್ ಪ್ರಕ್ರಿಯೆಗಳು ಕುಂಟುತ್ತಾ ಸಾಗುತ್ತಿವೆ.

ಸಂಸ್ಥೆಯು ಕ್ಯಾನ್ಸರ್ ಚಿಕಿತ್ಸೆಯ ಜತೆಗೆ ಶಿಕ್ಷಣ, ಸಂಶೋಧನೆ ಹಾಗೂ ರೋಗದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿಯೂ ತೊಡಗಿಕೊಂಡಿದೆ. ಇಲ್ಲಿನ ಹೊಂಬೇಗೌಡ ನಗರದಲ್ಲಿರುವ ಸಂಸ್ಥೆಗೆ ಕ್ಯಾನ್ಸರ್ ಚಿಕಿತ್ಸೆಗಾಗಿ ರಾಜ್ಯದ ವಿವಿಧ ಭಾಗಗಳ ಜತೆಗೆ ಹೊರ ರಾಜ್ಯಗಳಿಂದಲೂ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ರೋಗಿಗಳು ಬರುತ್ತಾರೆ. ಸಂಸ್ಥೆಯ ದಾಖಲಾತಿ ಪ್ರಕಾರ ಶೇ 50ರಷ್ಟು ರೋಗಿಗಳು ಕ್ಯಾನ್ಸರ್ ಚಿಕಿತ್ಸೆಗೆ ಮೂರು ಹಾಗೂ ನಾಲ್ಕನೇ ಹಂತದಲ್ಲಿ ಬರುತ್ತಿದ್ದಾರೆ. ಶೇ 14.3 ರಷ್ಟು ಮಂದಿಗೆ ಮಾತ್ರ ಮೊದಲ ಹಾಗೂ ಎರಡನೇ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತಿದೆ.

ಒಬ್ಬರಿಗೆ ಎರಡು ಜವಾಬ್ದಾರಿ: ಐಎಎಸ್ ಅಧಿಕಾರಿ ಅರುಂಧತಿ ಚಂದ್ರಶೇಖರ್ ನೇತೃತ್ವದ ಸಮಿತಿಯ ಶಿಫಾರಸಿನಂತೆ ಈ ಸಂಸ್ಥೆಯ ಆಡಳಿತ ಸುಧಾರಣೆಗೆ ಹಾಗೂ ಕಾರ್ಯಚಟುವಟಿಕೆಗಳ ನಿರ್ವಹಣೆಗೆ 2024ರ ಫೆಬ್ರುವರಿಯಲ್ಲಿ ಐಎಎಸ್ ಅಧಿಕಾರಿ ಎನ್. ಮಂಜುಶ್ರೀ ಅವರನ್ನು ಆರು ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲಾಗಿತ್ತು. ನಿಗದಿತ ಅವಧಿ ಮುಕ್ತಾಯವಾದ ಬಳಿಕ ವೈದ್ಯಕೀಯ ಶಿಕ್ಷಣ ಇಲಾಖೆಯು ಆಡಳಿತಾಧಿಕಾರಿಯ ಕಾರ್ಯಾವಧಿಯನ್ನು ವಿಸ್ತರಿಸುವಂತೆ ಸರ್ಕಾರಕ್ಕೆ ಕೋರಿತ್ತು. ಅದರಂತೆ ಎನ್. ಮಂಜುಶ್ರೀ ಅವರ ಸ್ಥಾನಕ್ಕೆ ಐಎಎಸ್ ಅಧಿಕಾರಿ ನವೀನ್ ಭಟ್ ಅವರನ್ನು 2024ರ ಸೆಪ್ಟೆಂಬರ್‌ನಲ್ಲಿ ನೇಮಿಸಲಾಗಿದೆ.

ನವೀನ್ ಭಟ್ ಅವರು ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ನಿರ್ದೇಶಕರೂ ಆಗಿದ್ದು, ಎರಡು ಜವಾಬ್ದಾರಿಗಳನ್ನು ನಿಭಾಯಿಸುತ್ತಿದ್ದಾರೆ. ಇದರಿಂದಾಗಿ ಅವರಿಗೆ ಕಾರ್ಯಚಟುವಟಿಕೆಗಳ ನಿರ್ವಹಣೆ ಕಷ್ಟಸಾಧ್ಯವಾಗಿದೆ ಎನ್ನುತ್ತಾರೆ ಸಂಸ್ಥೆಯ ಸಿಬ್ಬಂದಿ.

'ನಿರ್ದೇಶಕರಾಗಿ ನೇಮಕಗೊಂಡವರಿಗೆ ಸಂಸ್ಥೆಯ ಆಡಳಿತದ ಬಗ್ಗೆ ತಿಳಿದುಕೊಳ್ಳಲು ಕೆಲವು ತಿಂಗಳು ಬೇಕಾಗುತ್ತವೆ. ಆದರೆ, ಪೂರ್ಣಾವಧಿ ನಿರ್ದೇಶಕರ ನೇಮಕಾತಿ ಪ್ರಕ್ರಿಯೆ ನಡೆಯದಿದ್ದರಿಂದ, ಸಂಸ್ಥೆಯ ಆಡಳಿತ ಯಂತ್ರ ಕುಸಿದಿದೆ. ಪ್ರಭಾರ ನಿರ್ದೇಶಕರಿಗೆ ವಿವಿಧ ಟೆಂಡರ್ ಪ್ರಕ್ರಿಯೆಗಳನ್ನು ನಡೆಸುವ ಅಧಿಕಾರ ಇಲ್ಲದಿರುವುದರಿಂದ ಔಷಧ ಕೊರತೆ ಸಮಸ್ಯೆಯು ತಲೆದೋರಿದೆ' ಎಂದು ಸಂಸ್ಥೆಯ ವೈದ್ಯರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.



ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ

ಹೊರರೋಗಿಗಳ ಸಂಖ್ಯೆ ಹೆಚ್ಚಳ

ಕ್ಯಾನ್ಸರ್ ಚಿಕಿತ್ಸೆಗಾಗಿ ಸಂಸ್ಥೆಗೆ ಸ್ಥಳೀಯರ ಜತೆಗೆ ದೇಶದ ವಿವಿಧ ರಾಜ್ಯಗಳು ಹಾಗೂ ವಿದೇಶಗಳಿಂದಲೂ ರೋಗಿಗಳು ಬರುತ್ತಿದ್ದಾರೆ. ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯ (ಸಿಎಸ್‌ಆರ್) ನೆರವಿನಿಂದ ಅತ್ಯಾಧುನಿಕ ಸೌಲಭ್ಯ ಹೊಂದಿದ ಹೊರರೋಗಿ ಘಟಕ (ಒಪಿಡಿ) ಹಾಗೂ ವಿವಿಧ ಚಿಕಿತ್ಸಾ ಘಟಕಗಳು ಸಂಸ್ಥೆಗೆ ಇತ್ತೀಚಿನ ವರ್ಷಗಳಲ್ಲಿ ಸೇರ್ಪಡೆಗೊಂಡಿವೆ. ಇದರಿಂದಾಗಿ ಚಿಕಿತ್ಸೆಗೆ ಬರುವ ರೋಗಿಗಳ ಸಂಖ್ಯೆಯೂ ಏರಿಕೆ ಕಂಡಿದ್ದು, ಪ್ರತಿ ನಿತ್ಯ ಹೊರರೋಗಿಗಳ ಸಂಖ್ಯೆ ಸಾವಿರದ ಗಡಿ ದಾಟುತ್ತಿದೆ. ಪೂರ್ಣಾವಧಿ ನಿರ್ದೇಶಕರಿಲ್ಲದ ಪರಿಣಾಮ, ಅಗತ್ಯ ಪ್ರಮಾಣದಲ್ಲಿ ವೈದ್ಯರ ಜತೆಗೆ ಸಿಬ್ಬಂದಿಯೂ ಇಲ್ಲದಿರುವುದರಿಂದ ರೋಗಿಗಳ ನಿರ್ವಹಣೆ ಸಂಸ್ಥೆಗೆ ಸವಾಲಾಗಿದೆ.

863 ರೋಗಿಗಳ ಚಿಕಿತ್ಸೆಗೆ ಸಂಸ್ಥೆ ಹೊಂದಿರುವ ಬೆಡ್‌ಗಳು	**1,767** ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ	**1,400** ನಿತ್ಯ ಭೇಟಿ ನೀಡುವ ಹೊರರೋಗಿಗಳ ಸರಾಸರಿ ಸಂಖ್ಯೆ	**3** ಲಕ್ಷ ಸಂಸ್ಥೆಯಲ್ಲಿ ಪ್ರತಿವರ್ಷ ಚಿಕಿತ್ಸೆ ಪಡೆದುಕೊಳ್ಳುವವರು

ಸದ್ಯ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಆಡಳಿತಾಧಿಕಾರಿ ನಿರ್ವಹಿಸುತ್ತಿದ್ದಾರೆ. ಪೂರ್ಣಾವಧಿ ನಿರ್ದೇಶಕರ ನೇಮಕಾತಿ ಪ್ರಕ್ರಿಯೆ ಶೀಘ್ರದಲ್ಲಿಯೇ ನಡೆಯಲಿದೆ

ಡಾ. ಸುಜಾತಾ ರಾಥೋಡ್
ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ

ರಾಜ್ಯದಲ್ಲಿ 5,765 ಚಾರ್ಜಿಂಗ್ ಕೇಂದ್ರಗಳು: ಇಂಧನ ಸಚಿವ ಕೆ.ಜೆ. ಜಾರ್ಜ್

ಇ.ವಿ ವಾಹನ: ನೋಂದಣಿ 1.5 ಲಕ್ಷಕ್ಕೆ ಏರಿಕೆ



ವಿಧಾನಸೌಧದ ಆವರಣದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಎರಡು ದಿನಗಳ ವಿಶೇಷ ಇ.ವಿ ಮೇಳ 2025ಕ್ಕೆ ಇಂಧನ ಸಚಿವ ಕೆ.ಜೆ. ಜಾರ್ಜ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸ್ಕೂಟರ್ ಓಡಿಸುವ ಮೂಲಕ ಚಾಲನೆ ನೀಡಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲ್ ಬೆಲೆ ಏರಿಕೆ, ವಾಯು ಮಾಲಿನ್ಯ ನಿಯಂತ್ರಣಕ್ಕೆ ಎಲೆಕ್ಟ್ರಿಕ್ ವಾಹನಗಳು ಪರಿಹಾರವಾಗಿದ್ದು, ವಾಹನಗಳ ಮಾರಾಟದಲ್ಲೂ ಗಣನೀಯ ಏರಿಕೆಯಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ವಿಧಾನಸೌಧದಲ್ಲಿ ಸಚಿವಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಗಾಗಿ ಶುಕ್ರವಾರ ಹಮ್ಮಿಕೊಂಡಿದ್ದ ಎರಡು ದಿನಗಳ ವಿಶೇಷ ಇ.ವಿ ಮೇಳ -2025ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಇ.ವಿ ವಾಹನಗಳ ಬಳಕೆ ಉತ್ತೇಜಿಸಲು ಚಾರ್ಜಿಂಗ್ ಕೇಂದ್ರಗಳು ಸೇರಿದಂತೆ ಮೂಲ ಸೌಕರ್ಯ ಕಲ್ಪಿಸಲಾಗಿದೆ. ಬೆಂಗಳೂರಿನಲ್ಲಿ 4,462 ಸೇರಿದಂತೆ ರಾಜ್ಯದಲ್ಲಿ 5,765 ಚಾರ್ಜಿಂಗ್ ಕೇಂದ್ರಗಳಿವೆ. 2017ರಲ್ಲಿ ವಾರ್ಷಿಕ 11 ಸಾವಿರದಷ್ಟಿದ್ದ ವಾಹನಗಳ ನೋಂದಣಿ, ಪ್ರಸ್ತುತ 1.50 ಲಕ್ಷ ತಲುಪಿದೆ ಎಂದು ಹೇಳಿದರು.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ, ಸಚಿವಾಲಯ ಉದ್ಯೋಗಿಗಳು ಮುಂಗಡ ಹಣ ಪಾವತಿಸದೆ, ಕಡಿಮೆ ಬಡ್ಡಿ ದರದ ಸಾಲ ಸೌಲಭ್ಯ ಪಡೆದು ವಾಹನ ಖರೀದಿಸಲು ಅವಕಾಶ ಕಲ್ಪಿಸಲಾಗಿದೆ. ಮೇಳದಲ್ಲಿ 16 ಇ.ವಿ ಕಂಪನಿಗಳು ಭಾಗವಹಿಸಿವೆ ಎಂದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ನಿರ್ದೇಶಕ (ತಾಂತ್ರಿಕ) ರಮೇಶ್ ಎಚ್.ಜೆ., ಪ್ರಧಾನ ವ್ಯವಸ್ಥಾಪಕ ಎಚ್.ಆರ್. ದಯಾನಂದ್ ಉಪಸ್ಥಿತರಿದ್ದರು.

ಮಾರಕಾಸ್ತ್ರ ಹಿಡಿದು ಬೈಕ್ ವ್ಹೀಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಮ್ಮನಹಳ್ಳಿಯಲ್ಲಿ ಕೆಲ ಯುವಕರು ಕೈಯಲ್ಲಿ ಮಾರಕಾಸ್ತ್ರ ಹಿಡಿದುಕೊಂಡು ಬೈಕ್‌ನಲ್ಲಿ ಸಂಚರಿಸುತ್ತಿರುವ ದೃಶ್ಯ ಜಾಲತಾಣದಲ್ಲಿ ಹರಿದಾಡುತ್ತಿದೆ.

ಕೈಯಲ್ಲಿ ಲಾಂಗು, ಮಚ್ಚು ಹಿಡಿದುಕೊಂಡು ರಸ್ತೆಯಲ್ಲಿ ಓಡಾಡಿದ್ದು, ಸಾರ್ವಜನಿಕರಲ್ಲಿ ಭಯದ ವಾತಾವರಣ ಉಂಟಾಗಿದೆ. ಬಳಿಕ ಬೈಕ್‌ನಲ್ಲಿ ಮಾರಕಾಸ್ತ್ರ ಪ್ರದರ್ಶಿಸುತ್ತಾ ವ್ಹೀಲಿ ಮಾಡಿರುವ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದೆ.

ಬೊಮ್ಮನಹಳ್ಳಿಯ ಸ್ವಿಗ್ಗಿ ಇನ್ಸ್ಟಾಮಾರ್ಟ್ ಮುಂದೆ ಈ ಘಟನೆ ನಡೆದಿದ್ದು, ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ನಾಗರಿಕರು ಪೊಲೀಸರನ್ನು ಆಗ್ರಹಿಸಿದ್ದಾರೆ.

ಕೆಚ್ಚಲು ಕೊಯ್ದ ಪ್ರಕರಣ ಮೂರು ಹಸುಗಳು ಚೇತರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆಯ ವಿನಾಯಕ ನಗರದಲ್ಲಿ ಕೆಚ್ಚಲು ಕೊಯ್ದ ಪ್ರಕರಣದ ಮೂರು ಹಸುಗಳು ಚೇತರಿಸಿಕೊಳ್ಳುತ್ತಿದ್ದು, ಪಶು ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ.

‘ಹಸುಗಳ ಆರೋಗ್ಯ ಸುಧಾರಿಸುತ್ತಿದ್ದು, ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ. ಕೆಚ್ಚಲು ಕೊಯ್ದ ಕಾರಣ ಹೆಚ್ಚು ರಕ್ತಸ್ರಾವವಾಗಿ ಹಸುಗಳು ಕೊಂಚ ಬಡಕಲಾಗಿವೆ. ಅವುಗಳಿಗೆ ಮೇವು ನೀಡಲಾಗುತ್ತಿದೆ. ಸಂಪೂರ್ಣವಾಗಿ ಗುಣಮುಖಗೊಂಡ ಬಳಿಕ ಎರಡು ಕೆಚ್ಚಲುಗಳಲ್ಲೇ ಹಾಲು ಕರೆಯಲಾಗುವುದು’ ಎಂದು ಹಸುಗಳ ಮಾಲೀಕ ಕರ್ಣ ತಿಳಿಸಿದರು.

‘ನನ್ನ ತಾತ, ತಂದೆ ಮೂರು ದಶಕಗಳಿಂದ ಇಲ್ಲೇ ವಾಸವಿದ್ದು, ಹಾಲಿನ ವ್ಯಾಪಾರದಲ್ಲಿ ತೊಡಗಿದ್ದರು. ಬಹುತೇಕ ಮುಸ್ಲಿಂ ಸಮುದಾಯದವರೇ ಹಾಲು ಖರೀದಿ ಮಾಡುತ್ತಿದ್ದರು. ಯಾರದೋ ಪ್ರಚೋದನೆಗೆ ಒಳಗಾಗಿ ಆರೋಪಿ ಕೃತ್ಯವೆಸಗಿದ್ದಾನೆ’ ಎಂದು ಹೇಳಿದರು.

‘ಹಸುಗಳ ಆರೈಕೆಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಒಂದು ಲಕ್ಷ ರೂಪಾಯಿ ನೀಡಿದ್ದಾರೆ. ನಾನು ಬದುಕಿರುವವರೆಗೂ ಹಸುಗಳನ್ನು ಸಾಕುತ್ತೇನೆ. ಕಸಾಯಿ ಖಾನೆಗೆ ಕೊಡುವುದಿಲ್ಲ. ಸಾಕಲು ಕಷ್ಟವಾದ ಸಂದರ್ಭದಲ್ಲಿ ಮಾತ್ರ ಗೋಶಾಲೆಗಳಿಗೆ ದಾನ ನೀಡುತ್ತೇನೆ’ ಎಂದರು.

ಕಲಾಕೃತಿಗಳ ಪ್ರದರ್ಶನ, ಮಾರಾಟ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು ‘ಮನೆಗೊಂದು ಕಲಾಕೃತಿ’ ಯೋಜನೆಯಡಿ ಇದೇ 18ರಿಂದ 21ರವರೆಗೆ ಕುಮಾರಕೃಪಾ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಗ್ಯಾಲರಿಗಳಲ್ಲಿ ಆಯ್ದ 600 ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ಹಮ್ಮಿಕೊಂಡಿದೆ.



ಈ ಪ್ರದರ್ಶನವು ಬೆಳಿಗ್ಗೆ 10ರಿಂದ ಸಂಜೆ 7ರವರೆಗೆ ನಡೆಯಲಿದೆ. ಅಕಾಡೆಮಿ ನಡೆಸಿದ ತರಬೇತಿ, ಕಾರ್ಯಾಗಾರ, ಶಿಬಿರಗಳಲ್ಲಿ ಯುವ ಕಲಾವಿದರು ರಚಿಸಿದ ಅತ್ಯುತ್ತಮ 600 ಕಲಾಕೃತಿಗಳನ್ನು ಆಯ್ಕೆ ಮಾಡಿ, ದರ ನಿಗದಿ ಮಾಡಲಾಗಿದೆ. ಅಕಾಡೆಮಿಯು ಶನಿವಾರ ಸಂಜೆ 5 ಗಂಟೆಗೆ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಉದ್ಘಾಟನಾ ಸಮಾರಂಭ ಹಮ್ಮಿಕೊಂಡಿದ್ದು, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಉದ್ಘಾಟಿಸಲಿದ್ದಾರೆ.

‘ಪರಿಷತ್ತಿನ ಏಳು ಗ್ಯಾಲರಿಗಳಲ್ಲಿ ಈ ಪ್ರದರ್ಶನ ನಡೆಯಲಿದೆ. ಈ ಅವಧಿಯಲ್ಲಿಯೇ ಹಣ ಪಾವತಿಸಿ, ಕಲಾ ಕೃತಿಗಳನ್ನು ಕಾಯ್ದಿರಿಸಿಕೊಳ್ಳಬಹುದಾಗಿದೆ. ಡ್ರಾಯಿಂಗ್‌ಗಳಿಗೆ ₹1 ಸಾವಿರದಿಂದ ₹2 ಸಾವಿರ ನಿಗದಿಪಡಿಸಿದರೆ, ಪೇಂಟಿಂಗ್‌ಗಳಿಗೆ ₹3 ಸಾವಿರದಿಂದ ₹30 ಸಾವಿರದವರೆಗೆ ದರ ಗೊತ್ತುಪಡಿಸಲಾಗಿದೆ. 3x3 ಅಡಿವರೆಗಿನ ಅಳತೆಯ ಕಲಾಕೃತಿಗಳಿವೆ’ ಎಂದು ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ತಿಳಿಸಿದ್ದಾರೆ.

‘ಕಲಾಕೃತಿಗಳು ಕೈಗೆಟುಕವು ದರದಲ್ಲಿ ಸಿಗಬೇಕೆಂಬ ಉದ್ದೇಶದಿಂದ ಈ ಪ್ರದರ್ಶನ ಮತ್ತು ಮಾರಾಟ ಹಮ್ಮಿಕೊಳ್ಳಲಾಗಿದೆ’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.



ಐಸಿಎಸ್‌ಇ ಬೋರ್ಡ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದಿರುವ ಎಂಬಿಸಿ ಪಬ್ಲಿಕ್ ಸ್ಕೂಲ್‌ನ ದಿಯಾ ಜೈನ್‌ಗೆ ಅನೀಶ್ ಗೋವಿಂದ್ ಚಾರಿಟಬಲ್ ಟ್ರಸ್ಟ್ 24 ಕ್ಯಾರೆಟ್‌ನ ತಲಾ 5 ಗ್ರಾಂನ ಎರಡು ಚಿನ್ನದ ನಾಣ್ಯಗಳನ್ನು ನೀಡಿ ಗೌರವಿಸಿದೆ. ರಾಯಭಾರ ಕಚೇರಿಯ ಆಡಳಿತ ನಿರ್ದೇಶಕಿ ಸವಿತಾ ವೆಂಕಟೇಶ್, ಮಕ್ಕಳ ತಜ್ಞೆ ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ, ರಾಯಭಾರ ಕಚೇರಿಯ ಉಪಾಧ್ಯಕ್ಷ ಅಭಿಷೇಕ್, ಸಲಹೆಗಾರರಾದ ವೆಂಕಟೇಶ್ ಭಾಗವಹಿಸಿದ್ದರು

27ರಿಂದ 31ರವರೆಗೆ ವಿಜ್ಞಾನ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯು ಇದೇ 27ರಿಂದ 31ರ ವರೆಗೆ ‘ಬಸವನಗುಡಿ ನ್ಯಾಷನಲ್ ಕಾಲೇಜಿನಿಂದ ಶಿಕ್ಷಣ ತಜ್ಞ ಎಚ್. ನರಸಿಂಹಯ್ಯ ಅವರ ಜನ್ಮಸ್ಥಳವಾದ ಗೌರಿಬಿದನೂರು ತಾಲ್ಲೂಕಿನ ಹೊಸೂರುವರೆಗೆ ವಿಜ್ಞಾನ ಪಾದಯಾತ್ರೆ’ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಸಮಿತಿ ಕಾರ್ಯದರ್ಶಿ ಈ. ಬಸವರಾಜು, ‘ಎಚ್. ನರಸಿಂಹಯ್ಯ ಅವರ ಜನ್ಮಶತಮಾನೋತ್ಸವದ ಪ್ರಯುಕ್ತ ಈ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. 27ರಂದು ಬೆಳಿಗ್ಗೆ 9 ಗಂಟೆಗೆ ಪಾದಯಾತ್ರೆಗೆ ಚಾಲನೆ ದೊರೆಯಲಿದೆ. ಹೆಬ್ಬಾಳ, ಯಲಹಂಕ, ರಾಜಾನುಕುಂಟೆ, ದೊಡ್ಡಬಳ್ಳಾಪುರ, ತೊಂಡೇಬಾವಿ ಹಾಗೂ ಗೌರಿಬಿದನೂರು ಮಾರ್ಗವಾಗಿ ಹೊಸೂರು ತಲುಪಲಾಗುತ್ತದೆ. ಪಾದಯಾತ್ರೆ ಅವಧಿಯಲ್ಲಿ ವೈಜ್ಞಾನಿಕ ಮನೋಭಾವ ಮೂಡಿಸುವ ಬೀದಿ ನಾಟಕ, ಸಂವಾದಗಳನ್ನು ನಡೆಸಲಾಗುತ್ತದೆ’ ಎಂದು ತಿಳಿಸಿದರು.

ಸಂಪರ್ಕ ಸಂಖ್ಯೆ: 9448957666 ಅಥವಾ 9844013068

20ರಂದು ಜನತಾ ಪ್ರಣಾಳಿಕೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಪರ್ಯಾಯ ರಾಜಕೀಯ ಚಳವಳಿಗೆ ಚಾಲನೆ ನೀಡಲು ನವಕರ್ನಾಟಕ ನಿರ್ಮಾಣ ಸಮಿತಿ ನಿರ್ಧರಿಸಿದ್ದು, ಅದರ ನೀಲನಕ್ಷೆ ‘ಜನತಾ ಪ್ರಣಾಳಿಕೆ’ ಬಿಡುಗಡೆ ಕಾರ್ಯಕ್ರಮ ಜ.20ರಂದು ಬೆಳಿಗ್ಗೆ 11ಕ್ಕೆ ಭಾರತ್ ಸ್ಕೌಟ್ಸ್ ಆ್ಯಂಡ್– ಗೈಡ್ಸ್ ಸಭಾಂಗಣದಲ್ಲಿ ನಡೆಯಲಿದೆ.



ಕೋಡಿಹಳ್ಳಿ ಚಂದ್ರಶೇಖರ್

ಸಮಿತಿಯ ಸಂಚಾಲಕ ಕೋಡಿಹಳ್ಳಿ ಚಂದ್ರಶೇಖರ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಕೃಷಿ ನೀತಿ, ಮೀಸಲಾತಿ ನಿಯಮ, ಉದ್ಯೋಗ ನೀತಿ, ಶಿಕ್ಷಣ–ಭಾಷಾ ನೀತಿ, ತೆರಿಗೆ ನೀತಿ, ಅನುದಾನ, ಅಭಿವೃದ್ಧಿ ಪರಿಹಾರ ನಿಧಿ, ಅರಣ್ಯ ನೀತಿ, ಗಡಿ ಸಮಸ್ಯೆ, ನದಿ ವಿವಾದ ಮುಂತಾದ ವಿಚಾರಗಳಲ್ಲಿ ಕರ್ನಾಟಕವು ತಾರತಮ್ಯ ಅನುಭವಿಸುತ್ತಿದೆ. ಇಲ್ಲಿನ ಸಂಸದರು ಅನ್ಯಾಯಗಳ ವಿರುದ್ಧ ಧ್ವನಿ ಎತ್ತುತ್ತಿಲ್ಲ. ಹೈಕಮಾಂಡ್‌ಗಳ ಆದೇಶಕ್ಕೆ ಗೋಣು ಆಡಿಸುವ ಗೊಂಬೆಗಳಾಗಿದ್ದಾರೆ’ ಎಂದು ಟೀಕಿಸಿದರು.

ಸಮಿತಿಯ ಸಂಚಾಲಕರಾದ ಸಿ.ಎಂ. ಇಬ್ರಾಹಿಂ, ಟಿ.ಎ. ನಾರಾಯಣ ಗೌಡ, ಎಂ. ಗೋಪಿನಾಥ್, ಮಾರಸಂದ್ರ ಮುನಿಯಪ್ಪ, ಪುಟ್ಟರಾಜು, ಮೋಹನ್‌ರಾಜು, ಶಿವರಾಂ, ಎನ್. ಮೂರ್ತಿ, ರಾಧಾಕೃಷ್ಣ, ಆರ್.ಎಂ.ಎನ್. ರಮೇಶ್, ಯೋಗೀಶ್ ಉಪಸ್ಥಿತರಿದ್ದರು.

सत्यमेव जयते
GOVERNMENT OF GUJARAT

GUJARAT
WHERE IDEAS GROW INTO GLOBAL SUCCESS STORIES





ECOSYSTEM
01
- **Uninterrupted** power, gas & water supply
- Gateway to **200+ countries**
- Over **230 industrial estates** & **3 operational SIRs**
- **49 ports, 19 airports** including **4 international**

PROACTIVE GOVERNMENT
02
- Single-window for **200+ multi-departmental approvals**
- Dedicated **Investor Facilitation Agency**
- **3-year exemption** on approvals for MSMEs

SECTORIAL LEADERSHIP
03
- National leader in sectors like **Chemical, Pharma, Textiles, Ceramics & Automotive**
- Availability of **skilled manpower**
- Strategic frame work for **emerging sectors like semiconductor, EVs and fintech**

POLICY DRIVEN APPROACH
04
- Over **20 sector-specific policies**

FUTURISTIC INFRASTRUCTURE
05
- Leading with mega projects like **DREAM City, Dholera SIR, MBSIR & PCPIR**
- Launching **India's first high speed rail project**
- Home to **GIFT City, India's 1st Smart City for global finance**

SUSTAINABILITY
06
- Poised to become the **Green Hydrogen Capital of the world**
- Leading state in **Renewable Energy Installed Capacity**
- **Deemed NA Land Status** for Renewable Energy projects

EASE OF LIVING
07
- **Among the safest states** with 4 cities in the Ease of Living's top 10
- Home to **globally acclaimed healthcare facilities**
- **Global-standard sports** and **world-class recreational facilities**
- Extensive & **well-connected public transport**

INVEST IN GUJARAT WHERE THE WORLD COMES FOR OPPORTUNITIES

‘ಕಲಾವಿದರು–ವಿದ್ವಾಂಸರು ಜೋಡೆತ್ತಿನಂತಿರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾನಪದದ ಮಹಾಪ್ರಯಾಣದಲ್ಲಿ ಕಲಾವಿದರು ಹಾಗೂ ವಿದ್ವಾಂಸರು ಜೋಡೆತ್ತುಗಳಂತೆ ನಡೆದುಕೊಂಡು ಹೋಗಬೇಕು ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ತಿಳಿಸಿದರು.

ಬೆಂಗಳೂರಿನ ಕೆ.ನಾರಾಯಣಪುರದಲ್ಲಿರುವ ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಕನ್ನಡ ವಿಭಾಗದ ವತಿಯಿಂದ ಕರ್ನಾಟಕ ಜಾನಪದ ಅಕಾಡೆಮಿ ಹಾಗೂ ಅಮೆರಿಕದ ಕನ್ನಡ ಸಾಹಿತ್ಯ ರಂಗದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ‘ಕನ್ನಡ ಶಿಷ್ಟ ಪರಂಪರೆ ಮತ್ತು ಜಾನಪದ ಲೋಕ’ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಇಂದು ರಿಯಾಲಿಟಿ ಅಲ್ಲದ ರಿಯಾಲಿಟಿ ಹೆಸರಿನ ಶೋಗಳು ನಮ್ಮನ್ನು ದಿಕ್ಕು ತಪ್ಪಿಸುತ್ತಿವೆ. ಸಂಬಂಧಗಳು ನುಚ್ಚುನೂರಾಗುತ್ತಿವೆ. ಇದರ ನಡುವೆ ಸತ್ಯದ ಸೋಗಿನ ಸುಳ್ಳುಗಳು, ಥಳುಕು ಬಳುಕುಗಳು, ನಯವಂಚಕತನಗಳು ಮೆರೆದಾಡುತ್ತಿವೆ. ಸತ್ಯವನ್ನು, ಸಮತೆಯನ್ನು, ಜೀವಪರತೆಯನ್ನು ಜನಪರತೆಯನ್ನು ಬುಲ್ಡೋಜ್ ಮಾಡುವಂಥ ದುರಂತ ಕಾಲದಲ್ಲಿ ನಾವಿದ್ದೇವೆ’ ಎಂದು ಬೇಸರ ವ್ಯಕ್ತಪಡಿಸಿದರು.



ಮುಖವೀಣೆ ಕಲಾವಿದ ಮುಖವೀಣೆ ಆಂಜಿನಪ್ಪ ಅವರು ಏಕಕಾಲದಲ್ಲಿ ಹಲವು ವಾದ್ಯಗಳನ್ನು ನುಡಿಸಿದರು

ಕನ್ನಡ ಸಾಹಿತ್ಯ ರಂಗದ ಆಡಳಿತ ಮಂಡಳಿಯ ಅಧ್ಯಕ್ಷ ಮೈ.ಶ್ರೀ. ನಟರಾಜ್ ಅವರು ಅಮೆರಿಕದ ಡಲ್ಲಾಸ್‌ನಿಂದ ಆನ್‌ಲೈನ್ ಪ್ಲಾಟ್‌ಫಾರ್ಮ್ ಮೂಲಕ ಮಾತನಾಡಿ, ‘ಜಾನಪದವೆಂಬುದು ಜಗದಗಲ. ಅಮೆರಿಕದ ಮೂಲನಿವಾಸಿಗಳು ಮತ್ತು ಬುಡಕಟ್ಟು ಜನಾಂಗಗಳು ಎದುರಿಸಿದ ಸಮಸ್ಯೆಗಳು, ಸವಾಲುಗಳು ಬೇರೆಯಲ್ಲ. ಭಾರತದ ಆದಿವಾಸಿಗಳ ಸಮಸ್ಯೆ ಮತ್ತು ಸವಾಲುಗಳು ಬೇರೆಯಲ್ಲ. ತುಲನೆ ಮಾಡಿ ನೋಡಿದಾಗ ವಿವಿಧ ದೇಶಗಳ ಮೂಲನಿವಾಸಿಗಳ ಸಂಗ್ರಾಮದಲ್ಲಿ ಸಾಮ್ಯವಿದೆ’ ಎಂದು ಹೇಳಿದರು.

ಪ್ರಧಾನಗೋಷ್ಠಿಯಲ್ಲಿ ಕನ್ನಡ ಪ್ರಾಧ್ಯಾಪಕ ಡಿ.ಕೆ.ಚಿತ್ತಯ್ಯ ಪೂಜಾರ್ ವಿಚಾರ ಮಂಡನೆ ಮಾಡಿದರು. ‘ಜಾನಪದ-ಶಿಷ್ಟ ಕಲಾಜಗತ್ತು ಮತ್ತು ಸ್ತ್ರೀ ಅಭಿವ್ಯಕ್ತಿ’ ಕುರಿತು ಜನಪದ ವಿದ್ವಾಂಸೆ ಸುಜಾತ ಅಕ್ಕಿ ವಿಚಾರ ಮಂಡಿಸಿದರು.‘ಜಾನಪದ ವಿಶ್ವಪಥ’ ಎರಡು ಸಂಪುಟಗಳನ್ನು ಬಿಡುಗಡೆ ಮಾಡಲಾಯಿತು.

ಮುಖವೀಣೆ ಕಲಾವಿದ ಮುಖವೀಣೆ ಆಂಜಿನಪ್ಪ ಅವರು ಏಕಕಾಲದಲ್ಲಿ ಹಲವು ವಾದ್ಯಗಳನ್ನು ನುಡಿಸುವ ಮೂಲಕ ನಾದಪ್ರದರ್ಶನ ನೀಡಿದರು. ಹಾಡುಗಾರ ಗಂಗಣ್ಣ ಅವರು ಮಂಟೇಸ್ವಾಮಿ ಹಾಗೂ ಜಾನಪದ ಹಾಡುಗಳನ್ನು ಪ್ರಸ್ತುತಪಡಿಸಿದರು.

ಅಮ್ಯೂಸ್‌ಮೆಂಟ್ ಪಾರ್ಕ್ ಟೆಂಡರ್: ಬಿಡ್‌ಗೆ ನಿರಾಸಕ್ತಿ!

ಮಂಡ್ಯ: ಕೃಷ್ಣರಾಜಸಾಗರ ಅಣೆಕಟ್ಟೆಯ ಬೃಂದಾವನ ಉದ್ಯಾನದಲ್ಲಿ ‘ಅಮ್ಯೂಸ್‌ಮೆಂಟ್ ಪಾರ್ಕ್’ ಸ್ಥಾಪಿಸುವ ರಾಜ್ಯ ಸರ್ಕಾರದ ಬಹು ನಿರೀಕ್ಷಿತ ಯೋಜನೆಗೆ ಎರಡು ಬಾರಿ ಟೆಂಡರ್ ಕರೆದರೂ ಟೆಂಡರ್‌ದಾರರು ಭಾಗವಹಿಸಿಲ್ಲ. ಹೀಗಾಗಿ ಯೋಜನೆಗೆ ಆರಂಭದಲ್ಲೇ ವಿಘ್ನ ಎದುರಾಗಿದೆ.

ಶ್ರೀರಂಗಪಟ್ಟಣ ತಾಲ್ಲೂಕಿನ ಬೃಂದಾವನ ಉದ್ಯಾನವನ್ನು ವಿಶ್ವದರ್ಜೆಯ ಪ್ರವಾಸೋದ್ಯಮ ಕೇಂದ್ರವನ್ನಾಗಿ ಉನ್ನತೀಕರಿಸಲು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಯೋಜನೆಯನ್ನು ಸಾರ್ವಜನಿಕ- ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿಯಲ್ಲಿ 198 ಎಕರೆ ಪ್ರದೇಶದಲ್ಲಿ ₹2,663 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಈಚೆಗೆ ಅನುಮೋದನೆಯನ್ನೂ ನೀಡಿತ್ತು.

2024ರ ಸೆಪ್ಟೆಂಬರ್ 12ರಿಂದ ನವೆಂಬರ್ 11ರವರೆಗೆ ಮೊದಲ ಟೆಂಡರ್ ಮತ್ತು 2024ರ ಡಿಸೆಂಬರ್ 2ರಿಂದ 2025ರ ಜನವರಿ 16ರವರೆಗೆ ಎರಡನೇ ಬಾರಿ ಟೆಂಡರ್ ಕರೆಯಲಾಗಿತ್ತು. ಯಾವುದೇ ಬಿಡ್‌ಗಳು ಸ್ವೀಕೃತವಾಗದೆ ಮತ್ತೆ ಟೆಂಡರ್ ಅವಧಿ ಜನವರಿ 23ರವರೆಗೆ ವಿಸ್ತರಣೆಯಾಗಿದೆ.

459 ಪ್ರಾಧ್ಯಾಪಕರಿಗೆ ಯುಜಿಸಿ ವಿದ್ಯಾರ್ಹತೆ ಇಲ್ಲ; ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿದ್ಯಾಲಯ ಅನುದಾನ ಆಯೋಗ ನಿಗದಿಪಡಿಸಿದ ವಿದ್ಯಾರ್ಹತೆಯ ನಿಯಮಗಳನ್ನು ಮೀರಿ ಉನ್ನತ ಶಿಕ್ಷಣ ಇಲಾಖೆ 459 ಸಹಾಯಕ ಪ್ರಾಧ್ಯಾಪಕರನ್ನು ನೇಮಕ ಮಾಡಿಕೊಂಡಿದ್ದು, ಅಂಥವರಿಗೆ ಯುಜಿಸಿ ವೇತನ ಶ್ರೇಣಿ ನೀಡುತ್ತಿರುವುದಕ್ಕೆ ಮಹಾಲೇಖಪಾಲರ ವರದಿ ಆಕ್ಷೇಪ ವ್ಯಕ್ತಪಡಿಸಿದೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇದ್ದ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ 2007–08ನೇ ಸಾಲಿನಲ್ಲಿ ಹಾಗೂ ಇತರೆ ವರ್ಷಗಳಲ್ಲಿ ಅನುದಾನಿತ ಕಾಲೇಜುಗಳು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವಾಗ ಯುಜಿಸಿ ನಿಯಮಕ್ಕೆ ವಿರುದ್ಧವಾಗಿ ಎಂ.ಫಿಲ್ ಪೂರೈಸಿದ್ದ ಅಭ್ಯರ್ಥಿಗಳನ್ನೂ ನೇಮಕ ಮಾಡಿಕೊಂಡಿವೆ. ಸರ್ಕಾರಿ ಕಾಲೇಜುಗಳಲ್ಲಿ 225 ಮತ್ತು ಅನುದಾನಿತ ಕಾಲೇಜುಗಳಲ್ಲಿ 234 ಅಭ್ಯರ್ಥಿಗಳು ಯುಜಿಸಿ ನಿಗದಿಪಡಿಸಿದ ಅರ್ಹತೆ ಹೊಂದಿಲ್ಲ ಎನ್ನುವುದನ್ನು ಲೆಕ್ಕ ಪರಿಶೋಧನಾ ವರದಿ ಉಲ್ಲೇಖಿಸಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರಾಗಿ ಕೆಲಸ ಮಾಡುವವರು ಸ್ನಾತಕೋತ್ತರ ಪದವಿಯ ಜತೆಗೆ ಎನ್‌ಇಟಿ ಇಲ್ಲವೇ ಕೆ-ಸೆಟ್ ತೇರ್ಗಡೆಯಾಗಿರಬೇಕು, ಪಿಎಚ್.ಡಿ ಪಡೆದಿರಬೇಕು.

‘74 ಸರ್ಕಾರಿ ಹಾಗೂ 21 ಅನುದಾನಿತ ಸಂಸ್ಥೆಗಳಲ್ಲಿ ಯುಜಿಸಿ ನಿಗದಿತ ವಿದ್ಯಾರ್ಹತೆ ಇಲ್ಲದ ಸಹಾಯಕ ಪ್ರಾಧ್ಯಾಪಕರು ಕೆಲಸ ಮಾಡುತ್ತಿದ್ದಾರೆ. ಪಟ್ಟಿ ತರಿಸಿಕೊಳ್ಳಲಾಗಿದ್ದು, ಪರಿಶೀಲನೆ ನಡೆಸಲಾಗುತ್ತದೆ. ನಂತರ ಮುಂದಿನ ಕ್ರಮಕ್ಕೆ ಸರ್ಕಾರಕ್ಕೆ ಕಳುಹಿಸಲಾಗುವುದು’ ಎಂದು ಕಾಲೇಜು ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಫ್ರಿಜ್ ರಿಪೇರಿ: ₹ 32 ಸಾವಿರ ವಂಚನೆ

ಬೆಂಗಳೂರು: ಫ್ರಿಜ್ ರಿಪೇರಿಗೆ ಬಂದಿದೆ ಎಂದು ಸುಳ್ಳು ಹೇಳಿ ತಮ್ಮ ಬಳಿ ಸರ್ವೀಸ್ ಮಾಡಿಸಿಕೊಂಡರೆ ಹೆಚ್ಚುವರಿಯಾಗಿ ಗಿಫ್ಟ್ ಕೊಡುವುದಾಗಿ ನಂಬಿಸಿ ವೃದ್ಧರೊಬ್ಬರಿಗೆ ₹ 32 ಸಾವಿರ ವಂಚಿಸಿರುವ ಘಟನೆ ನಗರದಲ್ಲಿ ನಡೆದಿದೆ.

73 ವರ್ಷದ ಗಂಗರಾಜು ಅವರು ನೀಡಿದ ದೂರಿನ ಮೇರೆಗೆ ರಾಜಾಜಿನಗರ ಪೊಲೀಸ್ ಠಾಣೆಯಲ್ಲಿ ಅಪರಿಚಿತ ವ್ಯಕ್ತಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

‘ಹಲವು ವರ್ಷಗಳಿಂದ ರಾಜಾಜಿನಗರ 5ನೇ ಹಂತದಲ್ಲಿ ವಾಸವಾಗಿರುವ ಗಂಗರಾಜು ಅವರ ನಿವಾಸಕ್ಕೆ ಜ.13ರಂದು ಆರೋಪಿ ಬಂದಿದ್ದಾನೆ. ‘ನಿಮ್ಮ ಮನೆಯ ಫ್ರಿಜ್ ರಿಪೇರಿ ಮಾಡಿದ್ದು ನಾನೇ. ಹೇಗಿದೆ’ ಎಂದು ಹೇಳಿದ್ದಾನೆ. ಈತನೇ ರಿಪೇರಿ ಮಾಡಿರಬಹುದು ಎಂದು ಭಾವಿಸಿ ಚೆನ್ನಾಗಿದೆ ಎಂದು ಉತ್ತರ ನೀಡಿದ್ದರು. ಫ್ರಿಜ್ ಪರಿಶೀಲನೆ ನೆಪದಲ್ಲಿ ಕೂಲರ್ ಹೋಗಿದೆ ಎಂದು ನಂಬಿಸಿ ಆರೋಪಿಯು ₹ 32 ಸಾವಿರ ಪಡೆದು ಪರಾರಿಯಾಗಿದ್ದಾನೆ’ ಎಂದು ಪೊಲೀಸರು ಹೇಳಿದರು.

ಕೆಲ ಹೊತ್ತಿನ ಬಳಿಕ ಮಗ ಮನೆಗೆ ಬಂದಾಗ ಗಂಗರಾಜು ಅವರು ಘಟನೆ ವಿವರಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಆರೋಪಿ ಪತ್ತೆ ಕಾರ್ಯ ನಡೆಸುತ್ತಿದ್ದಾರೆ.

ಮೆಟ್ರೊ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ನಮ್ಮ ಮೆಟ್ರೊ’ ನೇರಳೆ ಮಾರ್ಗದಲ್ಲಿ ಹಳಿ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜ.19ರಂದು ಬೆಳಿಗ್ಗೆ 7ರಿಂದ ಬೆಳಿಗ್ಗೆ 10ರವರೆಗೆ ಮೆಜೆಸ್ಟಿಕ್ ಮೆಟ್ರೊ ನಿಲ್ದಾಣದಿಂದ ಇಂದಿರಾನಗರ ನಿಲ್ದಾಣದವರೆಗೆ ಮೆಟ್ರೊ ಸಂಚಾರ ಸ್ಥಗಿತಗೊಳ್ಳಲಿದೆ.

ಕಬ್ಬನ್ ಪಾರ್ಕ್ ಮತ್ತು ಎಂ.ಜಿ ರಸ್ತೆ ಮೆಟ್ರೊ ನಿಲ್ದಾಣಗಳ ನಡುವೆ ನಿರ್ವಹಣಾ ಕಾಮಗಾರಿ ನಡೆಯಲಿದೆ.

ನೇರಳೆ ಮಾರ್ಗದಲ್ಲಿ ಚಲ್ಲಘಟ್ಟ–ನಾಡಪ್ರಭು ಕೆಂಪೇಗೌಡ ನಿಲ್ದಾಣ ಮೆಜೆಸ್ಟಿಕ್ ಹಾಗೂ ವೈಟ್‌ಫೀಲ್ಡ್ – ಇಂದಿರಾನಗರ ಮೆಟ್ರೊ ನಿಲ್ದಾಣಗಳ ನಡುವೆ ಬೆಳಿಗ್ಗೆ 7ರಿಂದಲೇ ಮೆಟ್ರೊ ಸಂಚಾರ ಇರಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಬಿಡಿಎ: ಇಂದು ಫ್ಲ್ಯಾಟ್ ಮೇಳ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಜನವರಿ 18ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ಕಣಿಮಿಣಿಕೆ ವಸತಿ ಸಮುಚ್ಚಯದಲ್ಲಿ ಫ್ಲ್ಯಾಟ್ ಮೇಳವನ್ನು ಆಯೋಜಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಬಾಂಧವ್ಯ ಬೆಸೆಯುವ ಮದುವೆ ಹಬ್ಬ





ಮದುವೆ ಹಬ್ಬ ಎಂಬ ಪದಗಳೇ ಆ ಸಂಭ್ರಮವನ್ನು ಎತ್ತಿ ಹಿಡಿಯುತ್ತವೆ. ಎರಡು ಜೀವಗಳು ಒಂದಾಗಿ, ಕುಟುಂಬ ಆರಂಭಿಸುವ ಮೊದಲು ಎರಡೂ ಕುಟುಂಬಗಳ ನಡುವಿನ ಸಡಗರ, ಸಂಬಂಧಗಳನ್ನು ಸಂಭ್ರಮಿಸವ ಹಬ್ಬವಾಗಿದೆ. ಜೀವನ ಸಂಗಾತಿಯಾಗಲಿರುವ ವಧು ಮತ್ತು ವರರು ತಮ್ಮನ್ನು ತಾವು ಸಜ್ಜುಗೊಳಿಸುವ, ಮದುವೆ ಆಯೋಜನೆಗೆ ಮದುಮಕ್ಕಳ ಬಾಸಿಂಗದಿಂದ ಊಟದವರೆಗೂ, ಹುಡುಗ, ಹುಡುಗಿಯರು ಪರಸ್ಪರ ಒಪ್ಪಿದ ನಂತರ, ಮಧುಚಂದ್ರದವರೆಗೂ, ಮದುವೆಯಾಗುವ ಬಗೆ ಹೇಗೆ? ನೋಂದಣಿ ಮಾಡಿಸುವುದೇಕೆ ಹೀಗೆ ಮದುವೆಯೆಂಬ ಬಂಧನ ಮತ್ತು ಬಾಂಧವ್ಯದ ಒಳಹೊರಗನ್ನು ಮದುವೆ ಹಬ್ಬ ಎಂಬ ಸರಣಿಲೇಖನಗಳಲ್ಲಿ ಪ್ರಜಾವಾಣಿಯ ತಂಡ ನಿರೂಪಿಸಿದೆ.

ಹೊಸಬಾಳಿನ ಹೊಸ್ತಿಲಲ್ಲಿರುವ ಹುಡುಗ ಹುಡುಗಿ ವಧು ವರರಾಗಿ ಬದಲಾಗುವ ಬಗೆ ಹೇಗೆ? ಅಡಿಯಿಂದ ಮುಡಿಯವರೆಗೂ ಅಲಂಕಾರವಷ್ಟೇ ಅಲ್ಲ, ಕಾಳಜಿ ತೆಗೆದುಕೊಳ್ಳುವ ಬಗೆಯ ಕುರಿತು ಲೇಖನಗಳು ಈ ಸರಣಿಯಲ್ಲಿವೆ. ಮದುವೆಯಂಬುದು ಬರಿಯ ಸಮಾರಂಭವಲ್ಲ. ಇದೊಂದು ಹಬ್ಬವಿದ್ದಂತೆ. ತಿಂಗಳುಗಳಷ್ಟು ತಯಾರಿ ಮಾಡಿದರೂ ಕೊನೆಯ ಗಳಿಗೆಯವರೆಗೂ ಏನೋ ಒಂದು ಕೊರತೆ ಕಾಣುತ್ತಲೇ ಇರುತ್ತದೆ. ಕಾಡುತ್ತಲೇ ಇರುತ್ತದೆ. ಎರಡು ಜೀವಗಳು ಒಟ್ಟಿಗೆ ಬಾಳುವ, ಎರಡು ದೇಹಗಳು ಒಂದಾಗಿ ಬೆಸೆಯುವ ಈ ಬಾಂಧವ್ಯಕ್ಕೆ ವಧುವರರು ಸಜ್ಜಾಗುವ ಹಲವಾರು ಹಂತಗಳನ್ನು ವಿವರಿಸಲಾಗಿದೆ.

ಚರ್ಮದ ಕಾಂತಿ ಹೆಚ್ಚಿಸುವುದರಿಂದ ಆರಂಭಿಸಿ, ಮದುವೆಯ ದಿನದ ಮೇಕಪ್, ಮೇಕಪ್ ತೆಗೆಯುವವರೆಗೂ, ಹುಡುಗ ಹುಡುಗಿಯರಿಗೆ ಕೊಡುವ ಉಡುಗೊರೆಯಿಂದ ಆರಂಭಿಸಿ, ಬಂದ ಅತಿಥಿಗಳಿಗೆ ನೀಡುವ ಕೊಡುಗೆಯವರೆಗೂ, ಸೀರೆ ಆಯ್ಕೆಯಿಂದ ಉಡುವ ಬಗೆಯವರೆಗೂ ಎಲ್ಲದಕ್ಕೂ ಇಲ್ಲಿವೆ ಮಾಹಿತಿ ಮತ್ತು ವಿಸ್ತೃತ ವಿವರಗಳು. ಮೇಕಪ್ ತೆಗೆಯುವವರೆಗೂ, ಕಣ್ಣು, ಕೇಶವಿನ್ಯಾಸ, ತುಟಿ, ನಖಗಳ ಅಲಂಕಾರ, ವಧುವಿನ ಜೊತೆಗೆ ಹೊರಡುವ ಎಳೆಬಾಲೆಯರ ಅಂಗಿ ಟ್ರೆಡಿಷನ್‌ನಿಂದ ಟ್ರೆಂಡ್‌ವರೆಗೂ ಇಲ್ಲಿವೆ ಬರೆಹಗಳು.

ಪ್ರಸ್ತುತಿ ಪಿವಿ ಬ್ರ್ಯಾಂಡ್ ಸ್ಪಾಟ್

‘ನಮ್ಮ ಮನೆಯಂಗಳದ ಹೂವೊಂದು’ ಎಂದು ಹಾಡುತ್ತ, ಮನೆ ಮಗಳನ್ನು ಹೊಸ ತಲೆಮಾರಿನ ಸೃಷ್ಟಿಗಾಗಿ ಕಳುಹಿಸಿಕೊಡುವ ಮದುವೆ ಬದುಕಿನ ಹೊಸ ಹಾಡಿನ ನಾಂದಿ. ಈ ನಾಂದಿಪದ ಹೇಗಿರುತ್ತವೆ? ಮದುಮಗನ ಅಲಂಕಾರ ಹೇಗೆ? ಮಗ ಮದುವಣಿಗನಾದ ಸಂಭ್ರಮದಲ್ಲಿ ಅಮ್ಮ, ಸೋದರತ್ತೆಯರು ಏನೆಲ್ಲ ಹಾಡುತ್ತಾರೆ? ಹಾಡಿಲ್ಲದ ಮದುವೆಯ ಸಂಭ್ರಮ ಸದಾ ಅಪೂರ್ಣ. ಅದಕ್ಕೇ ಸೋಬಾನೆ ಪದಗಳಿಂದ ಆರಂಭವಾಗಿ, ಇತ್ತೀಚಿನ ಟ್ರೆಂಡ್ ಸಂಗೀತ್ ಕಾರ್ಯಕ್ರಮದವರೆಗೂ ತಯಾರಿ ಹೇಗಿರಬೇಕು? ಏನುಡಬೇಕು, ಯಾವ ಹಾಡುಗಳು ಚಂದ, ಹೆಜ್ಜೆಹಾಕಲು ಎಷ್ಟು ಲಯಬದ್ಧವಾಗಿವೆ ಎಂಬ ಮಾಹಿತಿಗಳೆಲ್ಲ ಈ ಸರಣಿ ಲೇಖನಗಳಲ್ಲಿವೆ.

ವಧು ವರರ ಮೇಕಪ್ ಕುರಿತು ಸಾಕಷ್ಟು ಮಾಹಿತಿಗಳಿವೆ. ವಧು–ವರರ ಅಕ್ಕಪಕ್ಕ ನಿಲ್ಲುವ ಅಕ್ಕತಂಗಿಯರು, ಅತ್ತೆ ಮಾವಂದಿರು, ಅವ್ವಂದಿರು ಇವರೆಲ್ಲ ಚಂದಗಾಣುವುದು ಹೇಗೆ? ಈ ಕುರಿತೂ ನಮ್ಮ ತಂಡ ಸಾಕಷ್ಟು ಸಲಹೆಗಳನ್ನು, ಟಿಪ್ಸ್‌ಗಳನ್ನು ನೀಡಿದೆ. ಮಾಂಗಲ್ಯ ಹೇಗಿರಬೇಕು? ಎಷ್ಟುದ್ದ ಇರಬೇಕು? ವಂಕಿಯುಂಗುರದಿಂದ ಆರಂಭಿಸಿ, ವಧುವಿನ ಕಾಲ್ಗೆಜ್ಜೆ ತಾಳಕೆ ವರನ ಹೃದಯ ಮಿಡಿಯುವಾಗ, ಕಾಲುಂಗರ ತೊಟ್ಟು ಬದುಕಿನೊಳಗೆ ಹೆಜ್ಜೆಯಿಡುವ ಹುಡುಗಿಗೆ ಕಾಲುಂಗುರ ಹೇಗಿರಬೇಕು? ಇವಕ್ಕೂ ಇಲ್ಲಿವೆ ಸಲಹೆಗಳು. ಆಪ್ತ ಮಾತುಗಳು.

ಮದುವೆಯೆಂದರೆ ಸೀರೆ ಮಾತ್ರ ಎಂಬ ಕಾಲವೊಂದಿತ್ತು. ಈಗ ಸರಭರಸರಭರ ಸದ್ದು ಮಾಡುವ ಸಂಭ್ರಮದ ಲೆಹಂಗಾ, ಘಾಗ್ರಾ, ಚೋಲಿಗಳ ಕುರಿತೂ ಸ್ಟೈಲ್‌ನಿಂದ ಆರಂಭಿಸಿ ಶೈನ್ ಆಗುವುದು ಹೇಗೆ ಎಂಬ ಕುರಿತೂ ತಂಡದ ಪರಿಣತರು ಸಾಕಷ್ಟು ಸಲಹೆಗಳನ್ನು ನೀಡಿದ್ದಾರೆ. ಮದುವೆಯ ಸೀರೆ ಸಂಗ್ರಹದಲ್ಲಿ ಅದೆಷ್ಟು ಬಗೆಯ ಭಾರತೀಯ ವಸ್ತ್ರವೈಭವನ್ನು ಖರೀದಿಸಬಹುದು ಎಂಬುದಕ್ಕೆ ಉದ್ದಾನುದ್ದ ಪಟ್ಟಿಯನ್ನೇ ನೀಡಲಾಗಿದೆ.

ಸಾಮಾನ್ಯವಾಗಿ ಉಡುಗೆ ತೊಡುಗೆ ಬಗ್ಗೆ ಕೊಡುವಷ್ಟು ಗಮನವನ್ನು ನಾವು ಆ್ಯಕ್ಸೆಸರಿಗಳ ಕುರಿತು ನೀಡುವುದಿಲ್ಲ. ವರ ಎಂಥ ವಾಚು ಬಳಸಬೇಕು? ಯಾವ ಬೆಲ್ಟ್ ಕೊಳ್ಳಬೇಕು? ಯಾವ ಶೂಸು, ಬೂಟು, ಚಪ್ಪಲಿಗಳನ್ನು ಕೊಳ್ಳಬೇಕು ಈ ಮಾಹಿತಿಯೂ ಈ ಮದುವೆ ಹಬ್ಬ ಸರಣಿ ಲೇಖನಗಳಲ್ಲಿವೆ.

ಹಿರಿಜೀವಗಳಿಲ್ಲದ ಮದುವೆಯೂ ಇವೆಯೇ? ಹಿರಿಜೀವಗಳು ತಮ್ಮ ಹಾರೈಕೆಗಳು ಶಾಶ್ವತವಾಗಿರಲಿ ಎಂಬಂತೆ ಬೆಳ್ಳಿ, ಚಿನ್ನದ ಒಡವೆಗಳನ್ನು ಉಡುಗೊರೆಯಾಗಿ ಕೊಡುವುದಿಲ್ಲವೇ.. ಅದರಂತೆಯೇ ಮದುವೆಯ ಕೈಪಿಡಿಯಾಗಿ, ಮದುವೆಗೆ ಮೊದಲು ಫೋಟೊ ಶೂಟ್‌ನ ತಾಣಗಳಿಂದ ಆರಂಭಿಸಿ, ಮದುವೆಯ ಊಟ, ರಿಟನ್ ಗಿಫ್ಟ್ ಕೊಡುವುದೇನು?

ಕೊಡುವುದೇನು, ಕೊಂಬುದೇನು ಎಂಬ ಕವಿವಾಣಿಯಂತೆ, ಪ್ರೀತಿ, ಪ್ರೇಮದಿಂದ ಬಾಂಧವ್ಯ ಬೆಸೆಯುವ ಬಗೆಬಗೆಯ ಲೇಖನಗಳು ಈ ಸರಣಿಯಲ್ಲಿವೆ. ‘ಮದುವೆ ಹಬ್ಬ’ ಒಮ್ಮೆ ಕ್ಲಿಕ್ ಮಾಡಿ, ಹೊಸ ನೆನಪುಗಳನ್ನು ಸೃಷ್ಟಿಸಲು, ನಿಮ್ಮ ನೆನಪುಗಳನ್ನು ತಾಜಾಗೊಳಿಸಲು ಈ ಸರಣಿ ಒಂದು ನೆಪವಾಗಲಿದೆ. ಹೊಸದಾಗಿ ಮದುವೆಯಾಗಲಿರುವವರಿಗೆ, ಟ್ರೆಡಿಷನ್ ಹೇಳಿಕೊಟ್ಟರೆ, ಮದುವೆ ಮಾಡಲಿರುವ ಹಿರಿಯ ಜೀವಗಳಿಗೆ ಟ್ರೆಂಡ್ಸ್ ಹೇಳುತ್ತಿದೆ. ಮದುವೆ ಹಬ್ಬದ ಹಿರಿಕಿರಿಯರೆಲ್ಲರಿಗೂ ಅಗತ್ಯದ ಮಾಹಿತಿ ನೀಡಲಿದೆ ಈ ‘ಮದುವೆ ಹಬ್ಬ’

‘ಚಿಕಿತ್ಸೆ ನೀಡದಿದ್ದರೆ ಪಟ್ಟಿಯಿಂದ ಹೊರಕ್ಕೆ’

‘ಕೆಎಸ್‌ಆರ್‌ಟಿಸಿ ಆರೋಗ್ಯ’ • ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ಸಿಗುತ್ತಿಲ್ಲವೆಂದು ಹರಿದಾಡಿದ ಆಡಿಯೊ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಎಸ್‌ಆರ್‌ಟಿಸಿಆರೋಗ್ಯ’ ಯೋಜನೆಯಡಿ ಒಡಂಬಡಿಕೆ ಮಾಡಿಕೊಂಡಿರುವ ಆಸ್ಪತ್ರೆಗಳಲ್ಲಿ ಒಪ್ಪಂದದಂತೆ ಚಿಕಿತ್ಸೆ ನೀಡದೇ ಇದ್ದರೆ ಅಂತಹ ಆಸ್ಪತ್ರೆಗಳನ್ನು ಪಟ್ಟಿಯಿಂದ ಕೈಬಿಡಲಾಗುವುದು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ನಗದುರಹಿತ ವೈದ್ಯಕೀಯ ಚಿಕಿತ್ಸಾ ಯೋಜನೆ ‘ಕೆಎಸ್‌ಆರ್‌ಟಿಸಿ ಆರೋಗ್ಯ’ ಸರಿಯಾಗಿ ಅನುಷ್ಠಾನಗೊಂಡಿಲ್ಲ. ಚಿಕಿತ್ಸೆ ಉಚಿತವಾಗಿ ಸಿಗುತ್ತಿಲ್ಲ. ಶೇ 20ರಷ್ಟು ರಿಯಾಯಿತಿ ಮಾತ್ರ ಸಿಗುತ್ತಿದೆ ಎಂಬ ಆಡಿಯೊ ಹರಿದಾಡಿದ್ದು, ಈ ಬಗ್ಗೆ ಸಂಸ್ಥೆಯ ಅಧಿಕಾರಿಗಳು ಪ್ರತಿಕ್ರಿಯಿಸಿದ್ದಾರೆ.

‘ಜನವರಿ 6ರಂದು ಈ ಯೋಜನೆ ಜಾರಿಯಾಗಿತ್ತು. ಅಲ್ಲಿಂದ ಇಲ್ಲಿಯವರೆಗೆ ಕೆಎಸ್‌ಆರ್‌ಟಿಸಿ ನೌಕರರು ಇಲ್ಲವೇ ಅವರ ಅವಲಂಬಿತರು ಸೇರಿ 1200ಕ್ಕೂ ಹೆಚ್ಚು ಜನರು ಚಿಕಿತ್ಸೆ ಪಡೆದಿದ್ದಾರೆ. ಯೋಜನೆಯ ಆರಂಭದಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಾಗುವುದು ಸಹಜ’ ಎಂದು ಸ್ಪಷ್ಟಪಡಿಸಿದ್ದಾರೆ.

ಆಡಿಯೊದಲ್ಲೇನಿದೆ?: ‘ಕೆಎಸ್‌ಆರ್‌ಟಿಸಿ ಆರೋಗ್ಯ’ ಯೋಜನೆಯ ಒಡಂಬಡಿಕೆಯಲ್ಲಿರುವ ಮಂಡ್ಯದ ಆಸ್ಪತ್ರೆಯಲ್ಲಿ ಕೆಎಸ್‌ಆರ್‌ಟಿಸಿಯ ನೌಕರರೊಬ್ಬರು ಹೆರಿಗೆಗಾಗಿ ಅವರ ಪತ್ನಿಯನ್ನು ದಾಖಲಿಸಲು ಕರೆದೊಯ್ದಾಗ ಉಚಿತ ಇಲ್ಲ ಎಂದು ಗೊತ್ತಾಗಿ ಆಸ್ಪತ್ರೆಯ ಮೇಲಧಿಕಾರಿಯೊಂದಿಗಿನ ಫೋನ್ ಕರೆಯ ಸಂಭಾಷಣೆ ಆಡಿಯೊದಲ್ಲಿದೆ. ‘ಸಹಜ ಹೆರಿಗೆಗೆ ₹8,000, ಸಿಸೇರಿಯನ್‌ಗೆ ₹12,000 ಮಾತ್ರ ಕೆಎಸ್‌ಆರ್‌ಟಿಸಿಯಿಂದ ವಿಮಾ ಮೊತ್ತ ಸಿಗುತ್ತದೆ. ಇದು ಒಟ್ಟು ವೆಚ್ಚದ ಶೇ 20ರಷ್ಟು. ಉಳಿದ ಮೊತ್ತವನ್ನು ನೌಕರರು ಭರಿಸಬೇಕು’ ಎಂಬುದು ಆಡಿಯೊದಲ್ಲಿದೆ.

ಯೋಜನೆ ಪರ ವಿಡಿಯೊ: ‘ಕೆಎಸ್‌ಆರ್‌ಟಿಸಿ ಆರೋಗ್ಯ’ ಯೋಜನೆಯಿಂದ ಅನುಕೂಲವಾಗಿದೆ ಎಂದು ಹಲವರು ವಿಡಿಯೊ ಮಾಡಿದ್ದಾರೆ. ಶಿವಮೊಗ್ಗ ಡಿಪೊದಲ್ಲಿ ಚಾಲಕರಾಗಿರುವ ಶಿವಕುಮಾರ್ ಅವರು ತನ್ನ ಪತ್ನಿಯನ್ನು ಹೆರಿಗೆಗಾಗಿ ಭದ್ರಾವತಿಯ ಆಸ್ಪತ್ರೆಗೆ ದಾಖಲಿಸಿದ್ದರು. ‘ಯಾವುದೇ ಶುಲ್ಕ ಕಟ್ಟಿಸಿಕೊಳ್ಳದೇ ಸಿಸೇರಿಯನ್ ಮಾಡಿದ್ದಾರೆ. ಮೊದಲ ಹೆರಿಗೆಗೆ ಇದೇ ಆಸ್ಪತ್ರೆಯಲ್ಲಿ ₹45 ಸಾವಿರ ವೆಚ್ಚವಾಗಿತ್ತು’ ಎಂದು ಹೇಳಿಕೊಂಡಿದ್ದಾರೆ.

ಬೆಂಗಳೂರು ಕೇಂದ್ರೀಯ ವಿಭಾಗದಲ್ಲಿ ನೌಕರರಾಗಿರುವ ಪ್ರಭಾವತಿ ಅವರು ಅಪಘಾತದಲ್ಲಿ ಗಾಯಗೊಂಡಾಗ ಮಲ್ಲೇಶ್ವರದಲ್ಲಿರುವ ಮಣಿಪಾಲ ಆಸ್ಪತ್ರೆಯಲ್ಲಿ ಸಕಾಲದಲ್ಲಿ ಉಚಿತವಾಗಿ ಚಿಕಿತ್ಸೆ ದೊರೆತಿರುವುದನ್ನು ಅವರ ಮಗಳು ವಿಡಿಯೊದಲ್ಲಿ ಹೇಳಿಕೊಂಡಿದ್ದಾರೆ.

ಅನಗತ್ಯ ವಿಡಿಯೊ: ರಾಮಲಿಂಗಾರೆಡ್ಡಿ



‘ಕೆಎಸ್‌ಆರ್‌ಟಿಸಿ ಆರೋಗ್ಯ’ದಡಿ 250 ಆಸ್ಪತ್ರೆಗಳೊಂದಿಗೆ ಮೊದಲ ಹಂತದಲ್ಲಿ ಒಡಂಬಡಿಕೆ ಮಾಡಿಕೊಳ್ಳಲಾಗಿತ್ತು. ಆನಂತರ 64 ಆಸ್ಪತ್ರೆಗಳು ಸೇರ್ಪಡೆಗೊಂಡಿವೆ. ಅದರಲ್ಲಿ ಮಂಡ್ಯದಲ್ಲಿಯೇ ನಾಲ್ಕು ಆಸ್ಪತ್ರೆಗಳಿವೆ. ಯಾವುದೋ ಒಂದು ಆಸ್ಪತ್ರೆಯಲ್ಲಿ ನಮ್ಮ ಜೊತೆಗೆ ಒಡಂಬಡಿಕೆ ಮಾಡಿಕೊಂಡಂತೆ ನಡೆದುಕೊಂಡಿಲ್ಲ ಎಂದಾದರೆ, ಅಧಿಕಾರಿಗಳ ಗಮನಕ್ಕೆ ತರಬೇಕು, ಪಕ್ಕದ ಆಸ್ಪತ್ರೆಗೆ ಹೋಗಬೇಕು. ಈ ಆಡಿಯೊ ಕೆಎಸ್‌ಆರ್‌ಟಿಸಿಗೆ ಕೆಟ್ಟ ಹೆಸರು ತರುವುದಕ್ಕಾಗಿಯೇ ಮಾಡಿದಂತಿದೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.

ಬಾಲಕಿ ಮೇಲೆ ಅತ್ಯಾಚಾರ: ಮೂವರ ಸೆರೆ

ಫರಿದಾಬಾದ್(ಹರಿಯಾಣ)(ಪಿಟಿಐ): 16 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿ, ಗರ್ಭಪಾತ ಮಾಡಿಸಿಕೊಳ್ಳುವಂತೆ ಬಲವಂತ ಮಾಡಿದ ಆರೋಪದ ಮೇಲೆ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಜಸ್ವಂತ್(37), ಸುಲ್ತಾನ್ ಹಾಗೂ ಸಿಕಂದರ್(55) ಬಂಧಿತರು.

ಈ ಬಗ್ಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪ್ರದೀಪಕುಮಾರ್ ಎಂಬುವವರು ಪೊಲೀಸರಿಗೆ ದೂರು ನೀಡಿದ್ದರು.

‘ಜಸ್ವಂತ್, ತನ್ನ ಕೋಣೆಗೆ ನನ್ನನ್ನು ಕರೆದುಕೊಂಡ ಹೋದ ನಂತರ, ಆತ ಮತ್ತು ಸುಲ್ತಾನ್ ನನ್ನ ಮೇಲೆ ಅತ್ಯಾಚಾರ ಎಸಗಿದರು. ಈ ಬಗ್ಗೆ ಯಾರಿಗಾದರೂ ತಿಳಿಸಿದರೆ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದರು. ನೆರೆ ಮನೆ ನಿವಾಸಿ ಸಿಕಂದರ್ ಕೂಡ ಹಲವು ಬಾರಿ ಅತ್ಯಾಚಾರ ಎಸಗಿದ್ದಾಗಿ ಬಾಲಕಿ ತಿಳಿಸಿದಳು’ ಎಂದು ಪ್ರದೀಪಕುಮಾರ್ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಸುದ್ದಿ 2 ನಿಮಿಷ

ಜನರಿಗೆ ಗವಿಮಠ ಸ್ವಾಮೀಜಿ ಮೂರು ಮನವಿ

ಕೊಪ್ಪಳ: ಗವಿಮಠ ಹಾಗೂ ತಮ್ಮ ಹೆಸರಿನ ಬಗ್ಗೆ ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಪರ-ವಿರೋಧದ ಚರ್ಚೆಗಳ ಬಗ್ಗೆ ಮಾತನಾಡುವಾಗ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಶುಕ್ರವಾರ ಕಣ್ಣೀರು ಹಾಕಿದರು.

ಇಲ್ಲಿನ ಕೈಲಾಸ ಮಂಟಪದಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ‘ಕೊಪ್ಪಳ ರೈಲು ನಿಲ್ದಾಣಕ್ಕೆ ಗವಿಸಿದ್ದೇಶ್ವರರ ಹೆಸರು ನಾಮಕರಣ ಮಾಡಬೇಕು ಎನ್ನುವ ಚರ್ಚೆ ನಡೆಯುತ್ತಿದೆ. ಗವಿಸಿದ್ದೇಶ್ವರ ಎಲ್ಲರ ಉಸಿರಿನಲ್ಲಿ ನೆಲೆ ನಿಂತಿರುವಾಗ ಹೆಸರು ಯಾಕೆ?’ ಎಂದು ಹೇಳಿ ಭಾವುಕರಾದರು.

‘ಗವಿಸಿದ್ದೇಶ್ವರನನ್ನು ನಮ್ಮ ಮಠದ ಆವರಣ ಬಿಟ್ಟು ಎಲ್ಲಿಯೂ ಕರೆದುಕೊಂಡು ಹೋಗಬೇಡಿ. ಈಗ ರೈಲು ನಿಲ್ದಾಣ, ಮುಂದೆ ವಿಮಾನ ನಿಲ್ದಾಣ, ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡಿ ಎನ್ನುತ್ತೀರಿ. ಅದ್ಯಾವುದೂ ಬೇಡ’ ಎಂದರು.

‘ಕೊಪ್ಪಳದ ಗವಿಮಠವನ್ನು ಹಾಗೂ ನನ್ನನ್ನು ಇನ್ನೊಂದು ಮಠದ ಜತೆಗೆ ಹಾಗೂ ಮತ್ತೊಬ್ಬ ಸ್ವಾಮೀಜಿ ಜತೆ ಹೋಲಿಕೆ ಮಾಡಬೇಡಿ. ನಾನು ಎಲ್ಲ ಮಠಗಳ ಸ್ವಾಮೀಜಿಗಳ ಪಾದದ ದೂಳು’ ಎಂದು ತಮ್ಮ ಮನದ ಎರಡನೇ ಮಾತು ಹೇಳಿದರು.

‘ನನಗೆ ಪ್ರಶಸ್ತಿ ಕೊಡಬೇಕು ಎಂದು ಯಾರೂ ಶಿಫಾರಸು ಮಾಡಬೇಡಿ. ಸಾಮಾಜಿಕ ತಾಣಗಳಲ್ಲಿ ಪೋಸ್ಟ್ ಹಾಕಬೇಡಿ. ಬಂದ ಪ್ರಶಸ್ತಿ ತಿರಸ್ಕರಿಸುವಷ್ಟು ದೊಡ್ಡವನು ನಾನಲ್ಲ. ತೆಗೆದುಕೊಳ್ಳುವ ಅರ್ಹತೆ ನನಗಿಲ್ಲ ಎಂದುಕೊಂಡಿದ್ದೇನೆ’ ಎಂದು ಕಣ್ಣೀರು ಹಾಕಿದರು.

‘ಪೂಜೆ, ಓದು ಹಾಗೂ ಜನರ ಸೇವೆ ಮಾತ್ರ ನನ್ನ ಆದ್ಯತೆ. ಜಾತಿಗಳ ಯಾವ ಜಗಳದಲ್ಲಿಯೂ ನನ್ನನ್ನು ಎಳೆದುಕೊಂಡು ತರಬೇಡಿ’ ಎಂದು ಮನವಿ ಮಾಡಿದರು. ‘ವಿವಾದದ ಯಾವ ವಿಷಯದಲ್ಲಿಯೂ ಎಳೆದು ತರಬೇಡಿ’ ಎಂದರು.

ಕೊಪ್ಪಳ ರೈಲು ನಿಲ್ದಾಣಕ್ಕೆ ಗವಿಸಿದ್ದೇಶ್ವರರ ಹೆಸರು ನಾಮಕರಣ ಮಾಡಬೇಕು ಎಂದು ಕೆಲ ಸಂಘಟನೆಯವರು, ಇನ್ನೂ ಕೆಲ ಸಂಘಟನೆಯವರು ಗಂಡುಗಲಿ ಕುಮಾರರಾಮನ ಹೆಸರು ನಾಮಕರಣ ಮಾಡಬೇಕು ಎಂದು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರು. ಈ ಎಲ್ಲ ಬೆಳವಣಿಗೆಯಿಂದ ಸ್ವಾಮೀಜಿ ಬೇಸರಗೊಂಡಿದ್ದರು.



ಮದುವೆಗೆ ಒಪ್ಪದ ಯುವತಿಗೆ ಚಾಕುವಿನಿಂದ ಇರಿದ ಪ್ರಿಯಕರ

ಬೆಂಗಳೂರು: ಮದುವೆಗೆ ಒಪ್ಪದ ಯುವತಿಗೆ ಪ್ರಿಯಕರ ಚಾಕುವಿನಿಂದ ಇರಿದಿರುವ ಘಟನೆ ಜಗಜೀವನರಾಮನಗರದಲ್ಲಿ ನಡೆದಿದೆ.

ಚಾಕುವಿನಿಂದ ಇರಿತಕ್ಕೊಳಗಾಗಿ ಗಂಭೀರವಾಗಿ ಗಾಯಗೊಂಡಿರುವ ಪೂಜಾ ಅವರು ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

‘ಆರೋಪಿ ಯುವಕ ಅಜಯ್‌ನನ್ನು ಪೊಲೀಸರು ಬಂಧಿಸಿದ್ದಾರೆ. ಯುವಕ ಮತ್ತು ಯುವತಿ ಪರಸ್ಪರ ಪ್ರೀತಿಸುತ್ತಿದ್ದರು. ಮದುವೆಗೂ ಎಲ್ಲಾ ಸಿದ್ಧತೆ ನಡೆದಿತ್ತು. ಆದರೆ, ಕೊನೆ ಘಳಿಗೆಯಲ್ಲಿ ಯುವತಿ ಮದುವೆಗೆ ನಿರಾಕರಿಸಿದ್ದಾಳೆ. ಇದರಿಂದ ಕೋಪಗೊಂಡು ಆಕೆಗೆ ಚಾಕುವಿನಿಂದ ಇರಿದಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

ಪೊಲೀಸರು ಆರೋಪಿಯನ್ನು ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ವಶಕ್ಕೆ ನೀಡಲಾಗಿದೆ.



ನಿಮ್ಮೊಂದಿಗೆ ನಾವು...

ಸಾರ್ವಜನಿಕ ಸ್ಥಳಗಳಲ್ಲಿ ಜನರಿಗೆ ತೊಂದರೆ ಉಂಟುಮಾಡುವ ಕಿಡಿಗೇಡಿಗಳ ವಿರುದ್ಧ ಮತ್ತು ಜನರಲ್ಲಿ ‘ನಿಮ್ಮೊಂದಿಗೆ ನಾವಿದ್ದೇವೆ’ ಎಂಬ ಸುರಕ್ಷತಾ ಭಾವ ಮೂಡಿಸುವ ಉದ್ದೇಶದಿಂದ ನಗರ ಸಶಸ್ತ್ರ ಮೀಸಲು ಪಡೆಯ ಅಶ್ವದಳ ಪೊಲೀಸ್ ಸಿಬ್ಬಂದಿ ಶುಕ್ರವಾರ ಸುರಕ್ಷತಾ ಗಸ್ತು ಹಾಕಿದರು

ಚಿತ್ರ: ಎಂ.ಎಸ್. ಮಂಜುನಾಥ್

ಕಾರಿನ ಗಾಜಿಗೆ ಗುದ್ದಿ ಹಾನಿ ಮಾಡಿದ ಆರೋಪಿಗಳು

ರಸ್ತೆ ರಂಪಾಟ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವೇಕನಗರ ಠಾಣಾ ವ್ಯಾಪ್ತಿಯಲ್ಲಿ ಕಾರು ತಡೆದು ಚಾಲಕನ ಜತೆ ಗಲಾಟೆ ಮಾಡಿದ ಇಬ್ಬರ ಯುವಕರನ್ನು ಪೊಲೀಸರು ಬಂಧಿಸಿದ್ದಾರೆ.

ಧನುಷ್ ಮತ್ತು ಸುದೀಶ್ ಅವರನ್ನು ಬಂಧಿಸಿ, ಬೈಕ್ ವಶಪಡಿಸಿಕೊಂಡಿದ್ದಾರೆ.

‘ಮೂರು ದಿನಗಳ ಹಿಂದೆ ಆರೋಪಿಗಳು ಸೋನಿ ಸಿಗ್ನಲ್ ಕಡೆಯಿಂದ ಶ್ರೀನಿವಾಗಿಲು ಜಂಕ್ಷನ್ ಕಡೆಗೆ ಹೋಗುತ್ತಿದ್ದ ಕಾರು ಅನ್ನು ಹಿಂಬಾಲಿಸಿಕೊಂಡು ಬೈಕ್‌ನಲ್ಲಿ ಬಂದಿದ್ದಾರೆ. ಬೈಕ್‌ಗೆ ಕಾರು ತಾಗಿದೆ ಎಂದು ಆರೋಪಿಸಿ ಯುವಕರು ಚಾಲಕನ ಜತೆ ಜಗಳ ತೆಗೆದಿದ್ದಾರೆ. ಒಬ್ಬ ಕಾರಿನ ಬಾನೆಟ್ ಮೇಲೆ ಹತ್ತಿ, ಗಾಜಿಗೆ ಒದ್ದಿದ್ದಾನೆ. ಮತ್ತೊಬ್ಬ ಚಾಲಕನ ಜತೆ ಗಲಾಟೆ ಮಾಡಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

‘ಈ ದೃಶ್ಯವನ್ನು ಸಾರ್ವಜನಿಕರು ಮೊಬೈಲ್‌ನಲ್ಲಿ ಸೆರೆ ಹಿಡಿದು ನಗರ ಪೊಲೀಸರಿಗೆ ಕಳುಹಿಸಿದ್ದರು. ಕಾರಿನ ಚಾಲಕ ದೂರು ನೀಡಿರಲಿಲ್ಲ. ಆದರೆ, ರಸ್ತೆಯಲ್ಲಿ ರಂಪಾಟ ನಡೆಸಿ, ಸಾರ್ವಜನಿಕರಿಗೆ ಭಯದ ವಾತಾವರಣ ಉಂಟು ಮಾಡಿದ ಆರೋಪದ ಮೇರೆಗೆ ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸಲಾಯಿತು. ಧನುಷ್ ಸ್ವಿಗ್ಗಿ ಕಂಪನಿಯಲ್ಲಿ ಮತ್ತು ಮತ್ತು ಸುದೀಶ್ ಬ್ಲಿಂಕಿಟ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ’ ಎಂದು ಹೇಳಿದರು.

ಪ್ರಯಾಣಿಕರ ಮನೆಯಲ್ಲಿ ಚಿನ್ನ ಕದ್ದ ಆಟೋ ಚಾಲಕ

ಅಪರಾಧ ಸುದ್ದಿ

ಬೆಂಗಳೂರು: ಪ್ರಯಾಣಿಕರನ್ನು ಬಸ್ ನಿಲ್ದಾಣಕ್ಕೆ ಡ್ರಾಪ್ ಮಾಡಿ, ಮತ್ತೆ ಅವರ ಮನೆಗೇ ಬಂದು ನಗದು ಹಾಗೂ ಚಿನ್ನಾಭರಣ ಕಳ್ಳತನ ಮಾಡಿದ್ದ ಆಟೋ ಚಾಲಕನನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ

ಆನೇಕಲ್ ತಾಲ್ಲೂಕಿನ ಬ್ಯಾಟರಾಯನ ದೊಡ್ಡಿ ಗ್ರಾಮದ ಕಾರ್ತಿಕ್ ಕುಮಾರ್ ಅಲಿಯಾಸ್ ಟ್ಯಾಟೂ ಕಾರ್ತಿ (25) ಅವರನ್ನು ಬಂಧಿಸಿ, ₹8 ಲಕ್ಷ ಮೌಲ್ಯದ 141 ಗ್ರಾಂ ಚಿನ್ನ, 250 ಗ್ರಾಂ ಬೆಳ್ಳಿ ವಸ್ತುಗಳು, ನಗದು, ಮೊಬೈಲ್ ಹಾಗೂ ಕೃತ್ಯಕ್ಕೆ ಬಳಸಿದ್ದ ಆಟೊ ವಶಪಡಿಸಿಕೊಳ್ಳಲಾಗಿದೆ.

‘ಜ.7ರಂದು ಕಾಮಾಕ್ಷಿಪಾಳ್ಯ ವೃಷಭಾವತಿ ನಗರದ ನಿವಾಸಿ ಪ್ರೇಮನಾಥ ಅವರು ವೈಯಕ್ತಿಕ ಕೆಲಸ ನಿಮಿತ್ತ ನೆಲಮಂಗಲಕ್ಕೆ ತೆರಳಿದ್ದರು. ಆ ಸಂದರ್ಭದಲ್ಲಿ ಪತ್ನಿ, ಪುತ್ರ ಹಾಗೂ ಸಂಬಂಧಿಕರೊಬ್ಬರು ಸ್ಯಾಟಲೈಟ್ ಬಸ್ ನಿಲ್ದಾಣ ಹೋಗಬೇಕಾಗಿತ್ತು. ಅವರಿಗಾಗಿ ಪ್ರೇಮನಾಥ ಅವರು ಆಟೋ ಬುಕ್ ಮಾಡಿಕೊಟ್ಟಿದ್ದರು. ಆ ಆಟೊದಲ್ಲಿ ತೆರಳುವ ಸಂದರ್ಭದಲ್ಲಿ, ಪ್ರೇಮನಾಥ್‌ಗೆ ಕರೆ ಮಾಡಿದ ಅವರ ಪತ್ನಿ ‘ಮನೆಗೆ ಬೀಗ ಹಾಕಿ ಕೀ ಅನ್ನು ಕಿಟಕಿಯಲ್ಲಿ ಇರಿಸಿದ್ದೇನೆ’ ಎಂದು ತಿಳಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ಆಟೊದಲ್ಲಿದ್ದ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡಿದ್ದ ಆರೋಪಿ, ಅವರನ್ನು ಬಸ್ ನಿಲ್ದಾಣಕ್ಕೆ ಬಿಟ್ಟು ವಾಪಸ್ ಪ್ರೇಮನಾಥ್ ಮನೆ ಬಳಿ ಬಂದು, ಕಿಟಕಿಯಲ್ಲಿ ಇರಿಸಿದ್ದ ಕೀ ಬಳಸಿ, ಮನೆಯೊಳಗೆ ಪ್ರವೇಶಿಸಿ ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡಿದ್ದ’ ಎಂದು ತಿಳಿಸಿದರು.

ಆರೋಪಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ತಾನೇ ಕಳವು ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ ಎಂದರು.

ಮಹಿಳೆ, ಮಕ್ಕಳ ಹಕ್ಕು ರಕ್ಷಣೆ ಎಲ್ಲರ ಹೊಣೆ

ದಾಬಸ್ ಪೇಟೆ: ‘ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗದಂತೆ ತಡೆಯುವುದು, ಅವರ ಹಕ್ಕುಗಳನ್ನು ರಕ್ಷಿಸುವುದು ನಮ್ಮೆಲ್ಲರ ಜವಾಬ್ದಾರಿ’ ಎಂದು ತ್ಯಾಮಗೊಂಡ್ಲು ಪಂಚಾಯಿತಿ ಅಧ್ಯಕ್ಷ ಮಲ್ಲೇಶ್ ಟಿ.ಎಚ್ ಹೇಳಿದರು.

ತ್ಯಾಮಗೊಂಡ್ಲು ಗ್ರಾ.ಪಂ. ಆವರಣದಲ್ಲಿ ಪಂಚಾಯಿತಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ವತಿಯಿಂದ ನಡೆದ 2024-25ನೇ ಸಾಲಿನ ‘ಮಹಿಳಾ ಮತ್ತು ಮಕ್ಕಳ ಹಾಗೂ ವಿಶೇಷಚೇತನರ ಸಮನ್ವಯ ವಿಶೇಷ ಗ್ರಾಮಸಭೆ’ ಉದ್ಘಾಟಿಸಿ ಅವರು ಮಾತನಾಡಿದರು.

‘ಬಾಲ್ಯವಿವಾಹ, ಮಕ್ಕಳ ಸಾಗಣೆ ತಡೆಯಲು ಅಂಗನವಾಡಿ ಕಾರ್ಯಕರ್ತೆಯರು, ಸ್ತ್ರೀಶಕ್ತಿ ಸ್ವಸಹಾಯ ಸಂಘಗಳು ಸಹಕರಿಸಬೇಕು’ ಎಂದು ನೋಡೆಲ್ ಅಧಿಕಾರಿ ಕೆ.ಸಿ ರಮೇಶ್ ಹೇಳಿದರು.

‘ಕ್ಯಾನ್ಸರ್: ಸ್ತನ ಛೇದಿಸಿ ಮರು ನಿರ್ಮಾಣ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಅಪೋಲೊ ಕ್ಯಾನ್ಸರ್ ಸೆಂಟರ್‌ನ ವೈದ್ಯರು ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಮಹಿಳೆಯರಿಗೆ ರೊಬೊಟಿಕ್ ತಂತ್ರಜ್ಞಾನದ ನೆರವಿನಿಂದ ಶಸ್ತ್ರಚಿಕಿತ್ಸೆ ನಡೆಸಿ, ಕ್ಯಾನ್ಸರ್ ಕೋಶಗಳ ಗಡ್ಡೆ ತೆಗೆದ ಜಾಗದಲ್ಲಿ ‘ಟೈಲೂಪ್ ಬ್ರೆಸ್ಟ್ ಇಂಪ್ಲಾಂಟ್’ ಅಳವಡಿಸುವ ಮೂಲಕ ಸ್ತನವನ್ನು ಮರು ನಿರ್ಮಾಣ ಮಾಡಿದ್ದಾರೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸೆಂಟರ್‌ನ ರೊಬೊಟಿಕ್ ಸ್ತನ ಶಸ್ತ್ರಚಿಕಿತ್ಸಕಿ ಡಾ. ಜಯಂತಿ ತುಮ್ಸಿ, ‘ಸ್ತನ ಕ್ಯಾನ್ಸರ್ ವಯಸ್ಸಾದ ಮಹಿಳೆಯರಿಗೆ ಮಾತ್ರ ಸೀಮಿತವಾಗಿರದೆ, ಯುವತಿ ಯರಲ್ಲಿಯೂ ಕಂಡುಬರುತ್ತಿದೆ. ಕೆಲ ಪ್ರಕರಣಗಳಲ್ಲಿ ಪೂರ್ಣ ಸ್ತನವನ್ನು ತೆಗೆಯಬೇಕಾಗುತ್ತದೆ. ಇದರಿಂದ ಕೆಲವರು ಮಾನಸಿಕವಾಗಿ ಕುಗ್ಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಛೇದಿಸಿದ ಸ್ತನದ ಮರುನಿರ್ಮಾಣ ಕೂಡ ಮುಖ್ಯವಾಗುತ್ತದೆ. ಇದಕ್ಕಾಗಿ ಕೇಂದ್ರದಲ್ಲಿ ರೊಬೊಟಿಕ್ ತಂತ್ರಜ್ಞಾನವನ್ನು ಬಳಸಿಕೊಂಡು, ‘ಟೈಲೂಪ್ ಬ್ರೆಸ್ಟ್ ಇಂಪ್ಲಾಂಟ್’ ಮೂಲಕ ಸ್ತನಕ್ಕೆ ಮೊದಲಿನ ಸ್ವರೂಪ ನೀಡಲಾಗುತ್ತಿದೆ. ಇತ್ತೀಚೆಗೆ ಇಬ್ಬರಿಗೆ ಈ ವಿಧಾನದಲ್ಲಿ ಶಸ್ತ್ರಚಿಕಿತ್ಸೆ ನಡೆಸಿ, ಸ್ತನವನ್ನು ಮರು ನಿರ್ಮಾಣ ಮಾಡಲಾಗಿದೆ. ಇಬ್ಬರೂ ಚೇತರಿಸಿಕೊಂಡಿದ್ದಾರೆ’ ಎಂದರು.

‘ರೊಬೊಟಿಕ್ ತಂತ್ರಜ್ಞಾನ ಆಧಾರಿತ ಶಸ್ತ್ರಚಿಕಿತ್ಸೆಯಲ್ಲಿ ಕಂಕುಳ ಕೆಳಗಡೆ ಸಣ್ಣದಾಗಿ ರಂಧ್ರ ಮಾಡಿ, ರೋಗಕಾರಕ ಭಾಗವನ್ನು ತೆಗೆಯಲಾಗುತ್ತದೆ. ಸಾಂಪ್ರದಾಯಿಕ ಶಸ್ತ್ರ ಚಿಕಿತ್ಸಾ ವಿಧಾನದಲ್ಲಿ ಗಡ್ಡೆಯ ಜಾಗ ತುಂಬಲು ದೇಹದ ಆಯ್ದ ಭಾಗಗಳಿಂದ ಮಾಂಸಖಂಡ ತೆಗೆದು, ಅಳವಡಿಸಲಾಗುತ್ತಿತ್ತು. ಈ ವಿಧಾನದಲ್ಲಿ ಶಸ್ತ್ರಚಿಕಿತ್ಸೆಗೆ ಹೆಚ್ಚಿನ ಸಮಯಾವಕಾಶ ಬೇಕಾಗುತ್ತದೆ. ಚೇತರಿಸಿಕೊಳ್ಳಲು ಹೆಚ್ಚಿನ ಅವಧಿ ಹಿಡಿಯಲಿದೆ. ಈಗ ತಂತ್ರಜ್ಞಾನದ ನೆರವಿನಿಂದ ‘ಟೈಲೂಪ್ ಬ್ರೆಸ್ಟ್ ಇಂಪ್ಲಾಂಟ್’ ಅಳವಡಿಸಿ, ಇನ್ನೊಂದು ಸ್ತನಕ್ಕೆ ಹೊಂದಾಣಿಕೆಯಾಗುವಂತೆ ವಿನ್ಯಾಸ ಮಾಡಲಾಗುತ್ತದೆ. ಬಳಿಕ ರೆಡಿಯೇಶನ್ ಥೆರಪಿ ನೀಡಲಾಗುತ್ತದೆ. ಇದರಿಂದ ರೋಗಿ ಕ್ಯಾನ್ಸರ್‌ನಿಂದ ಬೇಗ ಚೇತರಿಸಿಕೊಳ್ಳುತ್ತಾರೆ’ ಎಂದು ವಿವರಿಸಿದರು.

ಈ ಶಸ್ತ್ರಚಿಕಿತ್ಸಾ ವಿಧಾನದಿಂದ ಚೇತರಿಸಿಕೊಂಡವರು ತಮ್ಮ ಅನುಭವ ಹಂಚಿಕೊಂಡರು. ಅಪೋಲೊ ಕ್ಯಾನ್ಸರ್ ಸೆಂಟರ್‌ನ ಕರ್ನಾಟಕ ವಿಭಾಗದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಮನೀಶ್ ಮಟ್ಟು ಹಾಗೂ ಕೇಂದ್ರದ ದಿನೇಶ್ ಮಾಧವನ್ ಉಪಸ್ಥಿತರಿದ್ದರು.

ಚಿತ್ರಾವಳಿ



ನಗರದ ಪರಿಹಾರ ಸಂಸ್ಥೆ ಸಹಯೋಗದಲ್ಲಿ ಕಮಾಂಡ್ ಸೆಂಟರ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಯುನೈಟೆಡ್ ವೇ ಬೆಂಗಳೂರು, ಜೆ.ಇ. ಏರೋಸ್ಪೇಸ್ ಉಚಿತವಾಗಿ ನೀಡಿದ ಇ– ಆಟೋಗಳನ್ನು ಪೊಲೀಸ್ ಕಮಿಷನರ್ ಬಿ.ದಯಾನಂದ್ ಅವರು ಸಂತ್ರಸ್ತ ಮಹಿಳೆಯರಿಗೆ ವಿತರಿಸಿದರು



ರಾಜಾನುಕುಂಟೆ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ‘ಸಾಂಸ್ಕೃತಿಕ ಮತ್ತು ಕ್ರೀಡಾ ಕಲರವ’ ವಾರ್ಷಿಕೋತ್ಸವ ಸಮಾರಂಭದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು

ಆರ್‌.ಆರ್ ನಗರ ವಲಯ ಆಯುಕ್ತರ ಕಚೇರಿ ಎದುರೇ ಅವ್ಯವಸ್ಥೆ

ಅಭಿವೃದ್ಧಿ ಕಾಣದ ‘ಐಡಿಯಲ್ಸ್’ ಉದ್ಯಾನ

• ಚಿಕ್ಕರಾಮು

ರಾಜರಾಜೇಶ್ವರಿನಗರ: ಐಡಿಯಲ್ಸ್ ಹೋಮ್ಸ್ ಬಡಾವಣೆಯ ಉದ್ಯಾನದಲ್ಲಿ ಅಳವಡಿಸಿರುವ ಮಕ್ಕಳ ಆಟಿಕೆಗಳು, ಬೆಂಚುಗಳು, ವ್ಯಾಯಾಮ ಉಪಕರಣಗಳು ಕಿತ್ತುಹೋಗಿ ಹಲವು ವರ್ಷಗಳು ಕಳೆದಿದ್ದರೂ ದುರಸ್ತಿಯಾಗಿಲ್ಲ.

ರಾಜರಾಜೇಶ್ವರಿನಗರ ಬಿಬಿಎಂಪಿ ವಲಯ ಆಯುಕ್ತರ ಕಚೇರಿ ಮುಂಭಾಗದಲ್ಲಿರುವ ಉದ್ಯಾನವನ್ನು ಅಭಿವೃದ್ಧಿಪಡಿಸುವಲ್ಲಿ ಅಧಿಕಾರಿಗಳು ಆಸಕ್ತಿ ವಹಿಸುತ್ತಿಲ್ಲ ಎಂದು ಸ್ಥಳೀಯರು ದೂರುತ್ತಿದ್ದಾರೆ.

ಉದ್ಯಾನದಲ್ಲಿ ಮಕ್ಕಳು ಆಟವಾಡಲು ಹಾಕಿರುವ ಆಟಿಕೆಗಳು, ವಾಯುವಿಹಾರ ನಡೆಸಿ ವೃದ್ಧರು ಕೆಲನಿಮಿಷ ವಿಶ್ರಾಂತಿ ಪಡೆಯಲು ಹೆಂಚುಗಳನ್ನು ಅಳವಡಿಸಿರುವ ತೆರೆದ ವಿಶ್ರಾಂತಿ ಕಟ್ಟಡದ ಕಂಬಗಳು ತುಕ್ಕುಹಿಡಿದಿವೆ. ಬೀಳುವಂತಹ ಆತಂಕವಿದ್ದರೂ, ನಿತ್ಯವೂ ಇಲ್ಲೇ ಓಡಾಡುವ ಎಲ್ಲ ವಿಭಾಗದ ಎಂಜಿನಿಯರ್‌ಗಳು ಕಣ್ಣಿಗೆ ಕಾಣದಂತಾಗಿದೆ.

‘ನೂರಾರು ಕೋಟಿ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿ ಮಾಡಲಾಗಿದೆ ಎಂದು ಜನಪ್ರತಿನಿಧಿ ಹೇಳುತ್ತಾರೆ. ಆದರೆ ವಲಯ ಆಯುಕ್ತರ ಕಚೇರಿ ಮುಂಭಾಗವಿರುವ ಉದ್ಯಾನ ಅವ್ಯವಸ್ಥೆಯಿಂದ ಕೂಡಿರುವುದು ಬೇಸರದ ಸಂಗತಿಯಾಗಿದೆ. ವಲಯ ಆಯುಕ್ತರ ಕಚೇರಿ ಮುಂಭಾಗದ ಉದ್ಯಾನ ಸ್ಥಿತಿ ಈ ರೀತಿಯಿಂದ ಕೂಡಿದೆ ಎಂಬುದನ್ನು ತೋರಿಸುತ್ತದೆ. ಇನ್ನೂ ಕ್ಷೇತ್ರ ಯಾವ ರೀತಿ ಅಭಿವೃದ್ಧಿಯಾಗಿದೆ ಎಂಬುದಕ್ಕೆ ಉದಾಹರಣೆ ಬೇಕಾ’ ಎಂದು ಜಯಣ್ಣ ಬಡಾವಣೆಯ ಟಿ.ಇ. ಶ್ರೀನಿವಾಸ್ ಪ್ರಶ್ನಿಸಿದರು.




ಕಿತ್ತು ಬಿದ್ದಿರುವ ಕಲ್ಲಿನ ಬೆಂಚು (ಎಡಚಿತ್ರ) ಮಕ್ಕಳ ಆಟಿಕೆಗಳು ಕಿತ್ತುಹೋಗಿರುವುದು

ನಿವೃತ್ತ ಪೊಲೀಸ್ ಅಧಿಕಾರಿ ನಾಗರಾಜು, ‘ಪ್ರಮುಖ ಬಡಾವಣೆಯಲ್ಲಿರುವ ಉದ್ಯಾನದಲ್ಲಿ ಅಳವಡಿಸಿರುವ ತೆರೆದ ಜಿಮ್ ಉಪಕರಣಗಳು ಕಿತ್ತುಹೋಗಿವೆ. ಅಲ್ಪಸ್ವಲ್ಪ ಚೆನ್ನಾಗಿರುವ ಆಟಿಕೆಗಳಲ್ಲಿ ಮಕ್ಕಳು, ಮಹಿಳೆಯರು ಕಸರತ್ತು ನಡೆಸುವಾಗ ಬಿದ್ದುಗಾಯಗೊಂಡಿದ್ದಾರೆ’ ಎಂದು ಬೇಸರಿಸಿದರು.

ಮಹದೇವಯ್ಯ ಮಾತನಾಡಿ, ‘ಹಿರಿಯ ನಾಗರಿಕರು ವಿಶ್ರಾಂತಿಪಡೆಯಲು ಅಳವಡಿಸಿರುವ ಬೆಂಚುಗಳು ಕಿತ್ತುಹೋಗಿದ್ದರೂ, ದುರಸ್ತಿಪಡಿಸುವಲ್ಲಿ ಅಧಿಕಾರಿಗಳು ಮುಂದಾಗಿಲ್ಲ. ಮುಖ್ಯ ಆಯುಕ್ತರು ಎರಡು ಬಾರಿ ಉದ್ಯಾನ ಎದುರಿನ ಬಿಬಿಎಂಪಿ ಕಚೇರಿಯಲ್ಲಿ ಸಾರ್ವಜನಿಕರ ಅಧಿಕಾರಿಗಳ ಸಭೆ ನಡೆಸಿದ್ದಾರೆ. ಆದರೆ ಈ ಉದ್ಯಾನದತ್ತ ಗಮನಹರಿಸಿಲ್ಲ’ ಎಂದು ದೂರಿದರು.

ಆರ್.ಆರ್. ನಗರ ವಿಭಾಗದ ತೋಟಗಾರಿಕೆ ಅಧೀಕ್ಷಕ ಕೇಶವ ಮಾತನಾಡಿ, ‘ಇತ್ತೀಚೆಗೆ ವರ್ಗಾವಣೆಯಾಗಿ ಬಂದಿದ್ದೇನೆ. ತುರ್ತಾಗಿ ದುರಸ್ತಿ ಕೆಲಸ ತೆಗೆದುಕೊಳ್ಳಲು ₹1 ಕೋಟಿ ವೆಚ್ಚದಲ್ಲಿ ಟೆಂಡರ್ ಕರೆಯಲಾಗಿದೆ. ಪ್ರಕ್ರಿಯೆ ಮುಗಿಯುತ್ತಿದ್ದಂತೆ ಹಂತ-ಹಂತವಾಗಿ ಕೆಲಸ ಕೈಗೊಳ್ಳುತ್ತೇವೆ’ ಎಂದರು.

ನಾಗರಿಕ ವಿಮಾನಯಾನ ಸಚಿವರೊಂದಿಗೆ ಎಚ್‌.ಡಿ.ಕುಮಾರಸ್ವಾಮಿ ಸಮಾಲೋಚನೆ

‘ರಾಜ್ಯದಲ್ಲಿ ಸೀಪ್ಲೇನ್ ಸೇವೆ ಆರಂಭಿಸಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಮೂಲ ಸೌಕರ್ಯ ಮತ್ತು ಪ್ರವಾಸೋದ್ಯಮ ಉತ್ತೇಜಿಸುವ ಉದ್ದೇಶದಿಂದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರು ನಾಗರಿಕ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಅವರ ಜತೆ ಶುಕ್ರವಾರ ಇಲ್ಲಿ ಮಾತುಕತೆ ನಡೆಸಿದರು.

ಕೃಷ್ಣರಾಜ ಸಾಗರ (ಕೆಆರ್‌ಎಸ್) ಜಲಾಶಯದಲ್ಲಿ ಸೀಪ್ಲೇನ್ (ಸಮುದ್ರ ವಿಮಾನ ಸೇವೆ) ಆರಂಭಿಸುವ ಬಗ್ಗೆ ಸಚಿವರು, ವಿಮಾನಯಾನ ಸಚಿವರ ಜತೆ ಚರ್ಚೆ ನಡೆಸಿದರು.

ಸಮುದ್ರವಿಮಾನ ಸೇವೆ ಕರ್ನಾಟಕಕ್ಕೆ ಬಹಳ ಮುಖ್ಯ. ಪ್ರವಾಸೋದ್ಯಮಕ್ಕೆ ಇದು ಹೆಚ್ಚು ಬಲ ತುಂಬಲಿದೆ ಎಂದು ಸಚಿವರಿಗೆ ಮನವರಿಕೆ ಮಾಡಿಕೊಟ್ಟ ಕುಮಾರಸ್ವಾಮಿ, ಮೈಸೂರು, ಮಂಡ್ಯ, ಬೈಂದೂರು, ಆಲಮಟ್ಟಿ, ಬೇಲೂರು–ಹಳೆಬೀಡು ಮತ್ತು ವಿಜಯನಗರ (ಹಂಪಿ) ಪ್ರವಾಸಿ ತಾಣಗಳನ್ನು ಸಂಪರ್ಕಿಸುವ ಕುರಿತು ಪ್ರಸ್ತಾವನೆ ಸಲ್ಲಿಸಿದರು.

ಹಾಸನ ವಿಮಾನ ನಿಲ್ದಾಣದ ನಿರ್ಮಾಣವನ್ನು ತ್ವರಿತಗತಿಯಲ್ಲಿ ಮುಗಿಸುವಂತೆ ಮನವಿ ಮಾಡಿದರು. ಹಾಸನ ವಿಮಾನ ನಿಲ್ದಾಣದ ನಿರ್ಮಾಣ ಪೂರ್ಣವಾದರೆ ಪ್ರವಾಸೋದ್ಯಮಕ್ಕೆ ಅನುಕೂಲ ಆಗುವುದರ ಜತೆಗೆ ಕೃಷಿ, ಕೈಗಾರಿಕೆ, ಹೈನುಗಾರಿಕೆ ಸೇರಿದಂತೆ ಅನೇಕ ವಲಯಗಳ ಅಭಿವೃದ್ಧಿಗೆ ವೇಗ ದೊರೆಯಲಿದೆ. ಹಾಸನ ಶೈಕ್ಷಣಿಕ, ಕೃಷಿ ಮತ್ತು ಕೈಗಾರಿಕಾ ಕೇಂದ್ರವಾಗಿದ್ದು, ರಾಷ್ಟ್ರೀಯ ಪ್ರವಾಸಿ ಜಾಲದ ಅತಿ ಪ್ರಮುಖ ಕೊಂಡಿಯಾಗಿದೆ ಎಂದರು.



ಎಚ್‌.ಡಿ.ಕುಮಾರಸ್ವಾಮಿ ಹಾಗೂ ರಾಮಮೋಹನ್ ನಾಯ್ಡು ಚರ್ಚಿಸಿದರು

‘ಭದ್ರಾವತಿ ಉಕ್ಕಿನ ಕಾರ್ಖಾನೆ ಪುನರುಜ್ಜೀವನಕ್ಕೆ ರಾಜ್ಯ ಸರ್ಕಾರ ಅಡ್ಡಿ’

ನವದೆಹಲಿ: ಭದ್ರಾವತಿಯ ವಿಶ್ವೇಶರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ (ವಿಐಎಸ್‌ಎಲ್) ಪುನರುಜ್ಜೀವನಕ್ಕೆ ರಾಜ್ಯದ ಕಾಂಗ್ರೆಸ್ ಸರ್ಕಾರ ಸಹಕಾರ ನೀಡುತ್ತಿಲ್ಲ ಎಂದು ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪುನರುಜ್ಜೀವನದ ಬಗ್ಗೆ ಚರ್ಚಿಸಲು ಸಭೆ ಕರೆಯುವಂತೆ ಮನವಿ ಮಾಡಲಾಗಿತ್ತು. ಆದರೆ, ಸಭೆ ಕರೆದಿಲ್ಲ. ಸೌಜನ್ಯಕ್ಕೆ ಒಂದು ಪತ್ರವನ್ನೂ ಬರೆದಿಲ್ಲ’ ಎಂದು ಕಿಡಿಕಾರಿದರು. ದೀಪಾವಳಿ ದಿನವೇ ಕೆಲಸಗಾರರನ್ನು ರಾಜ್ಯ ಸರ್ಕಾರ ಮನೆಗೆ ಕಳುಹಿಸಿತ್ತು. ನೀವು ಅವರ ಮನೆ ಬೆಳಗುತ್ತೀರ ಎಂದು ಪ್ರಶ್ನಿಸಿದರು.

ಕೆಐಒಸಿಎಲ್ ಅನ್ನು ಎನ್‌ಎಂಡಿಸಿ ಜತೆಗೆ ವಿಲೀನ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ. ಸಂಸ್ಥೆಯು ನಷ್ಟ ಸೇರಿದಂತೆ ಅನೇಕ ಆರ್ಥಿಕ ಸವಾಲುಗಳನ್ನು ಎದುರಿಸುತ್ತಿದೆ ಎಂದರು.

‘ಎಚ್‌ಎಂಟಿ ಭೂಮಿ ವಿಚಾರದಲ್ಲಿ ರಾಜ್ಯ ಸರ್ಕಾರ ಚಿಲ್ಲರೆ ರಾಜಕಾರಣ ಮಾಡುತ್ತಿದೆ. ಮಹಾರಾಜರು ಕೊಟ್ಟ ಭೂಮಿಯದು. ಕಾಂಗ್ರೆಸ್‌ನವರು ಲೂಟಿ ಹೊಡೆಯಲು ಬಂದಿದ್ದಾರೆ. ಅರಣ್ಯ ಪ್ರದೇಶದಲ್ಲಿ ಕಟ್ಟಡ ಕಟ್ಟಿದ್ದು ಏಕೆ. ಎಚ್‌ಎಂಟಿ ಪುನಶ್ಚೇತನಕ್ಕೆ ನಾವು ಮುಂದಾಗಿದ್ದೆವು. ಕಾಂಗ್ರೆಸ್‌ನವರು ಹೊಸ ಕಥೆ ಶುರು ಮಾಡಿದ್ದಾರೆ. ಇವರಿಂದ ರಾಜ್ಯ ಉದ್ಧಾರವಾಗುತ್ತದೆಯೇ’ ಎಂದರು.

ಸರ್ಕಾರದಿಂದ ಲೂಟಿ, ಕಳ್ಳರಿಂದ ದರೋಡೆ: ಛಲವಾದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನಡೆದಿರುವ ಬ್ಯಾಂಕ್ ದರೋಡೆ ಪ್ರಕರಣಗಳು ಕಾನೂನು– ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ಸ್ಪಷ್ಟ ನಿದರ್ಶನ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು.

‘ಒಂದು ಕಡೆ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಖಜಾನೆ ಲೂಟಿ ಮಾಡುತ್ತಿದೆ. ಮತ್ತೊಂದು ಕಡೆ ಕಳ್ಳ– ಖದೀಮರಿಂದ ಬ್ಯಾಂಕ್ ದರೋಡೆ ನಡೆಯುತ್ತಿದೆ’ ಎಂದು ಅವರು ಸುದ್ದಿಗಾರಿಗೆ ಶುಕ್ರವಾರ ಮಾಹಿತಿ ನೀಡಿದರು

‘ಆರೆಸ್ಸೆಸ್, ಬಿಜೆಪಿಯವರು ಸಂವಿಧಾನ ವಿರೋಧಿಗಳು ಎಂದು ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ. ಆರ್‌ಎಸ್‌ಎಸ್ ಮತ್ತು ಬಿಜೆಪಿ ಸಂವಿಧಾನಕ್ಕೆ ವಿರುದ್ಧವಾಗಿ ನಡೆದುಕೊಂಡ ಒಂದೇ ಒಂದು ಘಟನೆಯನ್ನು ತಿಳಿಸಲು ಅವರಿಗೆ ಸಾಧ್ಯವೇ? ಹಾಗೆ ನೋಡಲು ಹೋದರೆ ಕಾಂಗ್ರೆಸ್ ಪಕ್ಷವೇ ಸಂವಿಧಾನಕ್ಕೆ ವಿರೋಧವಾಗಿ ನಡೆದುಕೊಂಡು ಬಂದಿದೆ. ತುರ್ತು ಪರಿಸ್ಥಿತಿ ಹೇರಿದ್ದೂ ಸೇರಿ ಹಲವು ಸಂದರ್ಭಗಳಲ್ಲಿ ಸಂವಿಧಾನದ ತತ್ವಗಳನ್ನು ಗಾಳಿಗೆ ತೂರಿದೆ’ ಎಂದು ದೂರಿದರು.

ಸಿ.ಟಿ.ರವಿ ಪ್ರಕರಣದಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಅವರಿಗೆ ಮಾಹಿತಿ ನೀಡದೇ ಸರ್ಕಾರ ಅವರನ್ನು ಕತ್ತಲಲ್ಲಿ ಇಟ್ಟಿದೆ. ಗೃಹ ಸಚಿವರಿಗೆ ಏನೇ ಕೇಳಿದರೂ ಮಾಹಿತಿ ತರಿಸಿಕೊಳ್ಳುವೆ ಎನ್ನುತ್ತಾರೆ. ಈ ಸರ್ಕಾರದಲ್ಲಿ ಏನು ನಡೆಯುತ್ತಿದೆ ಎಂಬುದೇ ಅವರಿಗೆ ಗೊತ್ತಿಲ್ಲ ಎಂದು ಛಲವಾದಿ ನಾರಾಯಣ ಸ್ವಾಮಿ ವ್ಯಂಗ್ಯವಾಡಿದರು.

‘ಸರ್ವಪಕ್ಷಗಳ ಸಭೆಗೆ ಆಗ್ರಹ’

ಬೆಂಗಳೂರು: ರಾಜ್ಯ ಸರ್ಕಾರ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಬಗ್ಗೆ ಕೂಡಲೇ ಸರ್ವಪಕ್ಷಗಳ ಸಭೆ ಕರೆಯಬೇಕೆಂದು ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಅವರು ಆಗ್ರಹಿಸಿದ್ದಾರೆ.

‘ರಾಜ್ಯದಲ್ಲಿ ಪೊಲೀಸ್ ಇಲಾಖೆ ಏನು ಮಾಡುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ. ಬ್ಯಾಂಕ್‌ಗಳ ದರೋಡೆ, ಅಮಾಯಕರ ಕೊಲೆ ನಡೆಯುತ್ತಿದೆ. ಇಷ್ಟೆಲ್ಲ ನಡೆಯುತ್ತಿದ್ದರೂ, ಮುಖ್ಯಮಂತ್ರಿ ಮತ್ತು ಸಚಿವರು ತಮ್ಮ ಕುರ್ಚಿ ಉಳಿಸಿಕೊಳ್ಳಲು ಔತಣಕೂಟದಲ್ಲಿ ಮಗ್ನರಾಗಿದ್ದಾರೆ’ ಎಂದು ಪ್ರಕಟಣೆಯಲ್ಲಿ ಟೀಕಿಸಿದ್ದಾರೆ.

ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಸ್ ಅಧಿಕಾರಿ ಎನ್.ಸತೀಶ್ ಕುಮಾರ್ ಅವರನ್ನು ಬೆಂಗಳೂರು ಕೇಂದ್ರ ವಲಯ ಐಜಿಪಿಯಾಗಿ ಮತ್ತು ಇನ್ನೂ ಇಬ್ಬರು ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸರ್ಕಾರವು ಆದೇಶಿಸಿದೆ.

ಬಿ.ಆರ್. ರವೀಕಾಂತೇಗೌಡ ಅವರನ್ನು ದಾವಣಗೆರೆ ಪೂರ್ವ ವಲಯದ ಐಜಿಪಿಯಾಗಿ, ಬಿ.ರಮೇಶ್ ಅವರನ್ನು ಬೆಂಗಳೂರು ನಗರ ಪಶ್ಚಿಮ ವಲಯದ ಜಂಟಿ ಆಯುಕ್ತರಾಗಿ ವರ್ಗಾವಣೆ ಮಾಡಿದೆ.

₹4,000 ಲಂಚ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂತನ ಕಟ್ಟಡದ ನೀರಿನ ಸಂಪರ್ಕದ ಮೀಟರ್‌ಗೆ ಆರ್.ಆರ್. ನಂಬರ್ ನೀಡಲು ₹4,000 ಲಂಚ ಪಡೆದ ಜಲಮಂಡಳಿ ಅಧಿಕಾರಿಯನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ನಗರದ ಹೆಗ್ಗನಹಳ್ಳಿ ವ್ಯಾಪ್ತಿಯಲ್ಲಿ ಗುತ್ತಿಗೆದಾರ ದಿವಾಕರ್ ಎಂ. ಅವರು ನೂತನ ಕಟ್ಟಡ ನಿರ್ಮಿಸಿದ್ದಾರೆ. ಆ ಕಟ್ಟಡಕ್ಕೆ ನೀರಿನ ಸಂಪರ್ಕ ಪಡೆದಿದ್ದು, ಮೀಟರ್‌ಗೆ ಆರ್.ಆರ್. ಸಂಖ್ಯೆ ನೀಡಿರಲಿಲ್ಲ. ಈ ಸಂಬಂಧ ಜಲಮಂಡಳಿಯ ಹೆಗ್ಗನಹಳ್ಳಿ ಉಪವಿಭಾಗದ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದರು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಸಂಬಂಧಿತ ಕಚೇರಿಯ ಇನ್‌ಸ್ಪೆಕ್ಟರ್ ಎಂ.ವಿಶ್ವನಾಥ್ ಅವರು ಆರ್.ಆರ್. ಸಂಖ್ಯೆ ನೀಡಲು ₹4,500 ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಇದರ ವಿರುದ್ಧ ದಿವಾಕರ್ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ತನಿಖಾಧಿಕಾರಿಗಳು ರೂಪಿಸಿದ್ದ ಕಾರ್ಯಾಚರಣೆ ಪ್ರಕಾರ ದಿವಾಕರ್ ಅವರು ಶುಕ್ರವಾರ, ಆರೋಪಿಗೆ ಕಚೇರಿಯಲ್ಲೇ ₹4,000 ನೀಡಿದ್ದರು. ತಕ್ಷಣವೇ ದಾಳಿ ಮಾಡಿ ಸಾಕ್ಷ್ಯ ಸಮೇತ ಆರೋಪಿಯನ್ನು ಬಂಧಿಸಲಾಗಿದೆ. ತನಿಖೆ ಮುಂದುವರೆದಿದೆ ಎಂದು ಮಾಹಿತಿ ನೀಡಿದ್ದಾರೆ.

ಚಿನ್ನದ ಸರ ದೋಚಿದ ಪ್ರೇಮಿಗಳ ಬಂಧನ

ದೊಡ್ಡಬಳ್ಳಾಪುರ: ಮನೆಗೆ ತೆರಳಲು ಆಟೊ ಹತ್ತಿದ ಮಹಿಳೆಯನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಚಿನ್ನದ ಸರ ದೋಚಿದ್ದ ಆಟೊ ಚಾಲಕ ಮತ್ತು ಅವರ ಪ್ರೇಯಸಿಯನ್ನು ಬಂಧಿಸಲಾಗಿದೆ. ಹನಿಯೂರ ನಿವಾಸಿ ಆಟೊ ಚಾಲಕ ರಘು ಮತ್ತು ಚೆಲ್ಲಹಳ್ಳಿ ಶ್ವೇತಾ ಬಂಧಿತರು.

ತೂಬಗೆರೆ ಪೇಟೆ ಯಶೋಧಮ್ಮ ಎಂಬುವವರು ಕೊಂಗಾಡಿಯಪ್ಪ ಕಾಲೇಜು ಬಳಿ ಇರುವ ಮಗಳ ಮನೆಯಿಂದ ಬರಲು ಆಟೊ ಹತ್ತಿದ್ದರು. ಅವರನ್ನು ರಾಷ್ಟ್ರೀಯ ಹೆದ್ದಾರಿ 648ರ ನಿರ್ಜನ ಪ್ರದೇಶಕ್ಕೆ ಕರೆದೊಯ್ದು 33 ಗ್ರಾಂ ಮಾಂಗಲ್ಯ ಸರ ಹಾಗೂ 4 ಗ್ರಾಂ ಓಲೆ ದೋಚಿ ನಂತರ ಆಲಹಳ್ಳಿ ಸಮೀಪ ಬಿಟ್ಟು ಪರಾರಿಯಾಗಿದ್ದರು ಎಂದು ಇನ್‌ಸ್ಪೆಕ್ಟರ್ ಅಮರೇಶ್‌ಗೌಡ ತಿಳಿಸಿದ್ದಾರೆ.

ಕಂಬಾಳು ವಿಎಸ್‌ಎಸ್‌ಎನ್: ಪದಾಧಿಕಾರಿಗಳ ಆಯ್ಕೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಕಂಬಾಳು ವಿವಿಧೋದ್ದೇಶ ಪ್ರಾಥಮಿಕ ಕೃಷಿ ಸಹಕಾರ ಸಂಘಕ್ಕೆ (ವಿಎಸ್‌ಎಸ್ ಎನ್) 12 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ಬಸವರಾಜು, ಕೆ.ಬಿ.ಪ್ರಭುದೇವ, ಬೈರೇಗೌಡ ಜಿ.ಎಂ, ಸಿದ್ದರಾಜು ಎಸ್. ಟಿ, ಅಣ್ಣಯ್ಯಪ್ಪ ಮಹಿಳಾ ಮೀಸಲು ಕ್ಷೇತ್ರದಿಂದ ಚಂದ್ರಕಲಾ ಕೆ.ಎಂ., ಯೋಗ ನಂದೀಶ, ಭಾಗ್ಯಮ್ಮ ಹನುಮಂತರಾಜು ಹಿಂದುಳಿದ ವರ್ಗ (ಅ)ದಿಂದ ಶೇಷಾಚಲ ಮೂರ್ತಿ, ಹಿಂದುಳಿದ ವರ್ಗ (ಬಿ)ದಿಂದ ಎಸ್.ಸಿ.ಹೊನ್ನಗಂಗಾ ಶೆಟ್ಟಿ, ಪರಿಶಿಷ್ಟ ಜಾತಿಯಿಂದ ರಾಮಕೃಷ್ಣಯ್ಯ ಕೆ.ಆರ್, ಪರಿಶಿಷ್ಟ ಪಂಗಡದಿಂದ ನಂಜಪ್ಪ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ ದೇವರಾಜು ಅವರು ಅವಿರೋಧವಾಗಿ ಆಯ್ಕೆ ಆಗಿದ್ದಾರೆ ಎಂದು ಚುನಾವಣಾಧಿಕಾರಿ ನಾಗರಾಜು ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್ ನಿರ್ದೇಶನಗಳನ್ನು ಅಳವಡಿಸಿಕೊಂಡ ಬಿಬಿಎಂಪಿ: ಜಲಮಂಡಳಿ, ಬೆಸ್ಕಾಂಗೂ ಸೂಚನೆ

ಕಟ್ಟಡ ನಕ್ಷೆ ಇಲ್ಲದಿದ್ದರೆ ನೀರು, ವಿದ್ಯುತ್ ಇಲ್ಲ

• ಆರ್. ಮಂಜುನಾಥ್

•ಎಲ್ಲ ಕಟ್ಟಡಗಳಿಗೆ ನಕ್ಷೆ, ಸಿಸಿ, ಒಸಿ ಕಡ್ಡಾಯ
•ನಕ್ಷೆ ಅವಧಿಯಲ್ಲಿ ಕಟ್ಟಡ ಕಾಮಗಾರಿ ಪೂರ್ಣಗೊಳ್ಳಬೇಕು
•ನಕ್ಷೆ ಅವಧಿ ನವೀಕರಣವಾಗದಿದ್ದರೂ ನೀರು, ವಿದ್ಯುತ್ ಇಲ್ಲ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡ ನಕ್ಷೆ ಮಂಜೂರಾತಿ, ಕಟ್ಟಡ ಪ್ರಾರಂಭಿಕ ಪ್ರಮಾಣ ಪತ್ರ (ಸಿಸಿ) ಇಲ್ಲದಿದ್ದರೆ ತಾತ್ಕಾಲಿಕವಾಗಿಯೂ ವಿದ್ಯುತ್ ಹಾಗೂ ನೀರಿನ ಸಂಪರ್ಕ ಸಿಗುವುದಿಲ್ಲ. ನಕ್ಷೆ ಉಲ್ಲಂಘಿಸಿ ಕಟ್ಟಡ ನಿರ್ಮಾಣವಾಗುತ್ತಿದ್ದರೂ ನೀರು–ವಿದ್ಯುತ್ ಸಂಪರ್ಕ ಸ್ಥಗಿತಗೊಳ್ಳಲಿದೆ.

ಸುಪ್ರೀಂ ಕೋರ್ಟ್ ಆದೇಶದಂತೆ ಅನಧಿಕೃತ ಕಟ್ಟಡ ಹಾಗೂ ನಕ್ಷೆ ಉಲ್ಲಂಘಿಸಿ ನಿರ್ಮಾಣವಾಗುತ್ತಿರುವ ಕಟ್ಟಡಗಳ ಮೇಲೆ ಕೈಗೊಳ್ಳಬೇಕಾದ ನಿಯಮಗಳನ್ನು ಜಾರಿ ಮಾಡಿರುವ ಬಿಬಿಎಂಪಿ, ಅಕ್ರಮ ನಿರ್ಮಾಣಗಳಿಗೆ ವಿದ್ಯುತ್ ಮತ್ತು ನೀರು, ಒಳಚರಂಡಿ ಸಂಪರ್ಕವನ್ನು ಸ್ಥಗಿತಗೊಳಿಸಲು ಆಯಾ ಇಲಾಖೆಗಳಿಗೆ ನಿರ್ದೇಶನ ನೀಡಿದೆ.

ಕಟ್ಟಡ ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಿಸುತ್ತಿದ್ದರೆ ಆ ಸಂದರ್ಭದಲ್ಲೇ ನೋಟಿಸ್ ಜಾರಿ ಮಾಡಬೇಕು. ಬೆಸ್ಕಾಂ ಹಾಗೂ ಜಲಮಂಡಳಿಗೆ ಮಾಹಿತಿ ನೀಡಿ, ತಾತ್ಕಾಲಿಕ ಅಥವಾ ಶಾಶ್ವತ ಸೇವಾ ಸಂಪರ್ಕವನ್ನು ಕಡಿತಗೊಳಿಸಲು ವಲಯ ಆಯುಕ್ತರು ಕ್ರಮ ಕೈಗೊಳ್ಳಬೇಕು ಎಂದು ಮುಖ್ಯ ಆಯುಕ್ತರು ಹೊರಡಿಸಿರುವ ಸುತ್ತೋಲೆಯಲ್ಲಿ ಸೂಚಿಸಿದ್ದಾರೆ.

ಕಟ್ಟಡ ನಿರ್ಮಾಣದ ಹಂತದಲ್ಲಿ ಅಥವಾ ಪೂರ್ವದಲ್ಲಿ ಬೆಸ್ಕಾಂ ಅಥವಾ ಜಲಮಂಡಳಿ ತಾತ್ಕಾಲಿಕ ಸಂಪರ್ಕ ನೀಡಬೇಕಾದರೆ, ಪಾಲಿಕೆಯಿಂದ ಮಂಜೂರಾಗಿರುವ ಕಟ್ಟಡ ನಕ್ಷೆ ಹಾಗೂ ಸಿಸಿಯನ್ನು ಇಲಾಖೆಗಳು ಪರಿಶೀಲಿಸಬೇಕು. ಶಾಶ್ವತ ಸಂಪರ್ಕವನ್ನು ನೀಡಬೇಕಾದ ಸಂದರ್ಭದಲ್ಲಿ, ಪಾಲಿಕೆ ನೀಡಿರುವ ಕಟ್ಟಡದ ಪೂರ್ಣತಾ ಪ್ರಮಾಣಪತ್ರ ಅಥವಾ ಸ್ವಾಧೀನಾನುಭವ ಪತ್ರವನ್ನು (ಒಸಿ) ಪರಿಶೀಲಿಸಿಯೇ ಅನುಮೋದನೆ ನೀಡಬೇಕು. ಪಾಲಿಕೆ ನೀಡಿರುವ ನಕ್ಷೆ ಅವಧಿಯಲ್ಲಿ ಕಟ್ಟಡ ಪೂರ್ಣಗೊಂಡಿರದಿದ್ದರೆ, ತಾತ್ಕಾಲಿಕ ಸಂಪರ್ಕವನ್ನು ರದ್ದುಗೊಳಿಸಬೇಕು. ನಕ್ಷೆ ಅವಧಿ ನವೀಕರಣಗೊಂಡಿದ್ದರಷ್ಟೇ ತಾತ್ಕಾಲಿಕ ಸಂಪರ್ಕವನ್ನು ಮುಂದುವರಿಸಬೇಕು ಎಂದು ಜಲಮಂಡಳಿ ಅಧ್ಯಕ್ಷರು ಹಾಗೂ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಬರೆದಿರುವ ಪತ್ರದಲ್ಲಿ ವಿವರಿಸಲಾಗಿದೆ.

'ಎಲ್ಲ ಕಟ್ಟಡಗಳಿಗೂ ನಕ್ಷೆ ಮಂಜೂರು, ಒಸಿ, ಸಿಸಿ ಅಥವಾ ನಕ್ಷೆ ಮಂಜೂರಾತಿ ನವೀಕರಣದ ಪತ್ರ ಕಡ್ಡಾಯವಾಗಿದೆ. ಬೆಸ್ಕಾಂ ಹಾಗೂ ಜಲಮಂಡಳಿಗಳು ಈ ಪ್ರಮಾಣಪತ್ರಗಳನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಪರಿಶೀಲಿಸಿಕೊಳ್ಳುವ ಅವಕಾಶ ನೀಡಲಾಗಿದೆ. ಅದರ ನಂತರವಷ್ಟೇ ತಾತ್ಕಾಲಿಕ ಅಥವಾ ಶಾಶ್ವತ ಸಂಪರ್ಕ ಅನುಮೋದನೆಯನ್ನು ಆನ್‌ಲೈನ್‌ನಲ್ಲಿಯೇ ದಾಖಲಿಸಬೇಕು. ಇದರಿಂದ ನಕಲಿ ದಾಖಲೆ ನೀಡಿ, ವಿದ್ಯುತ್ ಅಥವಾ ನೀರಿನ ಸಂಪರ್ಕ ಪಡೆಯುವುದನ್ನು ತಪ್ಪಿಸಬಹುದು' ಎಂದು ನಗರ ಯೋಜನೆ ವಿಭಾಗದ ಹೆಚ್ಚುವರಿ ನಿರ್ದೇಶಕ ಗಿರೀಶ್ ಮಾಹಿತಿ ನೀಡಿದರು.

ಆನ್‌ಲೈನ್‌ನಲ್ಲಿ ಮಾಹಿತಿ

ಕಟ್ಟಡ ನಕ್ಷೆ ಮಂಜೂರಾದ ಮೇಲೆ, ಮಾಲೀಕರು ಕಟ್ಟಡ ಆರಂಭಿಕ ಪ್ರಮಾಣಪತ್ರ (ಸಿಸಿ) ಪಡೆದುಕೊಳ್ಳಬೇಕು. ಅದಾದ ನಂತರ ಪ್ರತಿ ಎರಡು ತಿಂಗಳಿಗೊಮ್ಮೆ (ಜನವರಿ, ಮಾರ್ಚ್, ಮೇ, ಜುಲೈ, ಸೆಪ್ಟೆಂಬರ್, ನವೆಂಬರ್) ನಗರ ಯೋಜನೆಯ ಸ್ಥಳೀಯ ಎಂಜಿನಿಯರ್‌ಗಳು ಕಟ್ಟಡ ನಿರ್ಮಾಣದ ಪ್ರಕ್ರಿಯೆ ಪರಿಶೀಲಿಸುತ್ತಾರೆ. ಮಂಜೂರಾದ ನಕ್ಷೆಯಂತೆ ನಿರ್ಮಾಣ ನಡೆಯುತ್ತಿದೆಯೇ ಎಂಬ ಮಾಹಿತಿ ಜೊತೆಗೆ ಚಿತ್ರಗಳನ್ನೂ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುತ್ತಾರೆ. ನೀರು, ವಿದ್ಯುತ್ ಸಂಪರ್ಕ ಸೇರಿದಂತೆ ಎಲ್ಲ ಮಾಹಿತಿಗಳು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಲಭ್ಯವಾಗಲಿವೆ. ಕಟ್ಟಡ ನಿರ್ಮಾಣದ ನಂತರ ಸ್ವಾಧೀನಾನುಭವ ಪ್ರಮಾಣಪತ್ರ (ಒಸಿ) ಪಡೆದ ಮೇಲೂ ಹೆಚ್ಚುವರಿ ನಿರ್ಮಾಣ, ಉಲ್ಲಂಘನೆಗಳು ಕಂಡು ಬಂದರೆ ವಾರ್ಡ್ ಎಂಜಿನಿಯರ್ ವರದಿ ಸಲ್ಲಿಸಿ, ಕಾನೂನಿನಂತೆ ಕ್ರಮ ಕೈಗೊಳ್ಳಲಿದ್ದಾರೆ.

ನಕ್ಷೆಗೆ ಇ–ಖಾತಾ ಕಡ್ಡಾಯ

ಬಿಬಿಎಂಪಿ ವ್ಯಾಪ್ತಿಯಲ್ಲಿ ಏಪ್ರಿಲ್ 1ರಿಂದ ಕಟ್ಟಡ ನಕ್ಷೆ ಪಡೆಯಲು ಇ–ಖಾತಾ ಕಡ್ಡಾಯವಾಗಲಿದೆ. ಇಲ್ಲಿವರೆಗೆ 'ಮ್ಯಾನ್ಯುಯಲ್ ಖಾತಾ' ಹೊಂದಿರುವವರಿಗೆ ಕಟ್ಟಡ ನಕ್ಷೆ ನೀಡಲಾಗುತ್ತದೆ. ಇನ್ನೆರಡು ತಿಂಗಳ ನಂತರ ಅದು ಸ್ಥಗಿತಗೊಳ್ಳಲಿದೆ.

'ಕಟ್ಟಡ ನಕ್ಷೆಗೆ ಅರ್ಜಿ ಸಲ್ಲಿಸುವಾಗ ಇ–ಖಾತಾವನ್ನೇ ಸಲ್ಲಿಸುವುದು ಕಡ್ಡಾಯ. ಇದರಿಂದ, ಆಸ್ತಿಗೆ ಸಂಬಂಧಿಸಿದಂತೆ ಇತರೆ ದಾಖಲೆಗಳನ್ನು ಸಲ್ಲಿಸುವ ಅಗತ್ಯವಿಲ್ಲ. ಆಸ್ತಿ ತೆರಿಗೆ, ಕ್ರಯಪತ್ರ, ಆಸ್ತಿಯ ಸ್ಥಳ (ಅಕ್ಷಾಂಶ, ರೇಖಾಂಶ), ಮಾಲೀಕರ ಚಿತ್ರ, ಆಧಾರ್ ಎಲ್ಲವೂ ಇ–ಖಾತಾದಲ್ಲಿಯೇ ನಮೂದಾಗಿರುವುದರಿಂದ ಈ ಎಲ್ಲ ದಾಖಲೆಗಳು ಆನ್‌ಲೈನ್‌ನಲ್ಲಿಯೇ ಲಭ್ಯವಾಗುತ್ತದೆ. ನಕ್ಷೆಗೆ ಸಂಬಂಧಿಸಿದ ದಾಖಲೆಗಳನ್ನು ಮಾತ್ರ ಸಲ್ಲಿಸಬೇಕಾಗುತ್ತದೆ' ಎಂದು ನಗರ ಯೋಜನೆ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದರು.

1584 ಕಟ್ಟಡ ಅನಧಿಕೃತ

ಬಿಬಿಎಂಪಿ ವ್ಯಾಪ್ತಿಯಲ್ಲಿ 1,584 ಕಟ್ಟಡಗಳು ಅನಧಿಕೃತವಾಗಿ ನಿರ್ಮಾಣವಾಗುತ್ತಿವೆ ಎಂಬುದು ಪಾಲಿಕೆ ನಡೆಸುತ್ತಿರುವ ಸಮೀಕ್ಷೆಯಿಂದ ತಿಳಿದುಬಂದಿದೆ. ಪ್ರತಿ ದಿನವೂ ಇವುಗಳ ಸಂಖ್ಯೆ ವೃದ್ಧಿಯಾಗುತ್ತಿದ್ದು, ಕಾನೂನು ಪ್ರಕಾರ ನೋಟಿಸ್‌ಗಳೂ ಜಾರಿಯಾಗುತ್ತಿವೆ. ಈ ಕಟ್ಟಡಗಳಿಗೆ ಜನವರಿ 20ರಿಂದ ನೀರು, ವಿದ್ಯುತ್ ಸಂಪರ್ಕವನ್ನೂ ಕಡಿತ ಮಾಡಲಾಗುತ್ತದೆ ಎಂದು ನಗರ ಯೋಜನೆ ಅಧಿಕಾರಿಗಳು ತಿಳಿಸಿದರು.

777 ಕಟ್ಟಡಗಳು ನಕ್ಷೆಯನ್ನು ಉಲ್ಲಂಘಿಸಿ ನಿರ್ಮಾಣವಾಗುತ್ತಿವೆ. 82 ಕಟ್ಟಡಗಳಿಗೆ ಬೀಗಮುದ್ರೆ ಹಾಕಲಾಗಿದೆ. 33 ಪ್ರಕರಣಗಳು ನ್ಯಾಯಾಲಯದಲ್ಲಿವೆ. ಆರು ಕಟ್ಟಡಗಳನ್ನು ತೆರವು ಮಾಡಲಾಗಿದೆ. 177 ಕಟ್ಟಡಗಳನ್ನು ತೆರವುಗೊಳಿಸಲು ಆದೇಶ ಹೊರಡಿಸಲಾಗಿದೆ. ಉಳಿದ ಅನಧಿಕೃತ ಕಟ್ಟಡಗಳ ಮೇಲಿನ ಕ್ರಮಕ್ಕೆ ನೋಟಿಸ್‌ಗಳು ಜಾರಿಯಾಗಿವೆ ಎಂದು ಮಾಹಿತಿ ನೀಡಿದರು.

ಎಲ್ಲೆಲ್ಲಿ ಎಷ್ಟು ಕಟ್ಟಡ ಅಕ್ರಮ?

ಮಹದೇವಪುರ	425
ಯಲಹಂಕ	478
ದಾಸರಹಳ್ಳಿ	181
ಪೂರ್ವ	53
ದಕ್ಷಿಣ	9
ಪಶ್ಚಿಮ	121
ಬೊಮ್ಮನಹಳ್ಳಿ	120
ರಾಜರಾಜೇಶ್ವರಿನಗರ	197

ಎಂಇಜಿ ತಂಡಕ್ಕೆ ಭರ್ಜರಿ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಫ್‌ಸಿ ತಂಡವು ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಪಂದ್ಯದಲ್ಲಿ ಶುಕ್ರವಾರ ಎಂಇಜಿ ಮತ್ತು ಸೆಂಟರ್ ಎಫ್‌ಸಿ ತಂಡದ ವಿರುದ್ಧ 5–1 ಗೋಲುಗಳಿಂದ ಭರ್ಜರಿ ಗೆಲುವು ಪಡೆಯಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಿಎಫ್‌ಸಿ ತಂಡದ ಚಾಂಪಾಮೈಯುಮ್ ರೋಹೆನ್ ಸಿಂಗ್ (3ನೇ ಮತ್ತು 55ನೇ ನಿ.), ಟಾರೆಮ್ ಕೆಲ್ವಿನ್ ಸಿಂಗ್ (55ನೇ ನಿ.), ಸೋಹನ್ ವರ್ಶನೆಯಾ (55ನೇ ನಿ.), ಶಾಶ್ವತ್ ಪಾನ್ವಾರ್(66ನೇ ನಿ.) ಗೋಲುಗಳನ್ನು ಹೊಡೆದರು. ಎಂಇಜಿ ತಂಡ ಶಿಜೋಯ್ ಸುರೇಶ್ (45 + 1ನೇ ನಿ.) ಗೋಲು ಬಾರಿಸಿದರು.

ಇನ್ನೊಂದು ಪಂದ್ಯದಲ್ಲಿ ಎಎಸ್‌ಸಿ ಮತ್ತು ಸೆಂಟರ್ ಎಫ್‌ಸಿ 1–0 ಗೋಲಿನಿಂದ ಬಿಯುಎಫ್‌ಸಿ ತಂಡವನ್ನು ಮಣಿಸಿತು. ಎಎಸ್‌ಸಿ ತಂಡದ ಜೇಶನ್ ದೀಪ್ ಸಿಂಗ್ (79ನೇ ನಿ.) ಗೋಲು ಹೊಡೆದರು.



ಬಿಎಫ್‌ಸಿ ತಂಡದ ಸಿ. ರೋಹೆನ್ ಸಿಂಗ್ (ಎಡ) ಮತ್ತು ಎಂಇಜಿ ತಂಡದ ಸುಂದರಸನ್ ಸೆಂಥಿಲ್‌ಕುಮಾರ್ (ಬಲ) ಚೆಂಡಿಗಾಗಿ ಪೈಪೋಟಿ ನಡೆಸಿದ ಕ್ಷಣ ಚಿತ್ರ: ಎಸ್‌.ಕೆ.ದಿನೇಶ್

ಕೋರ್ಟ್ ತೀರ್ಪು ಪಾಲನೆ– ಪರಮೇಶ್ವರ

ಬಾಬಾಬುಡನ್‌ಗಿರಿ ವಿವಾದ: ಶಾಶ್ವತವಾಗಿ ಬಗೆಹರಿಸಲು ಸರ್ಕಾರದ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಮಗಳೂರು ಜಿಲ್ಲೆಯ ಶ್ರೀಗುರು ದತ್ತಾತ್ರೇಯ ಬಾಬಾ ಬುಡನ್‌ಸ್ವಾಮಿ ದರ್ಗಾ ವಿವಾದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯ ನೀಡುವ ತೀರ್ಪಿನ ಪಾಲನೆ ಮಾಡಬೇಕು ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ತಿಳಿಸಿದರು.

ಈ ವಿಷಯದ ಕುರಿತು ವಿಧಾನಸೌಧದಲ್ಲಿ ಶುಕ್ರವಾರ ನಡೆದ ಚಿಕ್ಕಮಗಳೂರು ಜಿಲ್ಲಾ ಜನಪ್ರತಿನಿಧಿಗಳ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, ಈ ವಿವಾದವನ್ನು ಶಾಶ್ವತವಾಗಿ ಬಗೆಹರಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು ಹೇಳಿದರು.



'ಮಾರ್ಚ್ 24ರೊಳಗೆ ಸರ್ಕಾರದ ಅಭಿಪ್ರಾಯ ತಿಳಿಸುವಂತೆ ಸುಪ್ರೀಂ ಕೋರ್ಟ್ ಇದೇ 7ರಂದು ಸೂಚಿಸಿದೆ. ಆದ್ದರಿಂದ, ಈ ವಿಷಯವಾಗಿ ಎಲ್ಲರ ಅಭಿಪ್ರಾಯ ಮತ್ತು ಸಲಹೆಗಳನ್ನು ಪಡೆದುಕೊಳ್ಳಲಾಗಿದೆ. ಮುಂದಿನ ವಾರ ಸಚಿವ ಸಂಪುಟ ಉಪಸಮಿತಿ ಸಭೆ ಕರೆದು ಜನಪ್ರತಿನಿಧಿಗಳು ಹಾಗೂ ಧಾರ್ಮಿಕ ಮುಖಂಡರು ತಿಳಿಸಿರುವ ಸಲಹೆಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಿ ಕೋರ್ಟ್‌ಗೆ ತಿಳಿಸುತ್ತೇವೆ. ಅದಾದ ನಂತರ ನ್ಯಾಯಾಲಯದ ತೀರ್ಮಾನದಂತೆಯೇ ಎಲ್ಲರೂ ನಡೆದುಕೊಳ್ಳೋಣ' ಎಂದು ತಿಳಿಸಿದರು.

ದಾಖಲೆಗಳು ಶಾಶ್ವತವಾಗಿ ಇರುವಂತಹವು. ಈ ವಿಚಾರದಲ್ಲಿ ಕಾನೂನಿನ ಸಲಹೆ ಪಡೆಯಬೇಕಾಗುತ್ತದೆ. ಕರ್ನಾಟಕಕ್ಕೆ ದೇಶದಲ್ಲಿ ಒಳ್ಳೆಯ ಹೆಸರಿದೆ. ಈ ಸಮಸ್ಯೆಯನ್ನು ಹೆಚ್ಚು ದಿನ ಮುಂದಕ್ಕೆ ತೆಗೆದುಕೊಂಡು ಹೋಗುವುದಿಲ್ಲ. ಶಾಂತಿ ಸಾಮರಸ್ಯ ನೆಲೆಸುವಂತೆ ಮಾಡಬೇಕು. ಈ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಬೇಕು ಎಂದು ಸರ್ಕಾರ ತೀರ್ಮಾನಿಸಿದೆ ಎಂದರು.

'ಚಂದ್ರದ್ರೋಣ ಪರ್ವತದಲ್ಲಿರುವ ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ ಕರ್ನಾಟಕದಲ್ಲಿ ಭಾವೈಕ್ಯತೆಯ ಸ್ಥಳ. 1975ರವರೆಗೆ ಒಂದು ರೀತಿಯ ಕಾರ್ಯಕ್ರಮಗಳು ನಡೆದರೆ, ಆ ನಂತರದ ದಿನಗಳಲ್ಲಿ ಅನೇಕ ಗೊಂದಲಗಳನ್ನು ಕಂಡಿದ್ದೇವೆ. ಈ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರ ಅನೇಕ ಪ್ರಯತ್ನಗಳನ್ನು ಮಾಡಿದೆ' ಎಂದರು.

ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ಇಂಧನ ಸಚಿವ ಕೆ.ಜೆ.ಜಾರ್ಜ್, ಕಂದಾಯ ಸಚಿವ ಕೃಷ್ಣ ಬೈರೇಗೌಡ, ವಕ್ಫ್ ಸಚಿವ ಜಮೀರ್ ಅಹಮದ್ ಖಾನ್, ಸಂಸದ ಕೋಟ ಶ್ರೀನಿವಾಸ್ ಪೂಜಾರಿ, ಶಾಸಕರಾದ ಎಚ್‌.ಡಿ.ತಮ್ಮಯ್ಯ, ನಯನಾ ಮೋಟಮ್ಮ, ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಮತ್ತು ಧಾರ್ಮಿಕ ಮುಖಂಡರು ಸಭೆಯಲ್ಲಿದ್ದರು.

ಸುದ್ದಿ 2 ನಿಮಿಷ

ಭಾಗವತ್‌ಗೆ ಝಡ್‌ಪ್ಲಸ್ ಭದ್ರತೆ ಏಕೆ?: ಬಿ.ಕೆ. ಹರಿಪ್ರಸಾದ್

ಬೆಂಗಳೂರು: ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರಿಗೆ ಝಡ್‌ಪ್ಲಸ್ ಭದ್ರತೆ ನೀಡಿರುವುದು ಎಷ್ಟು ಸರಿ ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಸಾಂವಿಧಾನಿಕ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಉನ್ನತ ಸ್ಥಾನದಲ್ಲಿರುವ ಜನಪ್ರತಿನಿಧಿಗಳಿಗೆ ಝಡ್‌ಪ್ಲಸ್ ಭದ್ರತೆ ನೀಡಲಾಗುತ್ತದೆ. ಆರ್‌ಎಸ್‌ಎಸ್ ನೋಂದಣಿಯೇ ಆಗದ ಸಂಘಟನೆ. ಅಂತಹ ಸಂಘಟನೆಯ ಮುಖ್ಯಸ್ಥರ ಭದ್ರತೆಗೆ ಸಾರ್ವಜನಿಕರ ತೆರಿಗೆ ಹಣ ವ್ಯಯ ಮಾಡಲಾಗುತ್ತಿದೆ ಎಂದರು.

ಸರ್ದಾರ್ ವಲ್ಲಭಭಾಯಿ ಪಟೇಲರನ್ನು ಅನುಸರಿಸಲು ಹೊರಟಿರುವ ಈಗಿನ ಕೇಂದ್ರ ಗೃಹಮಂತ್ರಿ ಅಮಿತ್ ಶಾ ಅವರು ಅಂಬೇಡ್ಕರ್‌ರವರ ಕುರಿತು ಆಡಿದ ಮಾತುಗಳು ಸಂಘ ಪರಿವಾರದ ಗುಪ್ತ ಕಾರ್ಯಸೂಚಿ. ಅಂಬೇಡ್ಕರ್ ಅವರ ಬಗ್ಗೆ ಗೌರವ ಇದ್ದರೆ ಎಳಸು ಹೇಳಿಕೆ ನೀಡುತ್ತಿರಲಿಲ್ಲ. ಬಿಜೆಪಿ, ಆರ್‌ಎಸ್‌ಎಸ್ ಎರಡೂ ಅಂಬೇಡ್ಕರ್ ಹಾಗೂ ಸಂವಿಧಾನದ ವಿರೋಧಿಗಳು. ಸಂವಿಧಾನ, ರಾಷ್ಟ್ರಧ್ವಜ ಒಪ್ಪದವರು, ರಾಮಮಂದಿರ ಸ್ಥಾಪನೆಯ ದಿನವನ್ನೇ ಸ್ವಾತಂತ್ರ್ಯ ಎನ್ನುವವರು ಭಾರತದ ತಾಲಿಬಾನಿಗಳು ಎಂದು ದೂರಿದರು.

ಬಿ.ಎಸ್. ಯಡಿಯೂರಪ್ಪ ನಾಗಪುರ ವಿಶ್ವವಿದ್ಯಾನಿಲಯದ ಹಳೇ ವಿದ್ಯಾರ್ಥಿ. ಅಲ್ಲಿ ಪಡೆದ ಸುಳ್ಳಿನ ತರಬೇತಿಯನ್ನು ರಾಜ್ಯದಲ್ಲಿ ಪ್ರಯೋಗಿಸುತ್ತಿದ್ದಾರೆ. ಸಂಸದ ಬಸವರಾಜ ಬೊಮ್ಮಾಯಿ ಅವರು ಹೊಸದಾಗಿ ಬಿಜೆಪಿಗೆ ಸೇರಿದ್ದಾರೆ. ಅವರು ಸರ್ವಪಕ್ಷ ಸದಸ್ಯರು. ಅವರ ಟೀಕೆಗೆ ಮನ್ನಣೆ ನೀಡಲ್ಲ ಎಂದು ಪ್ರತಿಕ್ರಿಯಿಸಿದರು.

ಬಾಲಕಿ ಮೇಲೆ ಅತ್ಯಾಚಾರ ಖಂಡಿಸಿ ಪಂಜಿನ ಮೆರವಣಿಗೆ



ಕೆ.ಆರ್.ಪುರ: ಹೊಯ್ಸಳನಗರದಲ್ಲಿ ಆರು ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿರುವ ಘಟನೆಯನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಕುಮಾರ್ ಶೆಟ್ಟಿ) ಬಣದ ಕಾರ್ಯಕರ್ತರು ಕೆ.ಆರ್.ಪುರದ ರಾಷ್ಟ್ರೀಯ ಹೆದ್ದಾರಿ ಬಳಿಯ ಬಿಬಿಎಂಪಿ ಕಚೇರಿಯಿಂದ ವಿನಾಯಕ ದೇವಸ್ಥಾನವರೆಗೆ ಪಂಜಿನ ಮೆರವಣಿಗೆ ನಡೆಸಿದರು.

ವೇದಿಕೆಯ ಕೆ.ಆರ್.ಪುರ ಘಟಕದ ಅಧ್ಯಕ್ಷ ಕೃಷ್ಣಮೂರ್ತಿ ಮಾತನಾಡಿ, 'ಹೊಯ್ಸಳನಗರದಲ್ಲಿ ಕಟ್ಟಡದ ಕೂಲಿ ಕೆಲಸಕ್ಕೆ ಬಂದಿದ್ದ ಕಾರ್ಮಿಕರ ಆರು ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಮಾಡಿರುವ ಘಟನೆ ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ. ಅತ್ಯಾಚಾರ ಮಾಡಿರುವ ಆರೋಪಿಯನ್ನು ಗಲ್ಲು ಶಿಕ್ಷೆಗೆ ಗುರಿಪಡಿಸಬೇಕು' ಎಂದು ಆಕ್ರೋಶ ವ್ಯಕ್ತಪಡಿಸಿದರು.



ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ ಪ್ರದಾನ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಚಿಕ್ಕಮಗಳೂರಿನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 2022ನೇ ಸಾಲಿನ ಗೌರವ ಪ್ರಶಸ್ತಿಯನ್ನು ಗದಗದ ವೀರಭದ್ರಪ್ಪ ಕಾಳಪ್ಪ ಕವಲೂರು (ಸಂಪ್ರದಾಯ ಶಿಲ್ಪ), ಚಿಕ್ಕಮಗಳೂರಿನ ಎಸ್.ಪಿ. ಫಣಿಯಾಚಾರ್ (ಸಂಪ್ರದಾಯ ಶಿಲ್ಪ), ಯಾದಗಿರಿಯ ಬನಪ್ಪ ಬಡಿಗೇರ (ಜಾನಪದ ಶಿಲ್ಪ), ಬೆಂಗಳೂರಿನ ಗೋಪಿನಾಥ್ ಎಸ್. (ಸಮಕಾಲೀನ ಶಿಲ್ಪ) ಹಾಗೂ ಶಿವಮೊಗ್ಗದ ಸಿ.ವಿ. ರಾಮಕೃಷ್ಣ (ಸಿಮೆಂಟ್ ಶಿಲ್ಪ), 2023ನೇ ಸಾಲಿನ ಗೌರವ ಪ್ರಶಸ್ತಿಯನ್ನು ಬಾಗಲಕೋಟೆಯ ಅಲ್ಲಿಸಾಬ್ ಸೈ ನದಾಫ್ (ಸಂಪ್ರದಾಯ ಶಿಲ್ಪ), ಹಾವೇರಿಯ ಮಾನಪ್ಪ ಷಣ್ಮುಖಪ್ಪ ಬಡಿಗೇರ (ಸಂಪ್ರದಾಯ ಶಿಲ್ಪ), ಕಲಬುರಗಿಯ ವೀರಣ್ಣ ಶಿಲ್ಪಿ (ಸಂಪ್ರದಾಯ ಶಿಲ್ಪ), ಬೆಂಗಳೂರಿನ ಶಾಂತಮಣಿ ಎಂ. (ಸಮಕಾಲೀನ ಶಿಲ್ಪ) ಹಾಗೂ ದಾವಣಗೆರೆಯ ಟಿ. ಶ್ರೀನಿವಾಸ್ (ಸಿಮೆಂಟ್ ಶಿಲ್ಪ) ಅವರಿಗೆ ಪ್ರದಾನ ಮಾಡಲಾಯಿತು. ಅಕಾಡೆಮಿ ಅಧ್ಯಕ್ಷ ಎಂ.ಸಿ.ರಮೇಶ್, ನಗರಸಭೆ ಅಧ್ಯಕ್ಷೆ ಸುಜಾತಾ ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರಮೇಶ್ ಉಪಸ್ಥಿತರಿದ್ದರು

ಶ್ರವಣ ದೋಷ ಇರುವವರಿಗೆ ಆಡಿಯೊ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಲನಚಿತ್ರಗಳ ಪ್ರದರ್ಶನದ ವೇಳೆ ಅಂಧ ಮತ್ತು ಶ್ರವಣದೋಷ ಇರುವವರಿಗೆ ಆಡಿಯೊ ವಿವರಣೆ ನೀಡುವ ಪರಿಣತ ತಂತ್ರಜ್ಞರನ್ನು ಒದಗಿಸುವ ಮಾನದಂಡಗಳು ಸದ್ಯ ಒಂದಕ್ಕಿಂತ ಹೆಚ್ಚು ಭಾಷೆಗಳಲ್ಲಿ ಸರ್ಟಿಫೈಡ್ ಮಾಡಲಾದ ಚಲನಚಿತ್ರಗಳಿಗೆ ಅನ್ವಯವಾಗಲಿದೆ' ಎಂದು ಕೇಂದ್ರ ಸರ್ಕಾರ ಹೈಕೋರ್ಟ್‌ಗೆ ಅರುಹಿದೆ.

ಕೇಂದ್ರ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯ 2024ರ ಮಾರ್ಚ್ 15ರಂದು ಹೊರಡಿಸಿದ್ದ ಮಾನದಂಡಗಳನ್ನು ಪ್ರಶ್ನಿಸಿ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿಯ ಗೌರವ ಕಾರ್ಯದರ್ಶಿ ಸಿ.ಪಿ. ಕುಮಾರ್ ಹಾಗೂ ಇತರರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ. ಅರವಿಂದ ಕಾಮತ್, 'ಚಿತ್ರ ಮಂದಿರಗಳಲ್ಲಿ ಚಲನಚಿತ್ರಗಳ ಪ್ರದರ್ಶನದ ವೇಳೆ ಅಂಧ ಮತ್ತು ಶ್ರವಣದೋಷ ಇರುವವರಿಗೆ ಆಡಿಯೊ ವಿವರಣೆ ನೀಡುವ ಪರಿಣತ ತಂತ್ರಜ್ಞರನ್ನು ಒದಗಿಸುವ ಮಾನದಂಡಗಳು ಸದ್ಯ ಒಂದಕ್ಕಿಂತ ಹೆಚ್ಚು ಭಾಷೆಗಳಲ್ಲಿ ಸರ್ಟಿಫೈಡ್ ಮಾಡಲಾದ ಚಲನಚಿತ್ರಗಳಿಗೆ ಅನ್ವಯವಾಗಲಿದೆ' ಎಂದು ಸ್ಪಷ್ಟಪಡಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, 'ಒಂದಕ್ಕಿಂತ ಹೆಚ್ಚು ಭಾಷೆಗಳಲ್ಲಿ ಸರ್ಟಿಫೈಡ್ ಮಾಡಲಾದ ಚಲನಚಿತ್ರಗಳಿಗೆ ಮಾನದಂಡಗಳು ಅನ್ವಯವಾಗಲಿವೆ ಎಂದು ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಿದೆ. ಕನ್ನಡ ಭಾಷೆಯ ಚಲನಚಿತ್ರಗಳ ವಿಚಾರವಾಗಿ ಅರ್ಜಿದಾರರು ಆತಂಕ ವ್ಯಕ್ತಪಡಿಸಿದ್ದಾರೆ. ಆದರೆ, ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಿರುವ ಹಿನ್ನೆಲೆಯಲ್ಲಿ ಈ ಅರ್ಜಿ ವಿಚಾರಣೆ ನಡೆಸುವ ಅಗತ್ಯವಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿ ವಿಲೇವಾರಿ ಮಾಡಿತು.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜಿ.ಆರ್. ಮೋಹನ್ ವಾದ ಮಂಡಿಸಿದರು.

'ಜನಜಾಗೃತಿಗೆ ಮಠಾಧೀಶರು ನಿರ್ಧಾರ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಲಿಂಗಾಯತ ವಿಷಯಕ್ಕೆ ಸಂಬಂಧಿಸಿದಂತೆ ಹಸ್ತಕ್ಷೇಪ, ದಬ್ಬಾಳಿಕೆ ಮಾಡುವುದರ ವಿರುದ್ಧ ಜನ ಜಾಗೃತಿ ಮೂಡಿಸುವ ಉದ್ದೇಶವಿದೆ. ಈ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲು ಸಮಿತಿ ರಚಿಸಲಾಗಿದೆ' ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ್ ತಿಳಿಸಿದರು.

ಇಲ್ಲಿ ಶುಕ್ರವಾರ ಲಿಂಗಾಯತ ಮಠಾಧೀಶರ ಒಕ್ಕೂಟದ ಸಮಾಲೋಚನಾ ಸಭೆ ಬಳಿಕ ಮಾತನಾಡಿದ ಅವರು, 'ಜನ ಜಾಗೃತಿ ಕಾರ್ಯಕ್ರಮ ರೂಪುರೇಷೆಗೆ ಸಂಬಂಧಿಸಿದಂತೆ ಐವರು ಮಠಾಧೀಶರು ಮತ್ತು ವಿವಿಧ ಸಂಘಟನೆಗಳ ಐವರು ಪ್ರತಿನಿಧಿಗಳುಳ್ಳ ಸಮಿತಿ ರಚಿಸಲಾಗಿದೆ' ಎಂದರು.

'ಜನ ಜಾಗೃತಿ ಕಾರ್ಯಕ್ರಮ ಎಲ್ಲಿಂದ ಆರಂಭಿಸಬೇಕು, ಯಾವುದೆಲ್ಲ ಸಂದೇಶ ನೀಡಬೇಕು ಎಂಬುದನ್ನು ಸಮಿತಿ ತೀರ್ಮಾನಿಸಲಿದೆ. ಜಾಗತಿಕ ಲಿಂಗಾಯತ ಮಹಾಸಭಾ, ಬಸವ ಸಂಘಟನೆಗಳ ವತಿಯಿಂದ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ' ಎಂದರು.

ಮೊಬೈಲ್ ಪತ್ತೆಗೆ 'ಸಂಚಾರ್ ಸಾಥಿ'

ನವದೆಹಲಿ (ಪಿಟಿಐ): ಕಳ್ಳತನ ಆಗಿರುವ ಅಥವಾ ಕಳೆದುಹೋದ ಮೊಬೈಲ್ ಫೋನ್‌ಗಳನ್ನು ಬ್ಲಾಕ್ ಮಾಡುವುದಕ್ಕಾಗಿ ದೂರಸಂಪರ್ಕ ಇಲಾಖೆಯು ಶುಕ್ರವಾರ 'ಸಂಚಾರ್ ಸಾಥಿ' ಎಂಬ ಹೊಸ ಆ್ಯಪ್ ಅನ್ನು ಪರಿಚಯಿಸಿದೆ.

ಬಳಸುವ ವಿಧಾನ ಹೇಗೆ?: ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಈ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಆ್ಯಂಡ್ರಾಯ್ಡ್, ಐಒಎಸ್ ಕಾರ್ಯಾಚರಣೆ ವ್ಯವಸ್ಥೆ ಇರುವ ಸ್ಮಾರ್ಟ್‌ಫೋನ್‌ಗಳಿಗೆ ಈ ಆ್ಯಪ್ ಲಭ್ಯವಾಗಲಿದೆ.

ಆ್ಯಪ್ ವೈಶಿಷ್ಟ್ಯಗಳೇನು?:

ವಂಚನೆ ತಡೆ: ಬಳಕೆದಾರರು ಈ ಆ್ಯಪ್ ಮೂಲಕ ಅನಾಮಧೇಯ ಕರೆಗಳು ಮತ್ತು ಸಂದೇಶಗಳ ಬಗ್ಗೆ ವರದಿ ಮಾಡಬಹುದು. ಇದರಿಂದ ವಂಚನೆ ತಡೆಗಟ್ಟುವುದು ಸುಲಭ

ಫೋನ್ ಬ್ಲಾಕ್/ ಅನ್‌ಲಾಕ್ ವ್ಯವಸ್ಥೆ: ಕಳೆದುಹೋದ ಅಥವಾ ಕಳವಾದ ಫೋನ್ ಅನ್ನು ತಕ್ಷಣವೇ ಬ್ಲಾಕ್ ಮಾಡಿಸಬಹುದು.

ನೈಜತೆ ಪತ್ತೆ: ನಾಗರಿಕರು ತಮ್ಮ ಹೆಸರಿನಲ್ಲಿ ಪಡೆದಿರುವ ಎಲ್ಲಾ ಮೊಬೈಲ್ ಸಂಪರ್ಕಗಳ ಬಗ್ಗೆ ಇದರಲ್ಲಿ ಪರಿಶೀಲಿಸಬಹುದು. ಅನಧಿಕೃತವಾಗಿ ಬಳಕೆಯಾಗುತ್ತಿದೆಯೇ ಎಂಬುದನ್ನು ಖಚಿತ ಪಡಿಸಿಕೊಳ್ಳಬಹುದು. ಅಲ್ಲದೆ, ಬಳಸಿದ ಫೋನ್ ಖರೀದಿಸುವ ಮೊದಲು ಅದರ ಅಸಲಿತನದ ಪರೀಕ್ಷೆಗೂ ಅವಕಾಶವಿದೆ



ನೋ ಯುವರ್ ಮೊಬೈಲ್: ಗ್ರಾಹಕರು ತಾವು ಖರೀದಿಸುವ ಸೆಕೆಂಡ್‌ಹ್ಯಾಂಡ್ ಫೋನ್ ಕಳ್ಳತನದ ಮೂಲಕ ತಮ್ಮ ಕೈಸೇರುತ್ತಿದೆಯೇ ಎಂಬ ಬಗ್ಗೆ ಪರೀಕ್ಷಿಸಿಕೊಳ್ಳಬಹುದಾಗಿದೆ

ಬೆಂಗಳೂರು ರೇಸ್

'ಕಲಮಿಟ್ಸಿ' ಗೆಲ್ಲುವ ನಿರೀಕ್ಷೆ

ಆರ್.ಡಬ್ಲ್ಯು.ಐ.ಟಿ.ಸಿ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕಲಮಿಟ್ಸಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮೈ ಸಾಲಿಟೇರ್ 5, ಬೆನ್ನಿಮಾ 1, ಲೇಡಿ ಇನ್ವಿಕ್ಟಸ್ 2
2ನೇ ರೇಸ್: ಡೆಸರ್ಟ್ ಕಿಂಗ್ಡಮ್ 4, ಲಕ್ಸ್ ಎಟರ್ನಾ 3, ಮಿಷಿಕೊ 5
3ನೇ ರೇಸ್: ನಾಟಿ ಸ್ಕಾಟಿ 2, ಹಬಿಬ್ಬಿ 3, ಸೂಪರ್‌ಚಾರ್ಜ್ 6
4ನೇ ರೇಸ್: ನೈರೋಬಿ 1, ಡಫಿ 3, ಇನ್ಫಿನೈಟ್ ಸ್ಪಿರಿಟ್ 7
5ನೇ ರೇಸ್: ಅಮೇಜಿಂಗ್ ಸ್ಪ್ರೈಡ್ 5, ಲೈವ್ ದಿ ಡ್ರೀಮ್ 2, ಕ್ಯಾಸ್ಕ್ಯಾಯ್ಸ್ 3
6ನೇ ರೇಸ್: ಸರ್ಕಲ್ ಆಫ್ ಡ್ರೀಮ್ಸ್ 1, ರೆಫ್ರೆಶ್‌ಮೆಂಟ್ 2, ಕಾಂಟೆಸ್ಸಿನ 3
7ನೇ ರೇಸ್: ಕಲಮಿಟ್ಸಿ 5, ದಿ ಪ್ರೊಟೆಕ್ಟರ್ 1, ಅರಲಿನ 6
8ನೇ ರೇಸ್: ಮೆಟ್‌ಜಿಂಗರ್ 7, ಇಂಡಿಯನ್ ಬ್ಲೂಸ್ 2, ಮ್ಯಾಪ್ಲ್ ಲೀಫ್ 3
9ನೇ ರೇಸ್: ಬ್ರೀಝ್ ಬ್ಲಸ್ಟರ್ 4, ಪೆರಿಡಾಟ್ 8, ಅಗೆರ 10

ಉತ್ತಮ ಬೆಟ್: ನಾಟಿ ಸ್ಕಾಟಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9;	1,2,3;	4,5,6	7,8,9


250 ಸ್ಥಳಗಳಲ್ಲಿ ಜಾಗೃತಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮುದಾಯ ಪ್ರಾಣಿಗಳ ಕುರಿತು ನಗರದ 250 ಸ್ಥಳಗಳಲ್ಲಿ ಜಾಗೃತಿ ಅಭಿಯಾನ ನಡೆಸಲಾಗುವುದು ಎಂದು ಬಿಬಿಎಂಪಿ ಪಶುಸಂಗೋಪನಾ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

'ಪ್ರಾಣಿಗಳ ಆರೋಗ್ಯದ ಮೂಲಕ ಸಾರ್ವಜನಿಕ ಆರೋಗ್ಯ' ಶೀರ್ಷಿಕೆಯಡಿ ಸಮುದಾಯ ಪ್ರಾಣಿಗಳೊಂದಿಗೆ ಸಹಬಾಳ್ವೆಗೆ ಜಾಗೃತಿ ಕಾರ್ಯಕ್ರಮಕ್ಕೆ ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

ಸಮುದಾಯ ಪ್ರಾಣಿಗಳಿಗಾಗಿ ಪಾಲಿಕೆಯ ಪಶುಪಾಲನಾ ವಿಭಾಗ ಹಮ್ಮಿಕೊಂಡಿರುವ ಕಾರ್ಯಕ್ರಮಗಳು, ಕಾಯ್ದೆಗಳು, ನಾಗರಿಕರ ಜವಾಬ್ದಾರಿಗಳ ಕುರಿತು ಅರಿವು ಮೂಡಿಸಲಾಗುತ್ತದೆ. ನಾಗರಿಕರಿಂದ ಸಮುದಾಯದ ಪ್ರಾಣಿಗಳಿಗೆ ಆಗುವ ಸಮಸ್ಯೆಗಳನ್ನು ತಪ್ಪಿಸಲು ಕೈಗೊಳ್ಳಲಾಗಿರುವ ಕ್ರಮಗಳು, ಜನರ ಭಾಗವಹಿಸುವಿಕೆ, ಪ್ರಾಣಿಗಳ ಜೊತೆಗೆ ನಾಗರಿಕರು ಸೌಹಾರ್ದದಿಂದ ವರ್ತಿಸುವ ಬಗ್ಗೆ ತಿಳಿವಳಿಕೆ ನೀಡಲಾಗುತ್ತದೆ ಎಂದರು.



ನಗರದ ಎಲ್ಲ ಎಂಟು ವಲಯಗಳಲ್ಲಿ ಸಮುದಾಯದ ಪ್ರಾಣಿಗಳ ಕುರಿತು ಬೀದಿ ನಾಟಕ, ನೃತ್ಯದ ಮೂಲಕ ನಾಗರಿಕರಲ್ಲಿ ಅರಿವು ಮೂಡಿಸಲಾಗುತ್ತದೆ. ಪ್ರಾಣಿಗಳನ್ನು ಸ್ಥಳಾಂತರಿಸುವುದು ಅಥವಾ ಅವುಗಳಿಗೆ ಆಹಾರ ಮತ್ತು ನೀರು ಸಿಗದಂತೆ ಮಾಡುವುದು, ಪ್ರಾಣಿಗಳನ್ನು ಕೊಲ್ಲುವುದು ಅಥವಾ ಅಂಗವಿಕಲಗೊಳಿಸುವುದು ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 325ರ ಅಡಿ ಶಿಕ್ಷಾರ್ಹ ಅಪರಾಧವಾಗಿದೆ. ಐದು ವರ್ಷಗಳ ಜೈಲು ಹಾಗೂ ದಂಡವನ್ನೂ ವಿಧಿಸಬಹುದಾಗಿದೆ ಎಂದು ಮಾಹಿತಿ ನೀಡಿದರು. ಜಾಗೃತಿ ಕಾರ್ಯಕ್ರಮಗಳ ಪಟ್ಟಿಯನ್ನು ಪಶುಪಾಲನಾ ವಿಭಾಗದ ಸಾಮಾಜಿಕ ಜಾಲತಾಣ @bbmp_animalhusbandry ದಲ್ಲಿ ಲಭ್ಯವಿದೆ ಎಂದರು.

ರೊಬೊಟಿಕ್ ತಂತ್ರಜ್ಞಾನ: ಮಂಡಿ ಚಿಪ್ಪು ಬದಲಿ ಕಾರ್ಯಾಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೊಬೊಟಿಕ್ ತಂತ್ರಜ್ಞಾನ ಆಧಾರಿತ ಮಂಡಿ ಚಿಪ್ಪು ಬದಲಿ ಶಸ್ತ್ರಚಿಕಿತ್ಸೆ ಕಾರ್ಯಾಗಾರವು ಪಿಇಎಸ್ ವಿಶ್ವವಿದ್ಯಾಲಯದ ಎಲೆಕ್ಟ್ರಾನಿಕ್ ಸಿಟಿ ಕ್ಯಾಂಪಸ್‌ನಲ್ಲಿರುವ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಶುಕ್ರವಾರ ನಡೆಯಿತು.

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಡೀನ್ ಮತ್ತು ನಿರ್ದೇಶಕ ಡಾ.ರಮೇಶ್ ಕೃಷ್ಣ ಕಾರ್ಯಾಗಾರ ಉದ್ಘಾಟಿಸಿದರು.

ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ಮತ್ತು ಸಮ-ಕುಲಾಧಿಪತಿ ಜವಾಹರ್ ದೊರೆಸ್ವಾಮಿ ಮತ್ತು ಪಿಇಎಸ್ ವಿಶ್ವವಿದ್ಯಾಲಯದ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯಕೀಯ ನಿರ್ದೇಶಕ ಸುರೇಶ್ ಕೃಷ್ಣಮೂರ್ತಿ ಅವರ ಮಾರ್ಗದರ್ಶನದಲ್ಲಿ ಕಾರ್ಯಾಗಾರ ನಡೆಯಿತು.

ಒಂದೇ ದಿನದಲ್ಲಿ 3 ವಿಭಿನ್ನ ರೊಬೋಟಿಕ್ ವ್ಯವಸ್ಥೆಗಳೊಂದಿಗೆ 4 ಮಂಡಿ ಚಿಪ್ಪು ಬದಲಿ ಶಸ್ತ್ರಚಿಕಿತ್ಸೆಗಳನ್ನು ನೇರ ಪ್ರಸಾರ ಮಾಡಲಾಯಿತು.

ಆರ್ಥೋಪೆಡಿಕ್ಸ್ ವಿಭಾಗದ ಮುಖ್ಯಸ್ಥ ಡಾ.ಅವಿನಾಶ್ ಮಾತನಾಡಿ, 'ರೊಬೊಟಿಕ್ಸ್ ಪರಿಕಲ್ಪನೆ ಭಾರತಕ್ಕೆ ಹೊಸದಲ್ಲ' ಎಂದು ಪ್ರತಿಪಾದಿಸಿದರು. 'ತಾಂತ್ರಿಕ ಕ್ರಾಂತಿಯ ಮಧ್ಯೆ ಯಂತ್ರ ಕಲಿಕೆ, ಆಳವಾದ ಕಲಿಕೆ ಮತ್ತು ಕೃತಕ ಬುದ್ಧಿಮತ್ತೆ ನಮ್ಮ ಜೀವನವನ್ನು ಪರಿವರ್ತಿಸುತ್ತಿದೆ' ಎಂದು ತಿಳಿಸಿದರು.

ಪಿಇಎಸ್ ವೈದ್ಯಕೀಯ ಕಾಲೇಜಿನ ಸಹಾಯಕ ವೈದ್ಯಕೀಯ ನಿರ್ದೇಶಕಿ ಡಾ. ರೂಪಾ ಸುರೇಶ್, ಪಿಇಎಸ್ ವಿಶ್ವವಿದ್ಯಾಲಯದ ಕುಲಪತಿ ಜೆ.ಸೂರ್ಯಪ್ರಸಾದ್, ಸಮ-ಕುಲಪತಿ ಡಾ.ನಾಗಾರ್ಜುನ ಸಾದಿನೇನಿ, ಡೀನ್ ಡಾ. ಹರಿಪ್ರಸಾದ್, ವೈದ್ಯಕೀಯ ಅಧೀಕ್ಷಕ ಡಾ. ಮಂಜುನಾಥ್ ಭಾಗವಹಿಸಿದ್ದರು.


ನಗರದಲ್ಲಿ ಇಂದು

ಅಂಗವಿಕಲ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಮೇಳ: ಮುಖ್ಯ ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ದಾಸ್ ಸೂರ್ಯವಂಶಿ, ರಾಘವೇಂದ್ರ ಟಿ., ಎನ್. ಎಸ್. ಮಹದೇವ ಪ್ರಸಾದ್, ಆಯೋಜನೆ: ಅಮರ ಸೌಂದರ್ಯ ಫೌಂಡೇಷನ್, ಸ್ಥಳ: ಮಲ್ಲೇಶ್ವರ ಮೈದಾನ, ಬೆಳಿಗ್ಗೆ 8ರಿಂದ

178ನೇ ಸದ್ಗುರು ತ್ಯಾಗಬ್ರಹ್ಮ ವೈದಿಕ ಆರಾಧನಾ ಕೈಂಕರ್ಯ ಮತ್ತು ಸಂಗೀತೋತ್ಸವ: ಪಂಚರತ್ನ ಕೃತಿ ಗೋಷ್ಠಿ ಗಾಯನ: ಸಾನ್ನಿಧ್ಯ: ವಿಧುಶೇಖರ ಭಾರತಿ ಸ್ವಾಮೀಜಿ, ಗಾಯನ: ಆರ್.ಎನ್.ತ್ಯಾಗರಾಜನ್ ಮತ್ತು ಶಿಷ್ಯ ವೃಂದ, ನಾಗಮಣಿ ಶ್ರೀನಾಥ್ ಮತ್ತು ಶಿಷ್ಯ ವೃಂದ, ಆಯೋಜನೆ: ಸದ್ಗುರು ಶ್ರೀ ತ್ಯಾಗಬ್ರಹ್ಮ ಆರಾಧನಾ ಕೈಂಕರ್ಯ ಟ್ರಸ್ಟ್, ಸ್ಥಳ: ಶೃಂಗೇರಿ ಶಂಕರ ಮಠ, ಚಾಮರಾಜಪೇಟೆ, ಬೆಳಿಗ್ಗೆ 8ರಿಂದ

ಕಲೆ ಮತ್ತು ವಿಜ್ಞಾನ ಪ್ರದರ್ಶನ: ಉದ್ಘಾಟನೆ: ಎಸ್. ಟಿ. ಸೋಮಶೇಖರ್, ಮುಖ್ಯ ಅತಿಥಿಗಳು: ಪಿ.ವಿ. ಶಶಿಕುಮಾರ್, ಕೃಷ್ಣಪ್ಪ, ಆಯೋಜನೆ ಹಾಗೂ ಸ್ಥಳ: ರಾಧಾಕೃಷ್ಣ ಸ್ಕೂಲ್ ಆಫ್ ಎಜುಕೇಶನ್, ಕೆ.ಎಚ್.ಬಿ. ಕಾಲೊನಿ, ಬೆಳಿಗ್ಗೆ 10

ಬ್ರಾಹ್ಮಣ ಮಹಾ ಸಮ್ಮೇಳನ: ಬೆಳಿಗ್ಗೆ 5.30: ಗಾಯತ್ರಿ ಮಹಾಯಾಗ ಆರಂಭ, ಬೆಳಿಗ್ಗೆ 8.30: ಗಾಯತ್ರಿ ಮಹಾಯಾಗ ಪೂರ್ಣಾಹುತಿ, ಬೆಳಿಗ್ಗೆ 11.30: ಸಭಾ ಕಾರ್ಯಕ್ರಮ: ಸಮ್ಮೇಳನ ಉದ್ಘಾಟನೆ: ವಿಧುಶೇಖರ ಭಾರತಿ ಸ್ವಾಮೀಜಿ, ಸಾನ್ನಿಧ್ಯ: ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ, ಪುರುಷೋತ್ತಮ ಭಾರತಿ ಸ್ವಾಮೀಜಿ, ಮಾಧವಾನಂದ ಭಾರತಿ ಸ್ವಾಮೀಜಿ, ಅದ್ವೈತಾನಂದ ಭಾರತಿ ಸ್ವಾಮೀಜಿ, ಮುಖ್ಯ ಅತಿಥಿಗಳು: ರಾಜನಾಥ್ ಸಿಂಗ್, ನಿತಿನ್ ಗಡ್ಕರಿ, ಪ್ರಹ್ಲಾದ ಜೋಶಿ, ಎಚ್‌.ಡಿ. ಕುಮಾರಸ್ವಾಮಿ, ಭಜನ್‌ಲಾಲ್ ಶರ್ಮಾ, ದಿನೇಶ್ ಗುಂಡೂರಾವ್, ಬಿ.ಎಲ್. ಸಂತೋಷ್, ಬಿ.ವೈ. ವಿಜಯೇಂದ್ರ, ಡಾ.ಸಿ.ಎನ್. ಅಶ್ವತ್ಥನಾರಾಯಣ, ತೇಜಸ್ವಿ ಸೂರ್ಯ, ಅಧ್ಯಕ್ಷತೆ: ಅಶೋಕ ಹಾರನಹಳ್ಳಿ, ಮಧ್ಯಾಹ್ನ 2: ನಾದ ಬ್ರಹ್ಮರಿಗೆ ನಮನ, ಮಧ್ಯಾಹ್ನ 3: ಬ್ರಹ್ಮತೇಜ ಪ್ರಶಸ್ತಿ ಪ್ರದಾನ, ವಿಪ್ರ ಸಾಧಕರಿಗೆ ಗೌರವ ಸಮರ್ಪಣೆ, ಸಂಜೆ 4.30: ಸತ್ಯಾತ್ಮತೀರ್ಥ ಸ್ವಾಮೀಜಿ ಅವರಿಂದ ಆಶೀರ್ವಚನ, ಸಂಜೆ 5.30ರಿಂದ: ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ: ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬಳ್ಳಾರಿ ರಸ್ತೆ




ವಿಧುಶೇಖರ ಭಾರತಿ ಸ್ವಾಮೀಜಿ

125ನೇ ಕನ್ನಡ ತಂತ್ರಾಂಶ ಸಂಪರ್ಕ ಭಾಷಾ ಶಿಬಿರ: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಮುಖ್ಯ ಅತಿಥಿ: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ಆರ್.ಎ. ಪ್ರಸಾದ್, ಆಯೋಜನೆ: ಕನ್ನಡ ಗಣಕ ಉಚಿತ ತರಬೇತಿ ಕೇಂದ್ರ, ಸ್ಥಳ: ಡಾ.ರಾಜ್‌ಕುಮಾರ್ ತಾಂತ್ರಿಕ ಕುಟೀರ, 6ನೇ ಅಡ್ಡ ರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 11.40

ಇಕೆಬಾನ, ಪುಷ್ಪಭಾರತಿ, ಪುಷ್ಪ ರಂಗೋಲಿ, ತರಕಾರಿ ಕೆತ್ತನೆ, ಡಚ್ ಹೂವಿನ ಜೋಡಣೆ, ಥಾಯ್ ಆರ್ಟ್, ಜಾನೂರು ಮತ್ತು ಬೋನ್ಸಾಯ್ ಗಿಡಗಳ ಪ್ರದರ್ಶನ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಪ್ರೇಮಾ, ಉಪಸ್ಥಿತಿ: ರಮೇಶ್ ಡಿ.ಎಸ್., ಎಂ.ಜಗದೀಶ್, ಸ್ಥಳ: ತೋಟಗಾರಿಕೆ ಮಾಹಿತಿ ಕೇಂದ್ರ, ಲಾಲ್‌ಬಾಗ್, ಮಧ್ಯಾಹ್ನ 1

'ಕನ್ನಡದ ಮೌಲಿಕ ಕೃತಿ ಪರಿಚಯ ಮಾಲಿಕೆ 01: 'ಮರಾಠಿ ಆತ್ಮಕಥೆಗಳು' ವಿಶೇಷ ಉಪನ್ಯಾಸ: ರವಿಕುಮಾರ್ ನೀಹ, ಅಧ್ಯಕ್ಷತೆ: ಆರ್.ಎಸ್. ಶಾಂತಾರಾಮ್, ಆಯೋಜನೆ ಹಾಗೂ ಸ್ಥಳ: ದೀಪಾ ಅಂಧ ಮಕ್ಕಳ ವಸತಿ ಪ್ರೌಢಶಾಲೆ, ಭಾರತ್ ನಗರ 2ನೇ ಹಂತ, ಮಾಗಡಿ ರಸ್ತೆ, ಸಂಜೆ 4

ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ: ಗುರುರಾಜ ಹೊಸಕೋಟೆ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 4



ಗುರುರಾಜ ಹೊಸಕೋಟೆ

ದಾಸವಾಣಿ: ಮೈಸೂರು ರಾಮಚಂದ್ರಾಚಾರ್ ಮತ್ತು ಸಂಗಡಿಗರು, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 5.30

ತಿಂಗಳ ನಾಟಕ ಸಂಭ್ರಮ: ಎಂ. ಗಣೇಶ್ ನಿರ್ದೇಶನದಲ್ಲಿ 'ವಾಲಿವಧೆ' ನಾಟಕ ಪ್ರದರ್ಶನ, ತಿಂಗಳ ಅತಿಥಿ: ಶಶಿಧರ ಅಡಪ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

'ನಾಯಿ ಕಳೆದಿದೆ' ನಾಟಕ ಪ್ರದರ್ಶನ: ತಂಡ: ನಮ್ಮೆ ನಟನೆ ಸಾಂಸ್ಕೃತಿಕ ವೇದಿಕೆ, ಸ್ಥಳ: ಡಾ.ಸಿ. ಅಶ್ವತ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7

ಯಕ್ಷ ವೈಭವ: ಎಂ.ಎ. ಹೆಗಡೆ ವಿರಚಿತ 'ಲವ ಕುಶ' ಯಕ್ಷಗಾನ ಪ್ರಸಂಗ, ಹಿಮ್ಮೇಳ: ಕೇಶವ ಹೆಗಡೆ ಕೊಳಗಿ, ಎ.ಪಿ. ಪಾಠಕ್. ಮನೋಜ್ ಆಚಾರ್ಯ, ಮುಮ್ಮೇಳ: ಕೆ.ಜಿ. ಮಂಜುನಾಥ್ ಕೆಳಮನೆ, ದತ್ತಮೂರ್ತಿ ಭಟ್ಟ, ಅಶೋಕ್ ಭಟ್ಟ ಸಿದ್ದಾಪುರ, ನವ್ಯ ಡಿ. ಭಟ್ಟ, ಸದಾಶಿವ ಭಟ್ಟ ಯಲ್ಲಾಪುರ, ವೆಂಕಟೇಶ ಹೆಗಡೆ ಬಗರಿಮಕ್ಕಿ, ಶಿವು ಶಿರಳಗಿ, ಸನ್ಮಾನ: ಕೇಶವ ಹೆಗಡೆ ಕೊಳಗಿ, ಆಯೋಜನೆ: ಸಪ್ತಕ ಬೆಂಗಳೂರು, ಸ್ಥಳ: ಎಂ.ಇ.ಎಸ್. ಕಿಶೋರ ಕೇಂದ್ರ, ಮಲ್ಲೇಶ್ವರ, ಸಂಜೆ 5.30



'ಸ್ವತಂತ್ರ ಧರ್ಮದ ಮಾನ್ಯತೆ ಸಿಗಬೇಕಿತ್ತು'

ವೀರಶೈವ ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್: ಸಚಿವ ಎಂ.ಬಿ.ಪಾಟೀಲ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಲಿಂಗಾಯತಕ್ಕೆ ಸ್ವತಂತ್ರ ಧರ್ಮ ಮಾನ್ಯತೆ ಸಿಕ್ಕಿದ್ದರೆ ಸಮುದಾಯದ ಎಲ್ಲ ಉಪಪಂಗಡಗಳಿಗೆ ಸೌಲಭ್ಯ ಸಿಗುತ್ತಿದ್ದವು. ಸಮುದಾಯದ ಜನಸಂಖ್ಯೆ ಶೇ 17ರಿಂದ 30ರಷ್ಟು ಆಗುತ್ತಿತ್ತು' ಎಂದು ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಶುಕ್ರವಾರ ಇಲ್ಲಿ ಪ್ರತಿಪಾದಿಸಿದರು.

ನಗರದಲ್ಲಿ ಅಂತರರಾಷ್ಟ್ರೀಯ ಲಿಂಗಾಯತ ಯುವ ವೇದಿಕೆಯು ಶುಕ್ರವಾರದಿಂದ ಆಯೋಜಿಸಿರುವ ಮೂರು ದಿನಗಳ 'ವೀರಶೈವ ಲಿಂಗಾಯತ ಗ್ಲೋಬಲ್ ಬಿಸಿನೆಸ್ ಕಾನ್‌ಕ್ಲೇವ್'ನಲ್ಲಿ ಮಾತನಾಡಿ, 'ಮೀಸಲಾತಿ ಕಾರಣಕ್ಕಾಗಿ ಲಿಂಗಾಯತ ಉಪ್ಪಾರ, ಲಿಂಗಾಯತ ಬಣಜಿಗ, ಲಿಂಗಾಯತ ಗಾಣಿಗ ಮೊದಲಾದ ಉಪ ಪಂಗಡಗಳು ಲಿಂಗಾಯತ ಬದಲು ಹಿಂದೂ ಎಂದೇ ಬರೆಸಿವೆ. ಹೀಗಾಗಿ ಜಾತಿಗಣತಿಯಲ್ಲಿ ಸಮುದಾಯದ ಉಪ ಪಂಗಡಗಳು ಹರಿದು ಹಂಚಿಹೋಗಿವೆ' ಎಂದು ಹೇಳಿದರು.

'2 'ಎ' ಮೀಸಲಾತಿಗಾಗಿ ಗಾಣಿಗ ಲಿಂಗಾಯತರು ಹಿಂದೂ ಗಾಣಿಗ ಎಂದೂ, 3 'ಎ' ಮೀಸಲಿಗೆ ರೆಡ್ಡಿ ಲಿಂಗಾಯತರು ಹಿಂದೂ ರೆಡ್ಡಿ ಎಂದೇ ಬರೆಸಿದ್ದಾರೆ. ಅದು ತಪ್ಪೆಂದು ಹೇಳಲಾರೆ. ಅವರಿಗೆ ಬೇಕಿರುವುದು ಶೈಕ್ಷಣಿಕ, ಉದ್ಯೋಗ ಮೀಸಲಾತಿ. ಲಿಂಗಾಯತ ಸ್ವತಂತ್ರ ಧರ್ಮಕ್ಕೆ ಮಾನ್ಯತೆ ಸಿಕ್ಕಿದ್ದರೆ ಈ ಎಲ್ಲ ಉಪ ಪಂಗಡಗಳಿಗೂ ನ್ಯಾಯ ಸಿಗುತ್ತಿತ್ತು' ಎಂದು ಅಭಿಪ್ರಾಯಪಟ್ಟರು.



ಮೈಸೂರಿನಲ್ಲಿ ಅಂತರರಾಷ್ಟ್ರೀಯ ಲಿಂಗಾಯತ ಯುವ ವೇದಿಕೆಯು ಶುಕ್ರವಾರದಿಂದ ಆಯೋಜಿರುವ 'ವೀರಶೈವ ಲಿಂಗಾಯತ ಬಿಸಿನೆಸ್ ಕಾನ್‌ಕ್ಲೇವ್'ನಲ್ಲಿ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪರಸ್ಪರ ಚರ್ಚೆಯಲ್ಲಿ ತೊಡಗಿದ್ದರು —ಪ್ರಜಾವಾಣಿ ಚಿತ್ರ

ಲಿಂಗಾಯತ ಸಮುದಾಯದ ನವೋದ್ಯಮಿಗಳಿಗೆ ಐಎಲ್‌ವೈಎಫ್‌ನಿಂದ ₹1 ಸಾವಿರ ಕೋಟಿ ಮೀಸಲಿಡಲಾಗುವುದು

ಕೆ.ಎಸ್.ನವೀನ್
ಐಎಲ್‌ವೈಎಫ್ ಸಂಸ್ಥಾಪಕ ಅಧ್ಯಕ್ಷ, ವಿಧಾನಪರಿಷತ್ ಸದಸ್ಯ

'ಸ್ವತಂತ್ರ ಧರ್ಮ ಹೋರಾಟವನ್ನು ವಿರೋಧಿಸಿದವರಿಗೆ ಈಗ ಅರ್ಥವಾಗಿದೆ. ವೀರಶೈವ ಮಹಾ ಅಧಿವೇಶನ ದಲ್ಲಿ ಕಾಶಿ ಸ್ವಾಮೀಜಿ ಅವರಿಗೂ ಇದನ್ನೇ ಹೇಳಿರುವೆ. ಸುತ್ತೂರು, ಸಿದ್ದಗಂಗೆ, ಗದಗ ಸೇರಿದಂತೆ ಎಲ್ಲ ಮಠಗಳ ಸ್ವಾಮೀಜಿಗಳ ಮಾರ್ಗದರ್ಶನದಲ್ಲಿ ನಿರ್ಣಯ ತೆಗೆದುಕೊಳ್ಳಬೇಕು. ಒಗ್ಗಟ್ಟಾಗಿದ್ದರೆ ಮಾತ್ರ ರಾಜಕೀಯ ಶಕ್ತಿಯಾಗಿ ಉಳಿಯುತ್ತೇವೆ. ಇಲ್ಲದಿದ್ದರೆ ನಿರಾಶರಾಗಿ ಹೋಗುತ್ತೇವೆ' ಎಂದರು.

'1871ರ ಮೈಸೂರು ರಾಜ್ಯದ ಜನಗಣತಿ ನೋಡಿದರೆ ಸ್ವತಂತ್ರ ಧರ್ಮದ ಇತಿಹಾಸ ಗೊತ್ತಾಗುತ್ತದೆ. ಹಿಂದೆ ಮಾಡಿದ ತಪ್ಪುಗಳನ್ನು ಮಾಡಬಾರದು' ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, 'ವೀರಶೈವ ಲಿಂಗಾಯತ ಸಮುದಾಯವನ್ನು ಒಡೆಯುವ ರಾಜಕೀಯ ಷಡ್ಯಂತ್ರ ನಡೆದಿತ್ತು. ಆಗ, ಶಾಮನೂರು ಶಿವಶಂಕರಪ್ಪ ದನಿ ಎತ್ತಿದ್ದರು. ಇದೀಗ ಜಾತಿಗಣತಿ ರಾಜಕೀಯ ಪಗಡೆ ವಿರುದ್ಧ ಎಂ.ಬಿ.ಪಾಟೀಲ ಮಾತನಾಡಿದ್ದಾರೆ' ಎಂದು ಅವರು ಶ್ಲಾಘಿಸಿದರು.

ಪಗಡೆಯಾಟವಲ್ಲ: 'ಜಾತಿಗಣತಿ ವರದಿಯನ್ನು ಸಿ.ಎಂ ಸಿದ್ದರಾಮಯ್ಯ ಪಗಡೆಯಾಟ ಎಂದುಕೊಂಡಿದ್ದು, ರಾಜಕೀಯ ದಾಳವನ್ನಾಗಿ ಮಾಡಿಕೊಂಡಿದ್ದಾರೆ' ಎಂದು ವಿಜಯೇಂದ್ರ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ತಮ್ಮ ಕುರ್ಚಿ ಅಲ್ಲಾಡುವಾಗ ಜಾತಿಗಣತಿ ವರದಿ ನೆನಪಿಗೆ ಬರುತ್ತದೆ. ವರದಿಯು ಅವೈಜ್ಞಾನಿಕವಾಗಿದ್ದು, ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯದ ವಿರೋಧವಿದೆ' ಎಂದರು.

'ವರದಿ ಸೋರಿಕೆಯಾಗಿದ್ದು, ಗಣತಿ ಸರಿಯಾಗಿ ಆಗಿಲ್ಲ. ಎಲ್ಲ ಜಾತಿಯವರಿಗೆ ನ್ಯಾಯ ಕೊಡುವುದಕ್ಕೆ ಬೆಂಬಲವಿದೆ. ರಾಜಕೀಯಕ್ಕಾಗಿ ಜಾತಿಗಣತಿ ಇಟ್ಟುಕೊಂಡು ಆಟವಾಡಬೇಡಿ' ಎಂದರು.

'ಮುಂದಿನ ಸಂಪುಟ ಸಭೆಯಲ್ಲಿ ಮಂಡನೆ'

ಮಂಗಳೂರು: ಜಾತಿ ಗಣತಿಗೆ ಸಂಬಂಧಿಸಿದ ವರದಿಯನ್ನು ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ವರದಿಯನ್ನು ಮಂಡಿಸುವುದಾಗಿ ಈ ಹಿಂದೆ ಜನರಿಗೆ ಭರವಸೆ ನೀಡಿದ್ದೆ. ಅದನ್ನು ಈಡೇರಿಸಲಾಗುವುದು ಎಂದರು.

'ವರದಿಗೆ ನಿಮ್ಮ ಪಕ್ಷದಲ್ಲೇ ವಿರೋಧವಿದೆಯಲ್ಲ' ಎಂಬ ಪ್ರಶ್ನೆಗೆ ಉತ್ತರಿಸಿದ ಅವರು 'ವರದಿಯಲ್ಲಿ ಏನಿದೆ ಎಂದು ನಾನೂ ನೋಡಿದಂತೆ ಯಾರಿಗೂ ಗೊತ್ತಿಲ್ಲ, ಹಾಗಿರುವಾಗ ವಿರೋಧ ಮಾಡುವುದಾದರೂ ಯಾಕೆ' ಎಂದು ಮರುಪ್ರಶ್ನೆ ಹಾಕಿದರು.

'ಅನ್ಯಾಯವಾಗದೆಂಬ ವಿಶ್ವಾಸ'

ಮೈಸೂರು: 'ಜಾತಿಗಣತಿ ವರದಿ ಮುಂದಿನ ಸಚಿವ ಸಂಪುಟ ಸಭೆ ಮುಂದೆ ಚರ್ಚೆಗೆ ಬರಲಿದ್ದು, ಅದನ್ನು ತೆರೆದ ನಂತರವೇ ಸಾಧಕ, ಬಾಧಕಗಳು ಗೊತ್ತಾಗಲಿವೆ. ಅದಕ್ಕೂ ಮುನ್ನ ಮಾತನಾಡುವುದು ಸರಿಯಲ್ಲ' ಎಂದು ಸಚಿವ ಎಂ.ಬಿ.ಪಾಟೀಲ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ವರದಿ ಜಾರಿಯಿಂದ ಯಾವುದೇ ಜಾತಿ ಸಮುದಾಯಕ್ಕೆ ಅನ್ಯಾಯವಾಗುವುದಿಲ್ಲವೆಂಬ ವಿಶ್ವಾಸವಿದೆ' ಎಂದರು.

'ಜಾತಿಗಣತಿಯಲ್ಲಿ ಲಿಂಗಾಯತ, ಒಕ್ಕಲಿಗ ಉಪ ಪಂಗಡಗಳನ್ನು ಅದೇ ಜಾತಿ ಅಡಿಯಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದು ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದು, ಕ್ರಮದ ಭರವಸೆ ನೀಡಿದ್ದಾರೆ' ಎಂದು ಮಾಹಿತಿ ನೀಡಿದರು.

ಉದ್ಯೋಗದಿಂದ ಮಾತ್ರ ಅಭಿವೃದ್ಧಿ: ನಾರಾಯಣಮೂರ್ತಿ

'ಸರ್ಕಾರ ಉದ್ಯಮಸ್ನೇಹಿ ಆಗಲಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಸರ್ಕಾರಗಳು ನೇರವಾಗಿ ಉದ್ಯೋಗ ನೀಡುವುದಿಲ್ಲ, ಉದ್ಯೋಗ ಸೃಷ್ಟಿಸುವ ಉದ್ಯಮಗಳಿಗೆ ಬೆನ್ನೆಲುಬಾಗಿ ನಿಲ್ಲಬೇಕು' ಎಂದು 'ಇನ್ಫೊಸಿಸ್' ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಪ್ರತಿಪಾದಿಸಿದರು.

ಭೇರುಂಡ ಫೌಂಡೇಶನ್ ನಗರದಲ್ಲಿ ಶುಕ್ರವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 'ಮೈಸೂರು ಉದ್ಯಮಗಳ ವೇದಿಕೆ' ಉದ್ಘಾಟಿಸಿ ಅವರು ಮಾತನಾಡಿ, 'ಗರೀಬಿ ಹಠಾವೋ ರೀತಿಯ ಘೋಷಣೆಗಳು ಹೇಳಿಕೆಗಷ್ಟೇ ಸೀಮಿತ. ಉದ್ಯೋಗ ನೀಡುವುದರಿಂದ ಅಭಿವೃದ್ಧಿಯಾಗುತ್ತದೆಯೇ ಹೊರತು ಉಚಿತವಾಗಿ ಹಣ ಹಂಚುವುದರಿಂದ ಅಲ್ಲ. ಉದ್ಯಮಗಳು ಬೆಳೆದು ಹೆಚ್ಚೆಚ್ಚು ಉದ್ಯೋಗ ಸೃಷ್ಟಿಯಾದಾಗ ಮಾತ್ರ ಬಡತನ ನಿರ್ಮೂಲನೆ ಸಾಧ್ಯ' ಎಂದರು.

'ಆರ್ಥಿಕತೆ ನಿರ್ಮಾಣದಲ್ಲಿ ಸರ್ಕಾರದ ಪಾಲ್ಗೊಳ್ಳುವಿಕೆ ಕಡಿಮೆ ಇದ್ದಷ್ಟು ಫಲಿತಾಂಶ ಉತ್ತಮವಾಗಿರುತ್ತದೆ. ಸರ್ಕಾರಗಳು ಉದ್ಯೋಗ ಹಾಗೂ ಸಂಪತ್ತಿನ ಸೃಷ್ಟಿಗೆ ಪೂರಕವಾದ ನಿಯಮಗಳನ್ನು ರೂಪಿಸಬೇಕು. ಅದರಿಂದ ಸಂಗ್ರಹವಾಗುವ ತೆರಿಗೆಯನ್ನು ದೇಶದ ಅಭಿವೃದ್ಧಿಗೆ ವಿನಿಯೋಗಿಸಬೇಕು' ಎಂದು ಹೇಳಿದರು.



ಮೈಸೂರು ಉದ್ಯಮಗಳ ವೇದಿಕೆಯನ್ನು ಇನ್ಫೊಸಿಸ್ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಉದ್ಘಾಟಿಸಿದರು. ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಜೊತೆಗಿದ್ದರು – ಪ್ರಜಾವಾಣಿ ಚಿತ್ರ

'ಇಂದಿಗೂ 80 ಕೋಟಿ ಜನರಿಗೆ ಉಚಿತ ಪಡಿತರ ನೀಡುತ್ತಿರುವ ಭಾರತದ ದೇಶೀಯ ಆರ್ಥಿಕತೆಯ ಮಾದರಿಯನ್ನು ನೆಚ್ಚಿ ಕೂರಬೇಡಿ. ಜಾಗತಿಕ ಮಾರುಕಟ್ಟೆಗೆ ತಕ್ಕಂತೆ ನಿಮ್ಮ ಯೋಜನೆಗಳನ್ನು ರೂಪಿಸಿ. ಸುಸ್ಥಿರ, ಜಾಗತಿಕ ದರ್ಜೆಯ ಗುಣಮಟ್ಟದ ಉದ್ಯಮ ಆದ್ಯತೆಯಾಗಲಿ' ಎಂದು ಉದ್ಯಮಿಗಳಿಗೆ ಹೇಳಿದರು.

'ಬಡತನ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದ ಅಸಮಾನತೆ ತೊಡೆದುಹಾಕಲು ಶ್ರಮಿಸುವುದು ಉದ್ಯಮಿಗಳ ಕರ್ತವ್ಯ' ಎಂದರು.

ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜವಂಶಸ್ಥೆ ತ್ರಿಷಿಕಾ ಒಡೆಯರ್ ಇದ್ದರು.

ಬೆಳಿಗ್ಗೆ ಸಿಬ್ಬಂದಿ, ಸಂಜೆ ಡಿಡಿಪಿಐ ಅಮಾನತು

ಹಾಸನ: ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣಕ್ಕೆ ಸಂಬಂಧಿಸಿ ಎಫ್‌ಐಆರ್ ಮುಂಬಾಗಿದ್ದ ಅವರನ್ನು ಗುರುವಾರ ಬೆಳಿಗ್ಗೆ ಸೇವೆಯಿಂದ ಅಮಾನತು ಮಾಡಿದ್ದ ಇಲ್ಲಿನ ಡಿಡಿಪಿಐ ಎಚ್.ಕೆ. ಪಾಂಡು ಅವರು, ಲಂಚ ಪ್ರಕರಣದಲ್ಲಿ ಸಂಜೆ ತಾವೇ ಅಮಾನತುಗೊಂಡರು. ಕಚೇರಿ ಅಧೀಕ್ಷಕ ವೇಣುಗೋಪಾಲ್ ಅವರನ್ನೂ ಅಮಾನತುಗೊಳಿಸಲಾಗಿದೆ.

ಲಂಚ ಪಡೆಯುವಾಗ ಸಿಕ್ಕಿಬಿದ್ದಿದ್ದ ಇಬ್ಬರನ್ನೂ ಜ.4 ರಂದು ಪೊಲೀಸರು ಬಂಧಿಸಿದ್ದರು. ಅವರು ಗುರುವಾರ ಜಾಮೀನು ಪಡೆದು ಕರ್ತವ್ಯಕ್ಕೆ ಹಾಜರಾಗಿದ್ದರು.

'ವಿಳಂಬ ವೇತನ: ಬಡ್ಡಿ ವಿಧಿಸಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೌಕರರ ವೇತನ ವಿಳಂಬದ ಸಮಯದಲ್ಲಿ ಕೆಜಿಐಡಿ ವಿಮೆ, ಸಾಲದ ಮರುಪಾವತಿಗೆ ವಿಧಿಸುತ್ತಿರುವ ಬಡ್ಡಿಯನ್ನು ಕೈಬಿಡುವಂತೆ ಆರ್ಥಿಕ ಇಲಾಖೆಗೆ ಸರ್ಕಾರಿ ನೌಕರರ ಸಂಘ ಮನವಿ ಮಾಡಿದೆ.

ವೇತನ ಪಾವತಿ ಅಧಿಕಾರಿ ವರ್ಗಾವಣೆ, ಡಿಜಿಟಲ್ ಸಹಿ ಬದಲಾವಣೆ, ಕೆ-2 ಹಾಗೂ ಎಚ್‌ಆರ್‌ಎಂಎಸ್ ತಂತ್ರಾಂಶದಲ್ಲಿನ ತಾಂತ್ರಿಕ ದೋಷ, ಅನುದಾನ ಕೊರತೆ, ಅನುದಾನ ಬಿಡುಗಡೆ ವಿಳಂಬವಾದಾಗ ಎರಡು ಮೂರು ತಿಂಗಳಿಗೆ ವೇತನ ದೊರೆಯುತ್ತದೆ. ಅಂತಹ ಸಮಯದಲ್ಲಿ ಕೆಜಿಐಡಿ ಕಂತು, ಸಾಲದ ಮೇಲೆ ಬಡ್ಡಿ ವಿಧಿಸಲಾಗುತ್ತದೆ. ಮಾಡದೇ ಇರುವ ತಪ್ಪಿಗಾಗಿ ನೌಕರರಿಗೆ ತೊಂದರೆಯಾಗುತ್ತದೆ. ಹಾಗಾಗಿ, ಬಡ್ಡಿ ವಿಧಿಸದಂತೆ ತಡೆಯಲು ತಂತ್ರಾಂಶಗಳಲ್ಲೇ ಮಾರ್ಪಾಡು ಮಾಡುವಂತೆ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಆಭರಣ ದರೋಡೆ

ಒಂದನೇ ಪುಟದಿಂದ...

'ಈ ವೇಳೆ ಸಿ.ಸಿ.ಟಿ.ವಿ ಕ್ಯಾಮೆರಾ ದುರಸ್ತಿಗೆ ಬಂದಿದ್ದ ಸಂದೀಪ್, ರಕ್ಷಣೆಗಾಗಿ ಕೈ ಮುಗಿದಿದ್ದು, ಅವರ ಕೈಯಲ್ಲಿದ್ದ ಉಂಗುರವನ್ನೂ ಕಿತ್ತುಕೊಂಡರು. ಹಿಂದಿಯಲ್ಲಿ ಮಾತನಾಡುತ್ತಿದ್ದ ಅವರು, ಕೃತ್ಯಕ್ಕೆ ಅಡ್ಡಿಮಾಡಿದರೆ, ಶೂಟ್ ಮಾಡಿ ಕೊಲ್ಲುವುದಾಗಿ ಹೆದರಿಸಿದರು' ಎಂದು ಬ್ಯಾಂಕ್ ಸಿಬ್ಬಂದಿಯೊಬ್ಬರು ಆತಂಕದ ಕ್ಷಣವನ್ನು ವಿವರಿಸಿದರು.

ಈ ಜಂಕ್ಷನ್‌ನಲ್ಲಿ ಇರುವವರಲ್ಲಿ ಮುಸ್ಲಿಂ ವ್ಯಾಪಾರಸ್ಥರೇ ಹೆಚ್ಚಿನವರು. ಶುಕ್ರವಾರ ಆದ ಕಾರಣ ಎಲ್ಲರೂ ಪ್ರಾರ್ಥನೆಗೆ ತೆರಳಿದ್ದರು. ಅಂಗಡಿಗಳು ಬಂದಾಗಿದ್ದವು. ಮಂಗಳೂರಲ್ಲಿ ಮುಖ್ಯಮಂತ್ರಿ ಕಾರ್ಯಕ್ರಮಗಳು ಇದ್ದ ಕಾರಣ ಬಹುಪಾಲು ಪೊಲೀಸರನ್ನು ಅಲ್ಲಿಗೆ ಭದ್ರತೆಗೆ ನಿಯೋಜಿಸಲಾಗಿತ್ತು.

ಬ್ಯಾಂಕ್ ಸಿಬ್ಬಂದಿ ಕೂಗಿಕೊಂಡಿದ್ದನ್ನು ಕೇಳಿ, ಬ್ಯಾಂಕ್ ಕೆಳಗಿನ ಮಹಡಿಯಲ್ಲಿದ್ದ ನಾಲ್ವರು ವಿದ್ಯಾರ್ಥಿಗಳಲ್ಲಿ ಇಬ್ಬರು ಮೇಲಕ್ಕೆ ಓಡಿದ್ದಾರೆ. ಅವರಿಗೆ ಕನ್ನಡದಲ್ಲಿ ಬೈದಿರುವ ಆಗಂತುಕರು, ವಾಪಸ್ ಹೋಗುವಂತೆ ಹೆದರಿಸಿದ್ದಾರೆ ಎಂದು ವಿದ್ಯಾರ್ಥಿಯೊಬ್ಬರು ಮಾಹಿತಿ ನೀಡಿದರು.

ದುರಸ್ತಿ ದಿನವೇ ಕೃತ್ಯ: ತಮ್ಮ ಶಾಖೆಯಲ್ಲಿಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ದೃಶ್ಯಗಳು ಸ್ಪಷ್ಟವಾಗಿ ಕಾಣುವುದಿಲ್ಲ ಎಂಬ ಕಾರಣಕ್ಕೆ ಸಿಬ್ಬಂದಿ, ಸಂದೀಪ್ ಅವರಿಗೆ ರಿಪೇರಿಗೆ ಬರಲು ತಿಳಿಸಿದ್ದರು. ಅದರಂತೆ ಸಂದೀಪ್ ಮಧ್ಯಾಹ್ನ 12.30ರ ವೇಳೆಗೆ ಬ್ಯಾಂಕ್‌ಗೆ ಬಂದಿದ್ದಾರೆ. 'ದುರಸ್ತಿ ಕಾರ್ಯ ಆರಂಭಿಸಿದ ಕೆಲವೇ ನಿಮಿಷಗಳಲ್ಲಿ ದರೋಡೆಕೋರರು ಬ್ಯಾಂಕ್ ಒಳಗೆ ನುಗ್ಗಿದರು' ಎಂದು ಸಂದೀಪ್ ತಿಳಿಸಿದರು.

'ಒಂದು ಕೈಯಲ್ಲಿ ತಲವಾರು, ಇನ್ನೊಂದು ಕೈಯಲ್ಲಿ ಪಿಸ್ತೂಲು ತೋರಿಸುತ್ತ ಆಗಂತುಕರು ಒಳನುಗ್ಗಿದರು. ತಲವಾರನ್ನು ನೆಲಕ್ಕೆ ಬಡಿದು ಎಲ್ಲರೂ ಕುಳಿತುಕೊಳ್ಳುವಂತೆ ಒಬ್ಬ ಸೂಚಿಸಿದ. ಭೀತಿಯಿಂದ ಎಲ್ಲರೂ ಮೂಲೆಯಲ್ಲಿ ಕುಳಿತೆವು. ಅವರಲ್ಲಿ ಒಬ್ಬ ನೇರವಾಗಿ ಸ್ಟ್ರಾಂಗ್‌ರೂಮ್‌ಗೆ ಹೋದ. ಎಲ್ಲರೂ ತೂತು ಇರುವ (ಟೋರ್ನ್) ಜೀನ್ಸ್ ಪ್ಯಾಂಟ್ ಮತ್ತು ಮಾಸ್ಕ್ ಧರಿಸಿದ್ದರು' ಎಂದು ಸ್ಥಳಕ್ಕೆ ಭೇಟಿ ನೀಡಿದ ಸ್ಪೀಕರ್ ಯು.ಟಿ. ಖಾದರ್ ಬಳಿ ರಾಮಚಂದ್ರ ಆಚಾರ್ಯ ಹೇಳಿಕೊಂಡರು.

ಚಿನ್ನ ಬಿಟ್ಟು ಹೋದರು: ಅಂದಾಜು ₹6 ಕೋಟಿಯಷ್ಟು ಚಿನ್ನವನ್ನು ದರೋಡೆಕೋರರು ಗಡಿಬಿಡಿಯಲ್ಲಿ ಬಿಟ್ಟು ಹೋಗಿದ್ದಾರೆ. ಸುಮಾರು 12 ಕೆ.ಜಿ.ಯಷ್ಟು ಚಿನ್ನ ಸಂಘದಲ್ಲೇ ಉಳಿದಿದೆ ಎಂದು ಮೂಲಗಳು ತಿಳಿಸಿವೆ.

ತುರ್ತು ಸಭೆ ನಡೆಸಿದ ಸಿ.ಎಂ: ಮಂಗಳೂರು ಪ್ರವಾಸದಲ್ಲಿದ್ದ ಸಿ.ಎಂ ಸಿದ್ದರಾಮಯ್ಯ, ದರೋಡೆ ಪ್ರಕರಣದ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆಯೇ ಪಶ್ಚಿಮವಲಯ ಐಜಿಪಿ ಅಮಿತ್ ಸಿಂಗ್, ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ಅವರ ಜೊತೆ ತುರ್ತು ಸಭೆ ನಡೆಸಿದರು.

'ನೀವೆಲ್ಲಾ ಇದ್ದು ಯಾಕೆ ಹೀಗಾಯ್ತು? ಆರೋಪಿಗಳು ಸಲೀಸಾಗಿ ತಪ್ಪಿಸಿಕೊಂಡು ಹೋಗಿದ್ದು ಹೇಗೆ? ಎಷ್ಟು ಟೋಲ್‌ಗೇಟ್‌ಗಳನ್ನು ದಾಟಿ ಹೋಗಿದ್ದಾರೆ. ನೀವು ಟೋಲ್‌ಗೇಟ್‌ಗಳಲ್ಲಿ ಏಕೆ ತಪಾಸಣೆ ನಡೆಸಲಿಲ್ಲ' ಎಂದು ಪ್ರಶ್ನಿಸಿದರು.

'ಎಲ್ಲ ಟೋಲ್‌ಗಳಲ್ಲಿ ತಪಾಸಣೆ ಬಿಗಿಗೊಳಿಸಬೇಕು. ಸುತ್ತಲಿನ ಜಿಲ್ಲೆಗಳ ವ್ಯಾಪ್ತಿಯಲ್ಲಿ ನಾಕಾಬಂದಿ ಹಾಕಿ ಆದಷ್ಟು ಶೀಘ್ರ ಆರೋಪಿಗಳನ್ನು ಬಂಧಿಸಬೇಕು' ಎಂದು ನಿರ್ದೇಶನ ನೀಡಿದರು.

ದರೋಡೆಕೋರರಿಗೆ ಗುಂಡೇಟು; ಒಬ್ಬ ಸೆರೆ

ಒಂದನೇ ಪುಟದಿಂದ...

ಗುರುವಾರ ರಾತ್ರಿ ಕನಕದಾಸ ಬಡಾವಣೆಯಲ್ಲಿ ಮನೆಯೊಂದಕ್ಕೆ ನುಗ್ಗಿ, ಮತ್ತೆ ದರೋಡೆಗೆ ಯತ್ನಿಸಿದ್ದರು. ಆಗ ಕುಟುಂಬಸ್ಥರು ಚೀರಾಡಿದ್ದಾರೆ. ನಾವು ಘಟನಾ ಸ್ಥಳಕ್ಕೆ ಬರುವಷ್ಟರಲ್ಲಿ ನಾಲ್ವರು ಪರಾರಿಯಾಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ನಗರ ಹೊರವಲಯದ ಟೋಲ್‌ಪ್ಲಾಜಾ ಬಳಿ ಬೈಕ್‌ನಲ್ಲಿ ನಾಲ್ವರು ಸಂಚಾರ ನಿಯಮ ಉಲ್ಲಂಘಿಸಿ ಹೋಗುತ್ತಿರುವಾಗ ಬೆನ್ನಟ್ಟಿದೆವು. ಆಗ ಬೈಕ್ ಜಾರಿ, ಎಲ್ಲರೂ ಕೆಳಗಡೆ ಬಿದ್ದಿದ್ದಾರೆ. ಅಲ್ಲಿಂದ ಎದ್ದು ಜಮೀನಿನಲ್ಲಿ ಓಡುತ್ತಿದ್ದ ವೇಳೆ ಗುಂಡು ಹಾರಿಸಲಾಯಿತು. ಗುಂಡೇಟಿನಿಂದ ಗಾಯಗೊಂಡ ಮಹೇಶ್ ಸಿಕ್ಕಿಬಿದ್ದ. ಆತನನ್ನು ವಶಕ್ಕೆ ಪಡೆದು, ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ದರೋಡೆಕೋರರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ. ಪರಾರಿಯಾಗಿರುವ ದರೋಡೆಕೋರರನ್ನು ಶೀಘ್ರವೇ ಪತ್ತೆ ಮಾಡಿ, ಬಂಧಿಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಮೃತನ ಕುಟುಂಬಕ್ಕೆ ₹18 ಲಕ್ಷ ಪರಿಹಾರ

ಒಂದನೇ ಪುಟದಿಂದ...

'ಗುಂಡೇಟು ತಗುಲಿ ಹೈದರಾಬಾದ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ನಗರದ ಲಾಡಗೇರಿ ನಿವಾಸಿ ಶಿವಕುಮಾರ ಅವರ ಚಿಕಿತ್ಸಾ ವೆಚ್ಚವನ್ನು ಸರ್ಕಾರ ಭರಿಸಲಿದೆ. ಸಮಾಜ ಕಲ್ಯಾಣ ಇಲಾಖೆಯಿಂದ ದೊರಕಬೇಕಾದ ಪರಿಹಾರ ಕೂಡ ನೀಡಲಾಗುವುದು' ಎಂದರು.

ಗುರುತು ಪತ್ತೆ: 'ಈಗಾಗಲೇ ದರೋಡೆಕೋರರನ್ನು ಗುರುತಿಸಲಾಗಿದೆ. ಅವರನ್ನು ಬಂಧಿಸಲು ಬೀದರ್ ಜಿಲ್ಲಾ ಪೊಲೀಸರನ್ನು ಹೈದರಾಬಾದ್‌ಗೆ ಕಳುಹಿಸಲಾಗಿದೆ. ತೆಲಂಗಾಣ ಪೊಲೀಸರು ಎಲ್ಲ ರೀತಿಯ ಸಹಕಾರ ನೀಡುತ್ತಿದ್ದಾರೆ. ಆರೋಪಿಗಳಿಬ್ಬರೂ ಹಲವು ದರೋಡೆ ಪ್ರಕರಣಗಳಲ್ಲಿ ಶಾಮೀಲಾಗಿದ್ದರು ಎಂಬ ಮಾಹಿತಿ ಲಭ್ಯವಾಗಿದೆ' ಎಂದು ಎಡಿಜಿಪಿ ಪಿ. ಹರಿಶೇಖರನ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಗುರುವಾರ (ಜ.16), ಎಟಿಎಂಗಳಿಗೆ ಜಮೆ ಮಾಡಲು ಹಣ ಕೊಂಡೊಯ್ಯುತ್ತಿದ್ದ ಗಿರಿ ವೆಂಕಟೇಶ ಹಾಗೂ ಶಿವಕುಮಾರ ಮೇಲೆ ಬೈಕ್‌ನಲ್ಲಿ ಬಂದ ಇಬ್ಬರು ಅಪರಿಚಿತರು ಗುಂಡಿನ ದಾಳಿ ನಡೆಸಿ, ನೋಟಿನ ಕಂತೆಗಳಿರುವ ಟ್ರಂಕ್ ಕದ್ದೊಯ್ದಿದ್ದರು. ಗುಂಡೇಟಿನಿಂದ ಗಿರಿ ಸ್ಥಳದಲ್ಲೇ ಮೃತಪಟ್ಟಿದ್ದರು. ಶಿವಕುಮಾರ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ದರೋಡೆಯಾಗಿದ್ದು ₹83 ಲಕ್ಷ': 'ದರೋಡೆಕೋರರು ₹83 ಲಕ್ಷ ನಗದು ಹಣದೊಂದಿಗೆ ಪರಾರಿಯಾಗಿದ್ದಾರೆ' ಎಂದು ಅಪರಾಧ ವಿಭಾಗದ ಎಡಿಜಿಪಿ ಪಿ. ಹರಿಶೇಖರನ್ ಸ್ಪಷ್ಟಪಡಿಸಿದ್ದಾರೆ. 'ಎಟಿಎಂಗಳಿಗೆ ಜಮೆ ಮಾಡಲು ಕೊಂಡೊಯ್ಯುತ್ತಿದ್ದ ಟ್ರಂಕ್‌ನಲ್ಲಿ ಒಟ್ಟು ₹87 ಲಕ್ಷ ಇತ್ತು. ದರೋಡೆಕೋರರು ಅದನ್ನು ತೆಗೆದುಕೊಂಡು ಹೋಗುವಾಗ ₹4 ಲಕ್ಷ ಕೆಳಗೆ ಬಿದ್ದಿದೆ. ಅದನ್ನು ಸ್ಥಳೀಯರು ಬ್ಯಾಂಕಿನವರಿಗೆ ಮರಳಿಸಿದ್ದಾರೆ. ಮಿಕ್ಕುಳಿದ ₹83 ಲಕ್ಷ ತೆಗೆದುಕೊಂಡು ಹೋಗಿದ್ದಾರೆ' ಎಂದು ಹೇಳಿದರು.

ಗೆಳತಿಯನ್ನು ಬೆದರಿಸಲು ಯತ್ನ: ಯುವಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೀಳಗಿ (ಬಾಗಲಕೋಟೆ): ಗೆಳತಿಗೆ ಬೆದರಿಸಲು ಪ್ರಯತ್ನಿಸಿ ಮುಧೋಳದ ಅಜಯ ಜಾಧವ (25) ಎಂಬಾತ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಆತನ ಸಾವಿನ ಬಗ್ಗೆ ಕುಟುಂಬಸ್ಥರು ಅನುಮಾನ ವ್ಯಕ್ತಪಡಿಸಿದ್ದಾರೆ.

'ಗೆಳತಿ ಜೊತೆಗೆ ಅಜಯ ಜಾಧವ ಸ್ನೇಹಿತ ನವೀನ ಮಠ ಮನೆಗೆ ಹೋಗಿದ್ದ. ಅಲ್ಲಿ ಆತ ಮದ್ಯ ಸೇವಿಸುವುದಾಗಿ ಹೇಳಿದಾಗ, ಗೆಳತಿ ತನ್ನೂರಿಗೆ ವಾಪಸ್ ಹೊರಟಿದ್ದಾಳೆ. ಆಕೆಗೆ ವಿಡಿಯೊ ಕರೆ ಮಾಡಿ, ವಾಪಸ್ ಬಾರದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸಿದ್ದಾನೆ. ಗೆಳತಿ ಮರಳುವಷ್ಟರಲ್ಲಿ ಆತ ಆತ್ಮಹತ್ಯೆ ಮಾಡಿಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಮುಂಜಾಗ್ರತಾ ಕ್ರಮಗಳು

- ಮೊದಲ ಬಾರಿ ಬಳಸುವಾಗ ಕೈಯ ಮೇಲೆ ಪರೀಕ್ಷಿಸಿ.
- ಕಣ್ಣಿಗೆ ತಾಗದಂತೆ ನೋಡಿಕೊಳ್ಳಿ.
- ಗಾಯಗಳು, ಉರಿಯೂತ ಇರುವಾಗ ಬಳಸಬೇಡಿ.
- ಅತಿಯಾಗಿ ಉಜ್ಜಬೇಡಿ.

ಇಂದಿನ ದಿನಗಳಲ್ಲಿ ಮಾರುಕಟ್ಟೆಯಲ್ಲಿ ಸಿಗುವ ಅನೇಕ ವಾಣಿಜ್ಯ ಉತ್ಪನ್ನಗಳು ರಾಸಾಯನಿಕಗಳಿಂದ ತುಂಬಿವೆ. ಇವು ತಾತ್ಕಾಲಿಕ ಪರಿಹಾರ ನೀಡಬಹುದಾದರೂ, ದೀರ್ಘಾವಧಿಯಲ್ಲಿ ಚರ್ಮಕ್ಕೆ ಹಾನಿಕಾರಕ. ಆದರೆ ಆಯುರ್ವೇದಿಕ ಮುಖಲೇಪನಗಳು ನೈಸರ್ಗಿಕ, ಸುರಕ್ಷಿತ ಮತ್ತು ಪರಿಣಾಮಕಾರಿ.





ಚರ್ಮದ ಕಾಂತಿಗೆ ಮುಖಲೇಪನಗಳು

ಡಾ. ಬ್ರಹ್ಮಾನಂದ ನಾಯಕ

> ಮುಖದ ಮೇಲಿನ ಪ್ರತಿಯೊಂದು ಗೆರೆ ನಿಮ್ಮ ಜೀವನ ಯಾತ್ರೆಯ ಸಾಕ್ಷಿ. ಈ ಗೆರೆಗಳನ್ನು ಅಳಿಸುವುದು ಧ್ಯೇಯವಲ್ಲ. ಬದಲಾಗಿ, ಚರ್ಮವನ್ನು ಆರೋಗ್ಯಕರವಾಗಿಟ್ಟು, ಅದರ ಸಹಜ ಕಾಂತಿಯನ್ನು ಹೆಚ್ಚಿಸುವುದೇ ಗುರಿಯಾಗಬೇಕು

ರಾಣಿ ಪದ್ಮಾವತಿಯಿಂದ ಹಿಡಿದು ಇಂದಿನ ಬಾಲಿವುಡ್ ತಾರೆಯರವರೆಗೆ, ಭಾರತೀಯ ಮಹಿಳೆಯರ ಸೌಂದರ್ಯ ರಹಸ್ಯ ಒಂದೇ - ನಮ್ಮ ಅಡುಗೆಮನೆಯಲ್ಲಿ ಸಿಗುವ ನೈಸರ್ಗಿಕ ಪದಾರ್ಥಗಳಿಂದ ತಯಾರಿಸಿದ ಆಯುರ್ವೇದಿಕ್ ಮುಖಲೇಪನಗಳು. ಇದು ಕೇವಲ ಸೌಂದರ್ಯ ಮಾತ್ರವಲ್ಲ, ಆರೋಗ್ಯದ ಮೂಲಮಂತ್ರ.

ಏಳು ವರ್ಷಗಳ ಹಿಂದೆ ನನ್ನ ಚಿಕಿತ್ಸಾಲಯಕ್ಕೆ ಬಂದ ಆಧುನಿಕ ಮೇಕಪ್ ಆರ್ಟಿಸ್ಟ್ ನಮ್ರತಾ ಅವರ ಚರ್ಮವನ್ನು ನೋಡಿ ಯಾರೂ ಅವರು ಸೌಂದರ್ಯತಜ್ಞೆ ಎಂದು ನಂಬುತ್ತಿರಲಿಲ್ಲ. ಆಧುನಿಕ ಕಾಸ್ಮೆಟಿಕ್ಸ್‌ಗಳ ಅತಿಯಾದ ಬಳಕೆಯಿಂದ ಅವರ ಮುಖ ಕಂದು ಬಣ್ಣಕ್ಕೆ ತಿರುಗಿತ್ತು. ನಮ್ಮ ಆಯುರ್ವೇದ ಪದ್ಧತಿಯ ನಾಲ್ಕು ವಾರಗಳ ಚಿಕಿತ್ಸೆಯ ನಂತರ ಅವರ ಮುಖದಲ್ಲಿ ಮೂಡಿದ ನೈಸರ್ಗಿಕ ಕಾಂತಿ ಇಂದು ಅವರ ವೃತ್ತಿಯ ಬ್ರ್ಯಾಂಡ್ ಆಗಿದೆ.

ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳ ಪ್ರಕಾರ, ಕಡಲೆ ಹಿಟ್ಟಿನಲ್ಲಿ (ಬೇಸನ್) ಶೇಕಡಾ 22ರಷ್ಟು ಪ್ರೋಟೀನ್, ಹಾಗೂ ಚರ್ಮದ ಆರೋಗ್ಯಕ್ಕೆ ಅಗತ್ಯವಿರುವ ವಿಟಮಿನ್ ಬಿ6, ಫೋಲಿಕ್ ಆಮ್ಲ ಮತ್ತು ಲೋಹಾಂಶಗಳು ಸಮೃದ್ಧವಾಗಿವೆ. ಅರಿಶಿನದಲ್ಲಿರುವ ಕರ್ಕ್ಯುಮಿನ್ ಉರಿಯೂತ ನಿವಾರಕವಾಗಿ ಮತ್ತು ರೋಗಾಣು ನಾಶಕವಾಗಿ ಕಾರ್ಯನಿರ್ವಹಿಸುತ್ತದೆ. ಜೇನುತುಪ್ಪದಲ್ಲಿರುವ ನೈಸರ್ಗಿಕ ತೇವಾಂಶ ಹೀರುವ ಅಂಶಗಳು ಚರ್ಮದ ಮೃದುತ್ವ ಮತ್ತು ಒಣಗುವಿಕೆಯನ್ನು ತಡೆಯುತ್ತವೆ. ಈ ಮೂರರ ಸಂಯೋಜನೆಯಿಂದ ನಾಲ್ಕು ವಾರಗಳಲ್ಲಿ ನಮ್ರತಾ ಅವರ ಚರ್ಮ ಸಂಪೂರ್ಣ ಬದಲಾಯಿತು.

ಪುರಾತನ ರಾಜಮನೆತನದ ಸೌಂದರ್ಯ ರಹಸ್ಯಗಳು ಇಂದಿಗೂ ಜೀವಂತವಾಗಿವೆ. ಹಸಿ ಮಲ್ಲಿಗೆ ಹೂವಿನ ದಳಗಳು ಮತ್ತು ತಾಜಾ ಎಳನೀರಿನ ಮಿಶ್ರಣ ಚರ್ಮದ ಕಳೆಯನ್ನು ಹೆಚ್ಚಿಸುತ್ತದೆ ಎಂಬುದು ಸಂಶೋಧನೆಯಿಂದ ಸಾಬೀತಾಗಿದೆ. ಬಾಲಿವುಡ್ ನಟಿಯರ ಮೆಚ್ಚಿನ ಮುಖಲೇಪನ - ಹಸಿ ಟೊಮೆಟೊ ರಸ ಮತ್ತು ಮೊಸರಿನ ಮಿಶ್ರಣ. ಇದರಲ್ಲಿರುವ ಲ್ಯಾಕ್ಟಿಕ್ ಆಮ್ಲ ಮತ್ತು ವಿಟಮಿನ್ 'ಸಿ' ಚರ್ಮದ ನಿರ್ಜೀವ ಕೋಶಗಳನ್ನು ತೆಗೆದುಹಾಕಿ, ಹೊಸ ಕೋಶಗಳ ಬೆಳವಣಿಗೆಗೆ ಸಹಕರಿಸುತ್ತದೆ.

ಮುಂಬೈನ ಪ್ರಖ್ಯಾತ ಸೌಂದರ್ಯತಜ್ಞರ ಮತ್ತೊಂದು ಸಲಹೆ - ಬಾದಾಮಿ ಎಣ್ಣೆಯಲ್ಲಿ ಅದ್ದಿದ ಐಸ್ ಕ್ಯೂಬ್‌ಗಳಿಂದ ಮುಖಕ್ಕೆ ತಂಪು ಮಸಾಜ್. ಮತ್ತೆ ಕೆಲವರು ಪಪ್ಪಾಯಿ ಮತ್ತು ಶುದ್ಧ ಜೇನುತುಪ್ಪದ ಮಿಶ್ರಣವನ್ನು ಬಳಸುತ್ತಾರೆ - ಇದರಲ್ಲಿರುವ ಪ್ಯಾಪೇನ್ ಎಂಜೈಮ್ ಮತ್ತು ಆ್ಯಂಟಿಆಕ್ಸಿಡೆಂಟ್‌ಗಳು ಚರ್ಮಕ್ಕೆ ಯೌವನದ ಕಳೆ ನೀಡುತ್ತವೆ.

ಬಾಲಿವುಡ್‌ನ ಟಾಪ್ ಮೇಕಪ್ ಆರ್ಟಿಸ್ಟ್‌ಗಳು ಇಟ್ಟಿರುವ ಸೌಂದರ್ಯದ ಅಮೂಲ್ಯ ಕಡತ ಇಂದು ನಿಮ್ಮ ಮುಂದಿದೆ. ಕ್ಯಾಮೆರಾ ಮುಂದೆ 16 ಗಂಟೆ ನಿಲ್ಲುವ ನಟಿಯರ ಚರ್ಮ ಕಾಂತಿಯುತವಾಗಿರುವ ಹಿಂದಿನ ರಹಸ್ಯ - ಹಸಿ ಮೊಟ್ಟೆಯ ಬಿಳಿಭಾಗ, ಶುದ್ಧ ಗುಲಾಬಿ ನೀರು ಮತ್ತು ಹಾಲಿನ ಕ್ರೀಮ್ ಮಿಶ್ರಣ. ಭಾರೀ ಮೇಕಪ್‌ನಿಂದ ಸುಟ್ಟುಹೋದ ಚರ್ಮಕ್ಕೆ ಇದೊಂದು ಅದ್ಭುತ ಔಷಧಿ. ಲಂಡನ್‌ನ 'ರಾಯಲ್ ಸೊಸೈಟಿ ಆಫ್ ಕಾಸ್ಮೆಟಾಲಜಿ'ಯ ಸಂಶೋಧನೆ ಪ್ರಕಾರ, ಮೊಟ್ಟೆಯಲ್ಲಿರುವ ಪ್ರೋಟೀನ್, ಗುಲಾಬಿ ನೀರಿನ ನೈಸರ್ಗಿಕ ತೈಲಾಂಶ ಮತ್ತು ಹಾಲಿನ ಲ್ಯಾಕ್ಟಿಕ್ ಆಮ್ಲ - ಈ ಮೂರರ ಸಂಯೋಜನೆ ಚರ್ಮಕೋಶಗಳ ಪುನರ್ಜನನ ಪ್ರಕ್ರಿಯೆಯನ್ನು ಮೂರು ಪಟ್ಟು ಹೆಚ್ಚಿಸುತ್ತದೆ. ಕೇವಲ ಹದಿನೈದು ನಿಮಿಷಗಳ ಈ ಮುಖಲೇಪನ ನಿಮ್ಮ ಚರ್ಮಕ್ಕೆ ರಾತ್ರೋರಾತ್ರಿ ಕಾಂತಿ ತರುತ್ತದೆ.

ನನ್ನ ಇಪ್ಪತ್ತೈದು ವರ್ಷಗಳ ಆಯುರ್ವೇದ ಅನುಭವದಲ್ಲಿ, ನೂರಾರು ರೋಗಿಗಳ ಮೇಲೆ ಪರೀಕ್ಷಿಸಿ ಸಿದ್ಧಪಡಿಸಿದ ಅಚ್ಚುಮೆಚ್ಚಿನ ಮುಖಲೇಪನ ಸೂತ್ರ ಇದು: ಎರಡು ಚಮಚ ಕಡಲೆ ಹಿಟ್ಟು, ಒಂದು ಚಮಚ ಅರಿಶಿನ, ಒಂದು ಚಮಚ ಜೇನುತುಪ್ಪ ಮತ್ತು ಸ್ವಲ್ಪ ಹಾಲು ಅಥವಾ ಮೊಸರನ್ನು ಬೆರೆಸಿ ಮಿಶ್ರಣ ಮಾಡಿ. ಈ ಲೇಪನವನ್ನು ವಾರಕ್ಕೆ ಮೂರು ಬಾರಿ ಮುಖಕ್ಕೆ ಹಚ್ಚಿದರೆ ಮುಖದ ಕಪ್ಪು ಜಾಗಗಳು, ಸಣ್ಣ ಮಡಿಕೆಗಳು, ಮೊಡವೆ ಮತ್ತು ಒಣಗಿದ ಚರ್ಮದ ಸಮಸ್ಯೆಗಳು ಕ್ರಮೇಣ ಮಾಯವಾಗುತ್ತವೆ. ಇದು ಕೇವಲ ಔಷಧಿ ಮಾತ್ರವಲ್ಲ, ನಿಮ್ಮ ಚರ್ಮಕ್ಕೆ ಸಿಗುವ ಪ್ರಕೃತಿಯ ವರದಾನ.

ಚರ್ಮದ ಆರೈಕೆಗೆ ಅಡುಗೆಮನೆಯೇ ಸೌಂದರ್ಯ ಮಂದಿರ! ನನ್ನ ಅನುಭವದಲ್ಲಿ ರೂಪಿಸಿದ ಮೂರು ಸರಳ ಮತ್ತು ಪರಿಣಾಮಕಾರಿ ಮುಖಲೇಪನಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

ಒಣ ಚರ್ಮಕ್ಕಾಗಿ 'ಮೃದು ಮಿಶ್ರಣ'. ಎರಡು ಚಮಚ ಕಡಲೆ ಹಿಟ್ಟು, ಒಂದು ಚಮಚ ಬಾದಾಮಿ ಹಿಟ್ಟು, ಒಂದು ಚಮಚ ಜೇನುತುಪ್ಪ ಮತ್ತು ಸ್ವಲ್ಪ ಹಾಲು ಬೆರೆಸಿ. ಹೆಬ್ಬಾಳದ ಸೌಂದರ್ಯ ತಜ್ಞೆ ರೇಣುಕಾ ಅವರ ಅನುಭವ: 'ನನ್ನ ಒಣಗಿದ, ಬಿರುಕು ಬಿಟ್ಟ ಚರ್ಮ ಈಗ ರೇಷ್ಮೆಯಂತೆ ಮೃದುವಾಗಿದೆ'.

ಸಾಮಾನ್ಯ ಚರ್ಮಕ್ಕಾಗಿ 'ಪ್ರಕೃತಿ ಮಿಶ್ರಣ': ತಲಾ ಒಂದು ಚಮಚ ಕಡಲೆ ಹಿಟ್ಟು, ನೆಲ್ಲಿಕಾಯಿ ಪುಡಿ ಮತ್ತು ಶುದ್ಧ ಅರಿಶಿನ. ಇದಕ್ಕೆ ಸ್ವಲ್ಪ ಗುಲಾಬಿ ನೀರು ಸೇರಿಸಿ. ಮಲ್ಲೇಶ್ವರಂನ ಫ್ಯಾಷನ್ ಬ್ಲಾಗರ್ ಅರುಣಾ ಅವರು ಹೇಳುವಂತೆ: 'ನಾನು ಸಾಕಷ್ಟು ಕ್ರೀಮುಗಳನ್ನು ಬದಲಾಯಿಸಿದೆ, ಆದರೆ ಈ ಸರಳ ಮಿಶ್ರಣ ನನ್ನ ಚರ್ಮವನ್ನು ಸಂಪೂರ್ಣ ಬದಲಾಯಿಸಿತು'.

ತೈಲಯುಕ್ತ ಚರ್ಮಕ್ಕಾಗಿ 'ತಂಪು ಮಿಶ್ರಣ': ಎರಡು ಚಮಚ ಕಡಲೆ ಹಿಟ್ಟು, ಒಂದು ಚಮಚ ತುಳಸಿ ಪುಡಿ, ಅರ್ಧ ಚಮಚ ಮೆಂತ್ಯ ಹಿಟ್ಟು ಮತ್ತು ಸ್ವಲ್ಪ ಮೊಸರು. ಇನ್ಫೋಸಿಸ್ ಕೆಲಸ ಮಾಡುವ ಶ್ರೇಯಾ ಹೇಳುವಂತೆ: 'ಎಷ್ಟೋ ದುಬಾರಿಯಾದ ಮುಖಲೇಪನಗಳು ಮಾಡದ್ದನ್ನು ಈ ಸರಳ ಮಿಶ್ರಣ ಮಾಡಿತು'.

ಈ ಮೂರು ವಿಶೇಷ ಮಿಶ್ರಣಗಳನ್ನು ವಾರಕ್ಕೆ ಮೂರು ಬಾರಿ ಬಳಸಿ. ಕೇವಲ ಮೂರು ತಿಂಗಳಲ್ಲಿ ನಿಮ್ಮ ಚರ್ಮದಲ್ಲಿ ಅದ್ಭುತ ಬದಲಾವಣೆ ಕಾಣುತ್ತೀರಿ. ಇದು ರಾಸಾಯನಿಕ ಕ್ರೀಮುಗಳಿಗಿಂತ ಹೆಚ್ಚು ಸುರಕ್ಷಿತ ಮತ್ತು ಪರಿಣಾಮಕಾರಿ.

ಮುಖದ ಮೇಲಿನ ಪ್ರತಿಯೊಂದು ಗೆರೆ ನಿಮ್ಮ ಜೀವನ ಯಾತ್ರೆಯ ಸಾಕ್ಷಿ - ಮಗುವಿನ ಮೊದಲ ನಗುವಿನಿಂದ, ತಾಯಿಯ ಪ್ರೀತಿಯ ಮುದ್ದಾಟದವರೆಗೆ, ಯೌವನದ ಕನಸುಗಳಿಂದ ಪ್ರೌಢತೆಯ ಅನುಭವದವರೆಗೆ. ಈ ಗೆರೆಗಳನ್ನು ಅಳಿಸುವುದಲ್ಲ ನಮ್ಮ ಧ್ಯೇಯ. ಬದಲಾಗಿ, ನಿಮ್ಮ ಚರ್ಮವನ್ನು ಆರೋಗ್ಯಕರವಾಗಿಟ್ಟು, ಅದರ ಸಹಜ ಕಾಂತಿಯನ್ನು ಹೆಚ್ಚಿಸುವುದು ನಮ್ಮ ಗುರಿ. ಪ್ರಕೃತಿಯ ಮಡಿಲಲ್ಲಿ ಅಡಗಿರುವ ಈ ಸೌಂದರ್ಯ ರಹಸ್ಯಗಳು ನಮ್ಮ ಪೂರ್ವಿಕರ ಅಮೂಲ್ಯ ಕೊಡುಗೆ. ಅವರ ಈ ಜ್ಞಾನ ಸಾವಿರಾರು ವರ್ಷಗಳ ನಂತರವೂ ಇಂದಿನ ವೈಜ್ಞಾನಿಕ ಸಂಶೋಧನೆಗಳಿಂದ ಸಾಬೀತಾಗುತ್ತಿದೆ. ನೆನಪಿಡಿ, ನಿಜವಾದ ಸೌಂದರ್ಯ ಆರೋಗ್ಯಕರ ಚರ್ಮದಿಂದ ಹೊರಹೊಮ್ಮುತ್ತದೆ, ಆತ್ಮವಿಶ್ವಾಸದಿಂದ ಪ್ರಕಾಶಿಸುತ್ತದೆ.

ಡಯೆಟ್ ಹೀಗಿರಲಿ

ಪ್ರಾಚಿ ಚಂದ್ರ



ತೂಕ ಇಳಿಸುವುದೆಂದರೆ ಅದೊಂದು ದೊಡ್ಡ ತಪ್ಪಸ್ಸು ಎಂದು ಭಾವಿಸುವವರಿದ್ದಾರೆ. ನಿತ್ಯದ ಆಹಾರ ಪದ್ಧತಿಯಲ್ಲಿ ತುಸು ಬದಲಾವಣೆ ಮಾಡಿಕೊಂಡರೆ ದೇಹದ ತೂಕವನ್ನು ಸಲೀಸಾಗಿ ಇಳಿಸಬಹುದು. ಇದಕ್ಕಾಗಿ ವಿಪರೀತ ಖರ್ಚು ಮಾಡಬೇಕೆಂದಿಲ್ಲ. ಜಿಮ್-ಸ್ವಿಮ್‌ಗೆ ಹೋಗದೆ ಸರಳ ವ್ಯಾಯಾಮಗಳನ್ನು ಅನುಸರಿಸುತ್ತಲೇ ಕೇವಲ ಆಹಾರ ಪದ್ಧತಿಯನ್ನು ಸರಳವಾಗಿಟ್ಟುಕೊಳ್ಳುವ ಮೂಲಕ ದೇಹದ ತೂಕವನ್ನು ಇಳಿಸಬಹುದು.

ಮೊದಲಿಗೆ ಸಮತೋಲಿತ ಹಾಗೂ ಸತ್ವಯುತ ಆಹಾರದ ಕಡೆಗೆ ಗಮನ ಕೊಡಬೇಕು. ದಿನಕ್ಕೆ ಕನಿಷ್ಠ ಐನೂರರಿಂದ ಆರನೂರು ಕ್ಯಾಲೋರಿಯನ್ನು ಕಡಿಮೆ ಮಾಡುವುದರಿಂದ ತಿಂಗಳಿಗೆ ದೇಹದ ತೂಕವನ್ನು ಕನಿಷ್ಠ 2 ರಿಂದ 3 ಕೆ.ಜಿ ಇಳಿಸಬಹುದು. ಮನೆಯಲ್ಲಿ ಅನುಸರಿಸಬಹುದಾದ ಸರಳ ಕ್ರಮಗಳು ಹೀಗಿವೆ.

ಬೆಳಿಗ್ಗೆ ಎಂಟು ಗಂಟೆ ಹೊತ್ತಿಗೆ ಯಾವುದಾದರೂ ದ್ವಿದಳ ಧಾನ್ಯಗಳ ಪುಡಿ ಬೆರೆಸಿದ ಹಾಲು ಸೇವಿಸಿ. ನಾರಿನಾಂಶ ಇರುವ ದ್ವಿದಳ ಧಾನ್ಯಗಳು, ಹಣ್ಣುಗಳು ಹಾಗೂ ಬೀಜಗಳ ಬಳಕೆ ಯಥೇಚ್ಛವಾಗಿರಲಿ. ರಾಗಿ ಅಂಬಲಿ, ರಾಗಿ ಮಣ್ಣಿ ಅಥವಾ ಮೊಳಕೆ ಬರಿಸಿದ ಹೆಸರುಕಾಳು ಅಥವಾ ಹುರುಳಿಕಾಳಿನ ಉಸಲಿಯನ್ನು ಒಂದು ಕಪ್ ಸೇವಿಸಬಹುದು. ಸುವಾಸನೆ ಬೆರೆಸದ ತಾಜಾ ಮೊಸರು, ಬಾದಾಮಿ ಅಥವಾ ಸೋಯಾ ಬೆರೆಸಿದ ಹಾಲು ಸೇವಿಸಿದರೂ ಯಥೇಚ್ಛ ಪ್ರೋಟೀನ್ ಸಿಗುವುದಲ್ಲದೇ, ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ.

ಬೆಳಗಿನ ತಿಂಡಿಗೆ: ಪ್ರೋಟೀನ್ ಜತೆಗೆ ನಾರಿನಾಂಶ ಇರುವ ಹಣ್ಣು ಹಾಗೂ ಸೂಪ್‌ಗಳು ತಿಂಡಿಯ ಭಾಗವಾಗಿರಲಿ. ಹುರಿದ ಚನಾ ಅಥವಾ ಮಜ್ಜಿಗೆ ಅಥವಾ ಕಡಿಮೆ ಕೊಬ್ಬಿನ ಮೊಸರು ಸೇವಿಸಿ.

ಮಧ್ಯಾಹ್ನದ ಊಟಕ್ಕೆ: ಊಟದಲ್ಲಿ ಸಲಾಡ್‌ಗಳು ಹಾಗೂ ಧಾನ್ಯಗಳು ಹೆಚ್ಚಿರಲಿ. ತರಕಾರಿ ಸಲಾಡ್ ಆದರೆ ಕ್ಯಾರೆಟ್, ಗುಲಾಬಿ ಬಣ್ಣದ ಮೂಲಂಗಿ, ಸಿಹಿ ಆಲೂಗಡ್ಡೆ, ಎಲೆಕೋಸು, ಬೀಟ್ರೂಟ್ ಸೇರಿದಂತೆ ಋತುಮಾನದ ತರಕಾರಿಗಳು ಹಸಿರು ಸೊಪ್ಪುಗಳಾದ ಪಾಲಕ್, ಮೆಂತ್ಯೆ, ಈರುಳ್ಳಿಬೇರಿನ ಸೊಪ್ಪು, ನುಗ್ಗೆ ಸೊಪ್ಪು ಜತೆಗೆ ಸೌತೆಕಾಯಿಗಳು ಇರಲಿ. ರಾಜ್ಮಾ ಕಾಳುಗಳು, ಚನಾ, ಬೀನ್ಸ್, ಮೊಟ್ಟೆಯ ಬಿಳಿಭಾಗ, ಮಾಂಸಾಹಾರಿಗಳಾಗಿದ್ದರೆ ಬೇಯಿಸಿದ ಕೋಳಿ ಮಾಂಸ ಅಥವಾ ಮೀನು ಬಳಸಬಹುದು. ಪಾಲಿಶ್ ಮಾಡದ ಕೆಂಪು ಅಥವಾ ಕಂದು ಬಣ್ಣದ ಅಕ್ಕಿ ಅಥವಾ ಕ್ವಿನೋವಾ/ರಾಗಿಯನ್ನು ಬಳಸಬಹುದು. ಇದು ಕ್ಯಾಲೋರಿಯನ್ನು ನಿಯಂತ್ರಿಸುತ್ತದೆ.

ಸಂಜೆಯ ಸ್ನ್ಯಾಕ್ಸ್: ಒಂದು ಮುಷ್ಠಿಯಷ್ಟು ಹುರಿದ ಗೋಡಂಬಿ ಮತ್ತು ಬಾದಾಮಿಯನ್ನು ಸೇವಿಸಬಹುದು ಅಥವಾ ಬೇಯಿಸಿದ ಕ್ಯಾರೆಟ್, ಸೌತೆಕಾಯಿ ತಿನ್ನಬಹುದು

ರಾತ್ರಿ ಊಟಕ್ಕೆ: ಮಧ್ಯಾಹ್ನದ ಊಟದಂತೆ ರಾತ್ರಿಯೂ ನೇರ ಪ್ರೋಟೀನ್ ಸೇವಿಸುವುದು ಒಳಿತು. ಆದಷ್ಟು ಪಿಷ್ಟರಹಿತ ತರಕಾರಿ ಸೇವನೆಗೆ ಆದ್ಯತೆ ನೀಡಿ. ಪಿಷ್ಟರಹಿತ ತರಕಾರಿಗಳಲ್ಲಿ ಚೀನಿಕಾಯಿ, ಕೋಸುಗಡ್ಡೆ, ದೊಡ್ಡಮೆಣಸಿನಕಾಯಿ, ಬೆಂಡೆಕಾಯಿ, ಬದನೆ, ಸೋರೆಕಾಯಿ ಇರಲಿ. ಅತಿಯಾದ ಖಾರ ಸೇವನೆ ಬೇಡ. ಕರಿದ ಪದಾರ್ಥಗಳಿಂದ ದೂರವಿರಿ.

ಇದರ ಜತೆಗೆ ಅನುಸರಿಸಲೇಬೇಕಾದ ಕೆಲವು ಸೂಚನೆಗಳಿವು.

- ದಿನಕ್ಕೆ ಕನಿಷ್ಠ 8ರಿಂದ 10 ಲೋಟ ನೀರು ಕುಡಿಯುರಿ. ನೀರು ಕುಡಿದಷ್ಟು ಹೈಡ್ರೇಟ್ ಆಗಬಹುದು. ಇದು ತೂಕ ಕಡಿಮೆ ಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಹಸಿವು ನಿಯಂತ್ರಣಕ್ಕೆ ಸದಾ ಊಟಕ್ಕೆ ಮೊದಲು ನೀರು ಸೇವನೆ ಮಾಡಿ. ಆದಷ್ಟು ಉಗುರು ಬೆಚ್ಚಗಿನ ನೀರು ಸೇವಿಸಿ.
- ತಿಂದಿದ್ದು ಚೆನ್ನಾಗಿ ಜೀರ್ಣವಾಗಲು ಉತ್ತಮ ನಿದ್ದೆಯೂ ಅಗತ್ಯ. ಇದರ ಜತೆಗೆ ಗ್ರೀನ್‌ಟೀ, ಬ್ಲ್ಯಾಕ್ ಟೀ ಅಥವಾ ಒಂದು ಚಮಚ ಆ್ಯಪಲ್ ಸೈಡರ್ ವಿನಿಗರ್ ಅಥವಾ ಎಳನೀರು , ನಿಂಬೆರಸ ಬೆರೆಸಿದ ಚಿಯಾ ಬೀಜಗಳಿರುವ ನೀರು ಸೇವಿಸಿ.
- ಒಂದೇ ಸಮನೆ ಊಟ ಮಾಡಬೇಡಿ. ಏನನ್ನು ತಿನ್ನುವುದಿದ್ದರೂ ಅದನ್ನು ಇಷ್ಟಿಷ್ಟೆ ತಿನ್ನಿ.
- ಸೋಡಾ, ಜ್ಯೂಸ್, ಸುವಾಸನೆಯುಕ್ತ ಹಾಲು, ಸಕ್ಕರೆಪಾನೀಯಗಳಿಂದ ದೂರವಿರಿ. ಬಿರುಸುನಡಿಗೆ, ಯೋಗ ಅಥವಾ ಮನೆಯಲ್ಲಿ ಲಘು ವ್ಯಾಯಾಮಗಳನ್ನು ಮಾಡಲು ಮರೆಯದಿರಿ.

ಲೇಖಕಿ, ಆಹಾರತಜ್ಞೆ

ಮದುವೆಯಾಚೆಗಿನ ಸ್ನೇಹ ಸರಿಯೇ?

ಅಂತರಂಗ



ಅಕ್ಷರ ದಾಮ್ಲೆ

ಮದುವೆಯಾಗಿರುವ ಗೃಹಿಣಿ. ಎರಡು ಮಕ್ಕಳ ತಾಯಿ. ಹರೆಯದಲ್ಲಿದ್ದಾಗ ಒಬ್ಬ ಹುಡುಗನನ್ನು ಪ್ರೀತಿಸುತ್ತಿದ್ದೆ. ಕಾರಣಾಂತರಗಳಿಂದ ಮದುವೆಯಾಗಲು ಸಾಧ್ಯವಾಗಲಿಲ್ಲ. ಅದೇ ಹುಡುಗ ಮದುವೆಯಾಗಿ ಮಕ್ಕಳಿಬ್ಬರ ತಂದೆಯೂ ಆಗಿದ್ದಾನೆ. ಇತ್ತೀಚೆಗೆ ಕಾರ್ಯಕ್ರಮವೊಂದರಲ್ಲಿ ಭೇಟಿಯಾದೆ. ಅವನ ಜತೆ ಎಂದಿನಂತೆ ಪ್ರೀತಿ, ಸಲುಗೆಯಿಂದ ಮಾತನಾಡುತ್ತಿದ್ದೇನೆ. ಇದು ಸರಿಯಾ? ಇದರಿಂದ ಇಬ್ಬರ ಬದುಕಿನ ಮೇಲೆ ತೊಂದರೆ ಆಗುತ್ತದೆಯಾ?. ಅವನ ಪ್ರೀತಿಗಿಂತಲೂ ಅವನ ಸ್ನೇಹ ತುಂಬಾ ದೊಡ್ಡದು ಎಂದು ನನಗೆ ತೀವ್ರವಾಗಿ ಅನಿಸುತ್ತದೆ. ಅವನೊಂದಿಗೆ ಮಾತನಾಡುತ್ತಿರುವುದಕ್ಕೆ ಪಾಪಪ್ರಜ್ಞೆಯೂ, ಸದಾ ಮಾತನಾಡುತ್ತಿರಬೇಕೆಂಬ ತುಡಿತ. ಇವುಗಳ ಮಧ್ಯೆ ಇದ್ದೇನೆ. ಈ ಸಮಸ್ಯೆಗೆ ಪರಿಹಾರವೇನು?

ಜೀವನದ ಬೇರೆ ಬೇರೆ ಘಟ್ಟಗಳಲ್ಲಿ ಬೇರೆ ಬೇರೆ ಅನುಭವಗಳು ನಮ್ಮದಾಗುತ್ತವೆ. ಅಂತೆಯೇ ಹದಿಹರೆಯದ ವಯಸ್ಸಿನಲ್ಲಿ ಆಕರ್ಷಣೆ ಆಗಿದ್ದರೆ ಅದೇನೂ ತಪ್ಪಲ್ಲ. ಅದು ವಯೋಸಹಜವಾಗಿ ಆಗಿರಬಹುದಾದಂಥ ವಿಷಯ. ಹಾಗಂತ ಆ ಆಕರ್ಷಣೆಯನ್ನೇ ಆಧರಿಸಿ ಅದನ್ನು ಪ್ರೀತಿ ಮತ್ತು ಆಮೇಲೆ ಜೀವನ ಇವೆಲ್ಲವನ್ನೂ ಕಲ್ಪಿಸಿಕೊಳ್ಳುವ ಶಕ್ತಿ ಆ ವ್ಯಕ್ತಿಗಳಿಗೆ ಇದೆಯೇ ಎಂಬುದು ತೀರಾ ವೈಯಕ್ತಿಕ ವಿಚಾರ. ಅಂದರೆ, ಕೆಲವರಿಗೆ ಆ ವಯಸ್ಸಿನಲ್ಲೇ ತಮ್ಮ ನಿರ್ಧಾರಗಳ ಕುರಿತು ಸ್ಪಷ್ಟತೆ ಇರಬಹುದು. ಆದರೆ ಇನ್ನೊಂದಷ್ಟು ಜನರಿಗೆ ಗೊಂದಲಗಳಾಗಬಹುದು. ಅಥವಾ ಆ ಆಕರ್ಷಣೆಗಳು ಒಂದಷ್ಟು ಸಮಯದಲ್ಲೇ ಮುದುಡಿ ಹೋಗಬಹುದು.

ನಿಮ್ಮ ಜೀವನದಲ್ಲಿ ಹಾಗೆ ಮುದುಡಿದ್ದ ಭಾವ ಈಗ ಅರಳಿದೆ. ಮರುಭೇಟಿಯ ನಂತರ ಚಿಗುರಿದೆ. ಆದರೆ ಈಗ ನಿಮ್ಮಿಬ್ಬರ ಪರಿಸ್ಥಿತಿಯೂ ಬದಲಾಗಿದೆ. ಬಾಲ್ಯದ ಗೆಳೆಯನೆಂಬ ಸಲುಗೆಯಾದರೆ ಅದು ತಪ್ಪೇನಲ್ಲ. ಯಾಕೆಂದರೆ ಬಾಲ್ಯದ ಗೆಳೆತನವೇ ಅಂಥದ್ದು. ಏಕವಚನದಲ್ಲಿ ಕರೆದುಕೊಂಡು, ತಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ಹೇಳುವಂಥ, ಮತ್ತು ಒಬ್ಬರು ಇನ್ನೊಬ್ಬರ ಕಾಲೆಳೆಯುವಂತಹ ಗೆಳೆತನ ಬೆಳೆದಿರುತ್ತದೆ. ಹಾಗಿದ್ದಾಗ, ನೀವಿಬ್ಬರೂ ಬೇರೆ ವ್ಯಕ್ತಿಗಳನ್ನು ಮದುವೆಯಾಗಿದ್ದರೂ, ಸ್ನೇಹಾಚಾರವನ್ನು ಇಟ್ಟುಕೊಳ್ಳಬಹುದು.

ಆದರೆ, ನಿಮ್ಮ ಸಂದರ್ಭದಲ್ಲಿ ನೋಡುವುದಾದರೆ, ನಿಮ್ಮ ನಡುವೆ ಅದು ಕೇವಲ ಸ್ನೇಹವಾಗಿಯೇ ಉಳಿಯುವುದೇ ಎಂಬುದು ದೊಡ್ಡ ಸವಾಲು. ಮತ್ತು ನಿಮ್ಮಿಬ್ಬರ ನಡುವೆಯೂ ಆ ಮಟ್ಟಿನ ಪ್ರೌಢಿಮೆ ಇದೆಯೋ ಎಂಬುವುದನ್ನು ನೀವೇ ಕಂಡುಕೊಳ್ಳಬೇಕು. ಯಾಕೆಂದರೆ, ಒಂದು ವೇಳೆ ಅದು ಸ್ನೇಹವಾಗಿಯೇ ಉಳಿದರೆ, ಸಂತೋಷ. ಇಲ್ಲವಾದಲ್ಲಿ ಎರಡು ಕುಟುಂಬಗಳ ನಡುವಿನ ಬಿರುಕಿಗೆ ಕಾರಣವಾಗಬಹುದು. ಮಾತ್ರವಲ್ಲ,



ನಿಮಗಿಬ್ಬರಿಗೂ ಮಕ್ಕಳಿರುವ ಕಾರಣ, ಋಣಾತ್ಮಕ ಪರಿಣಾಮಗಳು ಮಕ್ಕಳ ಮೇಲೆ ಬಹಳ ಕೆಟ್ಟ ರೀತಿಯಲ್ಲಿ ಪ್ರಭಾವ ಬೀರಬಹುದು. ಹಾಗಾಗಿ ಈ ವಿಚಾರದಲ್ಲಿ ಜಾಗರೂಕರಾಗಿ ಮುಂದುವರಿಯುವುದು ಒಳಿತು. ನೀವಿಬ್ಬರೂ ವಯಸ್ಕರಿದ್ದೀರಿ. ಜೀವನವನ್ನು ತಕ್ಕ ಮಟ್ಟಿಗೆ ನೋಡಿದವರಾಗಿರುತ್ತೀರಿ. ಸಮಾಜದ ಸಮತೋಲನಗಳ ಬಗ್ಗೆ ಅರಿವಿರುವವರಿರುತ್ತೀರಿ. ಹಾಗಾಗಿ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಸ್ನೇಹವನ್ನು ಮುಂದುವರೆಸಬೇಕಾ ಅಥವಾ ಕೈಬಿಡಬೇಕಾ ಎಂಬುದನ್ನು ನಿರ್ಧರಿಸಿ. ಇಲ್ಲಿ ಮೂರನೆಯ ವ್ಯಕ್ತಿಯಾಗಿ ನಾನು ಇದು ಸರಿ ಅಥವಾ ಇದು ತಪ್ಪು ಎಂದು ಹೇಳುವ ಬದಲು, ನಿಮಗೆ ಇರುವಂತಹ ಎಲ್ಲಾ ರೀತಿಯ ಸಾಧ್ಯತೆಗಳನ್ನು ತೋರಿಸಿ, ನಿರ್ಧಾರವನ್ನು ನಿಮ್ಮ ಆಯ್ಕೆಗೇ ಬಿಡುತ್ತೇನೆ. ಯಾಕೆಂದರೆ, ನೀವು ಹೀಗೆಯೇ ಮಾಡಿ, ಅಥವಾ ಹಾಗೆಯೇ ಮಾಡಿ, ಅಥವಾ ಹೀಗೆ ಮಾಡಬೇಡಿ ಅಂತೆಲ್ಲಾ ಹೇಳುವುದು ಒಬ್ಬ ಮನಃಶ್ಶಾಸ್ತ್ರಜ್ಞನ ಕೆಲಸವಲ್ಲ. ನಾವು ನಿಮ್ಮ ಜೀವನಕ್ಕೆ ಜವಾಬ್ದಾರಿಯನ್ನು ತೆಗೆದುಕೊಳ್ಳುವವರಲ್ಲ. ನಿಮ್ಮ ಜೀವನಕ್ಕೆ ನೀವೇ ಜವಾಬ್ದಾರರು. ಹಾಗಾಗಿ ಯೋಚಿಸಿ, ನಿಮ್ಮ ಮುಂದಿರುವ ಆಯ್ಕೆಗಳನ್ನು ತೂಗಿ ನೋಡಿ ನಿರ್ಧಾರವನ್ನು ತೆಗೆದುಕೊಳ್ಳಿ.

ಅವರೆಕಾಳು ವಿಶೇಷ ಖಾದ್ಯ

ಈ ಋತುವಿನಲ್ಲಿ ಹೇರಳವಾಗಿ ಅವರೆಕಾಳು ಸಿಗುತ್ತದೆ. ಅದನ್ನು ಬಳಸಿಕೊಂಡು, ಹಲವು ಬಗೆಯ ರುಚಿಯಾದ ಖಾದ್ಯಗಳನ್ನು ತಯಾರಿಸಬಹುದು. ಇವುಗಳ ರೆಸಿಪಿ ನೀಡಿದ್ದಾರೆ **ವೇದಾವತಿ ಎಚ್.ಎಸ್.**

ಅವರೆಕಾಳು ಗೋಡಂಬಿ ಮಿಕ್ಸ್ಚರ್



ಬೇಕಾಗುವ ಸಾಮಗ್ರಿಗಳು: ಹಿತಕಿದ ಅವರೆಕಾಳು 2 ಕಪ್, ಗೋಡಂಬಿ 1/2 ಕಪ್, ಅಚ್ಚಖಾರದ ಪುಡಿ 1 ಟೀ ಚಮಚ ಚಮಚ, ಕಾಳುಮೆಣಸಿನ ಪುಡಿ 1/2 ಟೀ ಚಮಚ, ಗರಂಮಸಾಲೆ 1/4 ಟೀ ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಕರಿಬೇವು ಸ್ವಲ್ಪ, ಕರಿಯಲು ಎಣ್ಣೆ.

ತಯಾರಿಸುವ ವಿಧಾನ: ಹಿತಕಿದ ಅವರೆಕಾಳಿನಲ್ಲಿರುವ ತೇವಾಂಶ ಹೋಗುವವರೆಗೆ ಒಂದು ಬಟ್ಟೆಯಲ್ಲಿ ಒಣಗಲು ಹಾಕಿಡಿ. ಒಣಗಿಸಿದ ಹಿತಕಿದ ಅವರೆಕಾಳಾದರೆ ಉತ್ತಮ. ಬಾಣಲೆಯಲ್ಲಿ ಎಣ್ಣೆಯನ್ನು ಬಿಸಿ ಮಾಡಿಕೊಳ್ಳಿ. ಅದರಲ್ಲಿ ಅವರೆಕಾಳನ್ನು ಡೀಪ್ ಫ್ರೈ ಮಾಡಿ. ನಂತರ ಎಣ್ಣೆ ಹೋಗಲು ಟಿಷ್ಯು ಪೇಪರಿನಲ್ಲಿ ಹಾಕಿಡಿ. ಬಳಿಕ ಗೋಡಂಬಿ, ಕರಿಬೇವನ್ನು ಅದೇ ಎಣ್ಣೆಯಲ್ಲಿ ಫ್ರೈ ಮಾಡಿಕೊಳ್ಳಿ. ಫ್ರೈ ಮಾಡಿಕೊಂಡ ಪದಾರ್ಥಗಳನ್ನು ಒಂದು ಬಟ್ಟಲಿನಲ್ಲಿ ಹಾಕಿ. ಸ್ವಲ್ಪ ಬಿಸಿ ಇರುವಾಗಲೇ ಅಚ್ಚಖಾರದ ಪುಡಿ, ಕಾಳುಮೆಣಸಿನ ಪುಡಿ, ಗರಂಮಸಾಲೆ ಪುಡಿ, ಉಪ್ಪನ್ನು ಸೇರಿಸಿ ಮಿಶ್ರಣ ಮಾಡಿ. ಮಿಕ್ಸ್ಚರ್‌ನ್ನು ಒಂದು ಗಾಳಿಯಾಡದ ಡಬ್ಬಿಯಲ್ಲಿ ತುಂಬಿಸಿಡಿ. ಬೇಕಾದಾಗ ಸವಿಯಿರಿ.


ರಾಗಿ ರೊಟ್ಟಿ



ಬೇಕಾಗುವ ಸಾಮಗ್ರಿಗಳು: ಹಿತಕಿದ ಅವರೆಕಾಳು 1 ಕಪ್, ಈರುಳ್ಳಿ ಚಿಕ್ಕದಾಗಿ ಹೆಚ್ಚಿದ್ದು 2, ರಾಗಿ ಹಿಟ್ಟು 2 ಕಪ್, ಹಸಿ ಶುಂಠಿ ಒಂದಿಂಚು ಚಿಕ್ಕದಾಗಿ ಕತ್ತರಿಸಿಕೊಳ್ಳಿ. ಹಸಿಮೆಣಸಿಕಾಯಿ ಚಿಕ್ಕದಾಗಿ ಹೆಚ್ಚಿದ್ದು 4, ಜೀರಿಗೆ 1 ಟೀ ಚಮಚ, ಕ್ಯಾರೆಟ್ ತುರಿ 1/2 ಕಪ್, ಕೊತ್ತಂಬರಿ ಸೊಪ್ಪು ಒಂದು ಹಿಡಿ, ಮೆಂತ್ಯ ಅಥವಾ ಸಬ್ಬಸಿಗೆ ಸೊಪ್ಪು 1 ಚಿಕ್ಕ ಕಟ್ಟು, ತೆಂಗಿನತುರಿ 1/2 ಕಪ್, ರುಚಿಗೆ ತಕ್ಕಷ್ಟು ಉಪ್ಪು, ಬೇಯಿಸಲು ತುಪ್ಪ ಅಥವಾ ಎಣ್ಣೆ.

ತಯಾರಿಸುವ ವಿಧಾನ: ಹಿತಕಿದ ಅವರೆಕಾಳನ್ನು ಮೆತ್ತಗೆ ಬೇಯಿಸಿಕೊಂಡು ನೀರನ್ನು ಸೋಸಿಕೊಳ್ಳಿ. ಅಗಲವಾದ ಪಾತ್ರೆಯಲ್ಲಿ ಮೇಲೆ ತಿಳಿಸಿರುವ ಎಲ್ಲಾ ಪದಾರ್ಥಗಳನ್ನೂ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಬಳಿಕ ಬಿಸಿ ನೀರನ್ನು ಸ್ವಲ್ಪ ಸ್ವಲ್ಪವೇ ಹಾಕುತ್ತಾ ಹಿಟ್ಟನ್ನು ಗಟ್ಟಿಯಾಗಿ ಕಲಸಿಕೊಳ್ಳಿ. ಬೈಡಿಂಗ್ ಪೇಪರಿನಲ್ಲಿ ನಿಮಗೆ ಬೇಕಾದ ಗಾತ್ರದ ಹಿಟ್ಟಿನ ಉಂಡೆಯನ್ನು ತೆಗೆದುಕೊಂಡು ತೆಳುವಾಗಿ ತಟ್ಟಿಕೊಂಡು ಮಧ್ಯಮ ಉರಿಯಲ್ಲಿ ಎರಡೂ ಬದಿಗೂ ಎಣ್ಣೆ ಅಥವಾ ತುಪ್ಪವನ್ನು ಹಾಕಿ ಬೇಯಿಸಿ. ರೊಟ್ಟಿಯನ್ನು ಚಟ್ನಿಯೊಂದಿಗೆ ಸವಿಯಿರಿ.

ನಿಪ್ಪಟ್ಟು



ಬೇಕಾಗುವ ಸಾಮಗ್ರಿಗಳು: ಬೇಯಿಸಿದ ಹಿತಕಿದ ಅವರೆಕಾಳು 1 ಕಪ್, ಅಕ್ಕಿ ಹಿಟ್ಟು 1 ಕಪ್, ಹುರಿಗಡಲೆ ಪುಡಿ 1/4 ಕಪ್, ಹುರಿದು ಪುಡಿ ಮಾಡಿದ ಶೇಂಗಾ ಪುಡಿ 1/4 ಕಪ್, ಅಚ್ಚಖಾರದ ಪುಡಿ 1 ಚಮಚ, ಇಂಗು 1/4 ಟೀ ಚಮಚ, ಬಿಳಿ ಎಳ್ಳು 1 ಟೀ ಚಮಚ, ಒಣಕೊಬ್ಬರಿ ತುರಿ 3 ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಎಣ್ಣೆ ಕರಿಯಲು.

ತಯಾರಿಸುವ ವಿಧಾನ: ತಿಳಿಸಿರುವ ಎಲ್ಲಾ ಪದಾರ್ಥಗಳನ್ನು ಒಂದು ಬಾಣಲೆಯಲ್ಲಿ ಹಾಕಿ ಮಿಶ್ರಣ ಚೆನ್ನಾಗಿ ಮಾಡಿಕೊಳ್ಳಿ. ಬಳಿಕ ಎರಡು ಚಮಚ ಎಣ್ಣೆಯನ್ನು ಬಿಸಿ ಮಾಡಿ ಅದನ್ನು ಹಿಟ್ಟಿಗೆ ಹಾಕಿ ಹದ ಮಾಡಿಕೊಳ್ಳಿ. ಈಗ ಹಿಟ್ಟಿಗೆ ಸ್ವಲ್ಪ ಸ್ವಲ್ಪವೇ ನೀರನ್ನು ಹಾಕಿ ಕೊಳ್ಳುತ್ತಾ ಪೂರಿ ಹಿಟ್ಟಿನ ಹದದಲ್ಲಿ ಕಲಸಿಕೊಳ್ಳಿ. ಹಿಟ್ಟನ್ನು ಕೈಯಲ್ಲಿ ಚೆನ್ನಾಗಿ ನಾದಿಕೊಳ್ಳಿ. ನಂತರ ತಯಾರಿಸಿಕೊಂಡ ಹಿಟ್ಟಿನಿಂದ ಚಿಕ್ಕ ಚಿಕ್ಕ ಉಂಡೆಗಳನ್ನು ಮಾಡಿಕೊಂಡು ಅದನ್ನು ಬೈಡಿಂಗ್ ಪೇಪರ್ ಅಥವಾ ಬಾಳೆಎಲೆಯಲ್ಲಿ ತಟ್ಟಿಕೊಳ್ಳಿ. ತುಂಬಾ ತೆಳುವಾಗಿ ಬೇಡ. ಬಳಿಕ ಬಾಣಲೆಯಲ್ಲಿ ಎಣ್ಣೆಯನ್ನು ಬಿಸಿಮಾಡಿಕೊಂಡು ಮಧ್ಯಮ ಉರಿಯಲ್ಲಿ ಎರಡೂ ಬದಿಯನ್ನು ಕೆಂಬಣ್ಣ ಬರುವವರೆಗೆ ಕರಿಯಿರಿ.

ಖಾರಾಬಾತ್

ತಯಾರಿಸುವ ವಿಧಾನ: ಅವರೆಕಾಳನ್ನು ಸ್ವಲ್ಪ ಮೆತ್ತಗಾಗುವರೆಗೆ ಬೇಯಿಸಿಕೊಳ್ಳಿ. ರವೆಯನ್ನು ಹುರಿದುಕೊಳ್ಳಿ. ಬಾಣಲೆಯಲ್ಲಿ ತುಪ್ಪವನ್ನು ಹಾಕಿ ಬಿಸಿಮಾಡಿಕೊಳ್ಳಿ. ಅದರಲ್ಲಿ ಸಾಸಿವೆ, ಉದ್ದಿನಬೇಳೆ, ಕಡಲೆಬೇಳೆ, ಗೋಡಂಬಿ ಮತ್ತು ಕರಿಬೇವನ್ನು ಹಾಕಿ ಹುರಿಯಿರಿ. ಸಾಸಿವೆ ಸಿಡಿದ ನಂತರ ಚಿಕ್ಕದಾಗಿ ಕತ್ತರಿಸಿದ ಈರುಳ್ಳಿಯನ್ನು ಹಾಕಿ ಬಾಡಿಸಿ. ಬಳಿಕ ಚಿಕ್ಕದಾಗಿ ಕತ್ತರಿಸಿದ ಟೊಮೆಟೊ ಸೇರಿಸಿ ಮೆತ್ತಗಾಗುವರೆಗೆ ಬಾಡಿಸಿ. ನಂತರ ತಿಳಿಸಿರುವ ತರಕಾರಿಗಳನ್ನು ಚಿಕ್ಕದಾಗಿ ಹೆಚ್ಚಿ ಜತೆಗೆ ಸೇರಿಸಿ. ಅವುಗಳೊಂದಿಗೆ ಬೇಯಿಸಿ ನೀರನ್ನು ಸೋಸಿಕೊಂಡ ಅವರೆಕಾಳನ್ನು ಸೇರಿಸಿ. ಇವುಗಳನ್ನು 2 ರಿಂದ 3 ನಿಮಿಷ ಮೆತ್ತಗಾಗುವರೆಗೆ ಹುರಿಯಿರಿ. ತರಕಾರಿಗಳು ಮೆತ್ತಗಾದ ಬಳಿಕ ಅರಿಶಿನ, ಉಪ್ಪು ಮತ್ತು ವಾಂಗಿಬಾತ್ ಪುಡಿ ಸೇರಿಸಿ ಮಿಶ್ರಣ ಮಾಡಿ. ನೀರು ಚೆನ್ನಾಗಿ ಕುದಿ ಬಂದ ನಂತರ ಹುರಿದ ರವೆ ಹಾಕಿ. ಸಣ್ಣ ಉರಿಯಲ್ಲಿ ಗಂಟಾಗದ ರೀತಿಯಲ್ಲಿ ಮಗುಚಿ. ಐದು ನಿಮಿಷ ಮುಚ್ಚಿ ಬೇಯಿಸಿ. ತೆಂಗಿನತುರಿ, ನಿಂಬೆರಸ ಸೇರಿಸಿ ಒಲೆಯಿಂದ ಇಳಿಸಿ.

ಚಿಕ್ಕಿ

ಬೇಕಾಗುವ ಸಾಮಗ್ರಿಗಳು: ಒಣಗಿಸಿಟ್ಟ ಹಿತಕಿದ ಅವರೆಕಾಳು 150 ಗ್ರಾಂ, ಶೇಂಗಾ ಬೀಜ 350 ಗ್ರಾಂ, ಬೆಲ್ಲ 450 ಗ್ರಾಂ, ನೀರು 1/4 ಕಪ್, ಏಲಕ್ಕಿಪುಡಿ 1/2 ಟೀ ಚಮಚ.

ತಯಾರಿಸುವ ವಿಧಾನ: ಹಸಿ ಹಿತಕಿದ ಅವರೆಕಾಳನ್ನು ಮೂರು ದಿನ ಬಿಸಿಲಿನಲ್ಲಿ ಒಣಗಿಸಿ. ಬಳಿಕ ಅದನ್ನು ಸಣ್ಣ ಉರಿಯಲ್ಲಿ ಗರಿ ಗರಿಯಾಗುವರೆಗೆ ಹುರಿಯಿರಿ. ಶೇಂಗಾ ಬೀಜವನ್ನು ಸಣ್ಣ ಉರಿಯಲ್ಲಿ ಹುರಿದು ಸಿಪ್ಪೆ ತೆಗೆಯಿರಿ. ಬಳಿಕ ಎರಡು ಭಾಗ ಮಾಡಿಕೊಳ್ಳಿ. ಬಾಣಲೆಗೆ ಬೆಲ್ಲ ಮತ್ತು ನೀರನ್ನು ಹಾಕಿ ಗಟ್ಟಿ ಪಾಕ ತಯಾರಿಸಿಕೊಳ್ಳಿ. ಬಳಿಕ ಒಲೆಯನ್ನು ಆರಿಸಿ. ಪಾಕ ಬಿಸಿ ಇರುವಾಗಲೇ ಏಲಕ್ಕಿಪುಡಿ, ಅವರೆಕಾಳು, ಶೇಂಗಾ ಬೀಜ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ಬಳಿಕ ತುಪ್ಪ ಸವರಿದ ತಟ್ಟೆಗೆ ತೆಳುವಾಗಿ ಹರಡಿ. ಸ್ವಲ್ಪ ಬಿಸಿ ಇರುವಾಗಲೇ ಕತ್ತರಿಸಿ. ಆರಿದ ಬಳಿಕ ತಟ್ಟೆಯಿಂದ ತೆಗೆದಿಡಿ.



ಕಾಂಗ್ರೆಸ್ ಭವನದ 'ಕ್ರೆಡಿಟ್' ವಿಚಾರ ● ಡಿ.ಕೆ.ಶಿ ವಿರುದ್ಧ ಧ್ವನಿ ಎತ್ತಿದ ಸತೀಶ ಬೆಂಬಲಿಗರು

ಸುರ್ಜೇವಾಲಾ ಎದುರೇ ಜಟಾಪಟಿ

ಪ್ರಜಾವಾಣಿ ವಾರ್ತೆ



ಬೆಳಗಾವಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಶುಕ್ರವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಭಾಷಣ ಮಾಡುವ ವೇಳೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದರು

ಬೆಳಗಾವಿ: ಜಿಲ್ಲಾ ಕಾಂಗ್ರೆಸ್ ಭವನ ನಿರ್ಮಾಣದ 'ಕ್ರೆಡಿಟ್' ಗುದ್ದಾಟ ಬೆಳಗಾವಿಯಲ್ಲಿ ಮತ್ತೆ ಪ್ರತಿಧ್ವನಿಸಿತು.

ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ನೇತೃತ್ವದಲ್ಲಿ ಶುಕ್ರವಾರ ನಡೆದ ಸಭೆಯಲ್ಲೇ, ಸಚಿವ ಸತೀಶ ಜಾರಕಿಹೊಳಿ ಅವರ ಬೆಂಬಲಿಗರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ವಿರುದ್ಧ ಅಸಮಾಧಾನ ಹೊರಹಾಕಿದರು.

1924ರ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಪ್ರಯುಕ್ತ ಜನವರಿ 21ರಂದು ನಡೆಯುವ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಸಮಾವೇಶದ ಸಿದ್ಧತೆಗೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿತ್ತು.

ಸಭೆಯ ನೇತೃತ್ವವನ್ನು ವಹಿಸಿದ್ದ ಸುರ್ಜೇವಾಲಾ, 'ಎಲ್ಲ ನಾಯಕರೂ ಸಮಾವೇಶದ ಯಶಸ್ಸಿಗೆ ಶ್ರಮಿಸಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಸೇರಿಸಬೇಕು' ಎಂದು ಕರೆಕೊಟ್ಟರು.

ಅವರ ಭಾಷಣಕ್ಕೆ ಅಡ್ಡಿಪಡಿಸಿದ ಪಕ್ಷದ ಮುಖಂಡ ಬಾಬುಲಾಲ ಬಾಗವಾನ್, 'ಬೆಳಗಾವಿಯಲ್ಲಿ ಕಾಂಗ್ರೆಸ್ ಭವನ ನಿರ್ಮಿಸಿದ್ದು ಸಚಿವ ಸತೀಶ ಜಾರಕಿಹೊಳಿ. ವಿದ್ಯುತ್ ಶುಲ್ಕ ಸೇರಿ ಎಲ್ಲ ರೀತಿಯ ಖರ್ಚು–ವೆಚ್ಚ ನಿರ್ವಹಿಸುವುದು ಅವರೇ. ಇದಕ್ಕೆ ಕಾಂಗ್ರೆಸ್‌ನ ಉಳಿದ ಘಟಾನುಘಟಿ ನಾಯಕರ ಕೊಡುಗೆ ಏನು' ಎಂದು ಪ್ರಶ್ನಿಸಿದರು.

'ಜಿಲ್ಲೆಯಲ್ಲಿ ಸತೀಶ ಜಾರಕಿಹೊಳಿ ಹೊರತುಪಡಿಸಿದರೆ, ಪಕ್ಷಕ್ಕೆ ಯಾವ ನಾಯಕರೂ ಹಣ ಖರ್ಚು ಮಾಡಲ್ಲ. ಈ ಸಭೆಗೆ ಜಿಲ್ಲೆಯ ಶಾಸಕರು ಏಕೆ ಬಂದಿಲ್ಲ' ಎಂದು ಪ್ರಶ್ನಿಸಿದರು. ಅವರೊಂದಿಗೆ ಇತರ ನಾಯಕರೂ ದನಿಗೂಡಿಸಿದರು.

'ಸಮಾವೇಶ ಕುರಿತು ಚರ್ಚಿಸಲು ಇಲ್ಲಿ ಸೇರಿದ್ದೇವೆ. ಕಾಂಗ್ರೆಸ್ ಭವನ ನಿರ್ಮಾಣದ ವಿಷಯ ಇಲ್ಲಿ ಚರ್ಚಿಸುವುದು ಬೇಡ. ಜಿಲ್ಲೆಯ ಶಾಸಕರೊಂದಿಗೆ ಬೆಳಿಗ್ಗೆಯೇ ಸಭೆ ನಡೆಸಿದ್ದರಿಂದ ಅವರು ಇಲ್ಲಿಗೆ ಬಂದಿಲ್ಲ' ಎಂದು ಸುರ್ಜೇವಾಲಾ ಹೇಳಿದರೂ ಬಾಗವಾನ್ ಪಟ್ಟು ಸಡಿಲಿಸಲಿಲ್ಲ. ಆಗ ಸಭೆಯಲ್ಲಿ ಕೆಲಕಾಲ ಗೊಂದಲದ ವಾತಾವರಣ ಸೃಷ್ಟಿಯಾಯಿತು.

'ಸತೀಶ ಖುಷಿಪಡಿಸಲು ನೀವೆಲ್ಲ ಹೀಗೆ ಮಾತನಾಡುತ್ತಿದ್ದೀರಿ' ಎಂದು ಸುರ್ಜೇವಾಲಾ ಹೇಳಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕೆಪಿಸಿಸಿ ಸದಸ್ಯೆ ಆಯೇಷಾ ಸನದಿ, 'ಸತೀಶ ಜಾರಕಿಹೊಳಿ ಅವರ ಸಲುವಾಗಿ ನಾವು ಜೀವ ಬೇಕಾದರೂ ಕೊಡುತ್ತೇವೆ. ಇಷ್ಟೆಲ್ಲ ಜನ ಅವರ ಸಲುವಾಗಿ ಬಂದಿದ್ದಾರೆ' ಎಂದರು.

ಇಷ್ಟೆಲ್ಲ ಬೆಳವಣಿಗೆ ನಡೆದರೂ ಸತೀಶ ಜಾರಕಿಹೊಳಿ ಸುಮ್ಮನೆ ಕೂತಿದ್ದರು.

ಗೊಂದಲ ಬಗೆಹರಿದ ಬಳಿಕ, ಸುರ್ಜೇವಾಲಾ ತಮ್ಮ ಭಾಷಣ ಮುಂದುವರಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ ಮತ್ತಿತರರು ಇದ್ದರು.

ಮುಖ್ಯಾಂಶಗಳು

- ರಾಜ್ಯ ಉಸ್ತುವಾರಿ ಸುರ್ಜೇವಾಲಾ ಭಾಷಣಕ್ಕೆ ಅಡ್ಡಿ
- 'ಸತೀಶ ಖುಷಿಪಡಿಸಲು ನೀವೆಲ್ಲ ಹೀಗೆ ಮಾತನಾಡುತ್ತಿದ್ದೀರಿ'
- ಬೆಂಬಲಿಗರ ನಡೆಯನ್ನು ಮೌನವಾಗಿ ವೀಕ್ಷಿಸಿದ ಸತೀಶ ಜಾರಕಿಹೊಳಿ

ಪ್ರತ್ಯೇಕ ಸಭೆ ನಡೆಸಿದ ಸುರ್ಜೇವಾಲಾ, ಡಿ.ಕೆ.ಶಿ

ಬೆಳಗಾವಿ: ಇಲ್ಲಿನ ಹೋಟೆಲ್‌ವೊಂದರಲ್ಲಿ ಶುಕ್ರವಾರ ರಾತ್ರಿ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಅವರ ಸಹೋದರ ಡಿ.ಕೆ.ಸುರೇಶ್ ಅವರು ಪ್ರತ್ಯೇಕವಾಗಿ ಗೋಪ್ಯ ಸಭೆ ನಡೆಸಿದರು.

ಅರ್ಧ ಗಂಟೆ ಸಭೆಯಲ್ಲಿ ಚರ್ಚಿಸಿದ ಮೂವರೂ ನಾಯಕರು, ಬಳಿಕ ಒಂದೇ ವಾಹನದಲ್ಲಿ ಹೋಟೆಲ್‌ನಿಂದ ವಿಜಯಾ ಆಸ್ಪತ್ರೆಗೆ ತೆರಳಿ, ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ಆರೋಗ್ಯ ವಿಚಾರಿಸಿದರು.

ಇದಕ್ಕೂ ಮುನ್ನ ಸುರ್ಜೇವಾಲಾ ಅವರು ಸಚಿವ ಸತೀಶ ಜಾರಕಿಹೊಳಿ ಅವರನ್ನು ಭೇಟಿಯಾಗಿ ಚರ್ಚಿಸಿದರು. ಹೀಗಾಗಿ, ಡಿ.ಕೆ.ಶಿವಕುಮಾರ್ ಅವರೊಂದಿಗೆ ನಡೆಸಿದ ಸಭೆ ಕುತೂಹಲ ಕೆರಳಿಸಿದೆ.

'ಶತಮಾನದ ದಾಖಲೆ, ಪುಸ್ತಕಗಳ ಲೋಕಾರ್ಪಣೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: '1924ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಕೆಲ ದಾಖಲೆಗಳು, ಇತಿಹಾಸದ ಪುಸ್ತಕಗಳು ಮತ್ತು 2024ರ ಡಿಸೆಂಬರ್‌ನಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಣಯಗಳನ್ನು ಇಲ್ಲಿ ಜನವರಿ 21ರಂದು ನಡೆಯುವ 'ಜೈ ಬಾಪು, ಜೈ ಭೀಮ್, ಜೈ ಸಂವಿಧಾನ' ಸಮಾವೇಶದಲ್ಲಿ ಎಐಸಿಸಿ ಬಿಡುಗಡೆಗೊಳಿಸಲಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

'ಇದು ಎಐಸಿಸಿ ಕಾರ್ಯಕ್ರಮವೇ ಹೊರತು ಕೆಪಿಸಿಸಿಯದ್ದು ಅಲ್ಲ. ಪ್ರತಿ ವಿಧಾನಸಭೆ ಕ್ಷೇತ್ರದಿಂದ ಕನಿಷ್ಠ 100 ಕಾರ್ಯಕರ್ತರು ಪಾಲ್ಗೊಳ್ಳಬೇಕು ಎಂದು ಹೇಳಿದ್ದೇವೆ. ಸಮಾವೇಶ ಮಾತ್ರವಲ್ಲ, 1924ರಲ್ಲಿ ಮಹಾತ್ಮ ಗಾಂಧಿ ಅಧ್ಯಕ್ಷತೆಯಲ್ಲಿ ನಡೆದಿದ್ದ ಕಾಂಗ್ರೆಸ್ ಅಧಿವೇಶನದ ಸ್ಥಳವಾದ ವೀರಸೌಧಕ್ಕೂ ಎಲ್ಲರೂ ಭೇಟಿ ನೀಡುವರು' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು. 'ಕಾಂಗ್ರೆಸ್ ರಾಜ್ಯಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು, ಸಮಾವೇಶದ ಸಿದ್ಧತೆ ಪರಿಶೀಲಿಸಿದ್ದಾರೆ. ಜನವರಿ 18ರಂದು ಧಾರವಾಡದಲ್ಲೂ ಸಭೆ ಮಾಡುತ್ತೇವೆ' ಎಂದರು.

'ಸಮಾವೇಶದ ದಿನವೇ, ಸುವರ್ಣ ವಿಧಾನಸೌಧದಲ್ಲಿ ಮಹಾತ್ಮ ಗಾಂಧಿ ಅವರ ಪ್ರತಿಮೆ ಅನಾವರಣ ನಡೆಯಲಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಉಪಸ್ಥಿತಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇದನ್ನು ಅನಾವರಣ ಮಾಡುವರು. ಇದು ಸರ್ಕಾರಿ ಕಾರ್ಯಕ್ರಮ. ಎಲ್ಲ ಪಕ್ಷಗಳ ನಾಯಕರನ್ನೂ ಆಹ್ವಾನಿಸಿದ್ದೇವೆ' ಎಂದರು.

ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ತಮಗೆ ಆಹ್ವಾನ ನೀಡದ್ದಕ್ಕೆ ಸಂಸದ ಜಗದೀಶ ಶೆಟ್ಟರ್ ಆಕ್ಷೇಪ ವ್ಯಕ್ತಪಡಿಸಿದ ವಿಚಾರಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಗಾಂಧೀಜಿ ಪ್ರತಿಮೆ ನಿರ್ಮಾಣದ ಕಲ್ಲಿನಲ್ಲೇ ಶೆಟ್ಟರ್ ಅವರ ಹೆಸರಿದೆ. ಅವರಿಗೂ ಆಹ್ವಾನ ಕೊಡುತ್ತೇವೆ. ಆದರೆ, ಸುಮ್ಮನೆ ಮೊಸರಿನಲ್ಲಿ ಕಲ್ಲು ಹುಡುಕುತ್ತಿದ್ದಾರೆ' ಎಂದರು.

'ಸತೀಶ ಆಪ್ತರ ಪ್ರವಾಸಕ್ಕೂ ನನಗೂ ಸಂಬಂಧವಿಲ್ಲ'



'ಸತೀಶ ಜಾರಕಿಹೊಳಿ ಆಪ್ತರಾದ 30ಕ್ಕೂ ಹೆಚ್ಚು ಶಾಸಕರು ದುಬೈ ಪ್ರವಾಸಕ್ಕೆ ಯೋಜಿಸಿದ್ದಾರಾ' ಎಂಬ ಪ್ರಶ್ನೆಗೆ, 'ಅದಕ್ಕೂ ನನಗೂ ಸಂಬಂಧವಿಲ್ಲ. ಈ ಬಗ್ಗೆ ನಾನೇನೂ ಮಾತನಾಡುವುದಿಲ್ಲ. ಸುರ್ಜೇವಾಲಾ ಸಾಹೇಬ್ರು ಇಲ್ಲೇ ಇದ್ದಾರೆ. ಅವರನ್ನೇ ಭೇಟಿಯಾಗಿ ಮಾತನಾಡಿ. ನಾನು ಉಂಟು, ನನ್ನ ಪಕ್ಷ ಸಂಘಟನೆ ಉಂಟು' ಎಂದು ಶಿವಕುಮಾರ್ ಹೇಳಿ ಹೊರಟರು.

ಸಚಿವೆಗೆ ಸಿ.ಟಿ.ರವಿ 'ನಿಂದನೆ' ವಿಡಿಯೊ ಎಫ್‌ಎಸ್‌ಎಲ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ವಿಧಾನ ಮಂಡಲದ ಚಳಿಗಾಲದ ಅಧಿವೇಶನದ ವೇಳೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ.ರವಿ ಅವರು ಅವಾಚ್ಯ ಪದಗಳಿಂದ ನಿಂದಿಸಿರುವುದು ಸದನದೊಳಗೆ ಚಿತ್ರೀಕರಿಸಿದ ವಿಡಿಯೊದಲ್ಲಿ ದಾಖಲಾಗಿದೆ.

'ವಿಡಿಯೊ ಪರಿಶೀಲಿಸಿದಾಗ ಸಿ.ಟಿ. ರವಿ ಏಳು ಬಾರಿ ಲಕ್ಷ್ಮೀ ಹೆಬ್ಬಾಳಕರ ಅವರನ್ನು ನಿಂದಿಸಿರುವುದಕ್ಕೆ ಸಾಕ್ಷ್ಯ ಸಿಕ್ಕಿದೆ' ಸಿಐಡಿ ಮೂಲಗಳು ತಿಳಿಸಿವೆ.

ಸಿ.ಟಿ.ರವಿ ಮತ್ತು ಲಕ್ಷ್ಮಿ ಹೆಬ್ಬಾಳಕರ ಘಟನೆ ಕುರಿತು ವಿಡಿಯೊ, ಆಡಿಯೊ ದಾಖಲೆ ನೀಡುವಂತೆ ರಾಜ್ಯ ಆಡಳಿತ ಮತ್ತು ಸಿಬ್ಬಂದಿ ಸುಧಾರಣೆ ಇಲಾಖೆಗೆ ಸಿಐಡಿ ಮನವಿ ಮಾಡಿತ್ತು. ಸದನದಲ್ಲಿ ನಿಂದನೆ ಕೃತ್ಯ ನಡೆದ ವೇಳೆ ಚಿತ್ರೀಕರಿಸಿದ್ದ ನಾಲ್ಕು ತಾಸು ವಿಡಿಯೊವನ್ನು ಇಲಾಖೆ ನೀಡಿದೆ.

ವಿಡಿಯೊದಲ್ಲಿ ಕೇಳಿ ಬರುವ ದನಿ ರವಿ ಅವರದ್ದೇ, ಅಲ್ಲವೇ ಎಂಬುದು ಖಚಿತ ಪಡಿಸಿಕೊಳ್ಳಲು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ.



ಲಕ್ಷ್ಮೀ ಹೆಬ್ಬಾಳಕರ

ಅಲ್ಲದೇ ರವಿ ಅವರ ಧ್ವನಿ ಪರೀಕ್ಷೆ ನಡೆಸಲು ನಿರ್ಧರಿಸಿದೆ. ಆದರೆ, ಅವರು ಧ್ವನಿ ಪರೀಕ್ಷೆಗೆ ಹಿಂದೇಟು ಹಾಕುತ್ತಿದ್ದಾರೆ ಎಂದು ಸಿಐಡಿ ಮೂಲಗಳು ಹೇಳಿವೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಖಾಸಗಿ ವಾಹಿನಿಗಳಲ್ಲಿ ವಿಡಿಯೊವನ್ನು ಸಾಕ್ಷ್ಯವಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳುತ್ತಿದ್ದರು. ತಾನು ಸಚಿವೆಯನ್ನು ನಿಂದಿಸಿದ್ದಕ್ಕೆ ಅಸಲಿ ವಿಡಿಯೊ ಇಲ್ಲ ಎಂದು ರವಿ ಹೇಳಿದ್ದರು. ಈಗ ಅಸಲಿ ವಿಡಿಯೊ ಲಭ್ಯವಾಗಿರುವುದು ಪ್ರಕರಣಕ್ಕೆ ಪ್ರಮುಖ ತಿರುವು ನೀಡುವ ಸಾಧ್ಯತೆ ಇದೆ. ಸಚಿವೆಗೆ ಅಸಂಸದೀಯ ಪದ ಬಳಸಿ ರವಿ ಅವರು ನಿಂದಿಸಿದ್ದಾರೆ ಎಂಬ ಆರೋಪ ಎದುರಾಗಿತ್ತು. ಈ ಬಗ್ಗೆ ಹಿರೇಬಾಗೇವಾಡಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ವದಂತಿಗಳಿಗೆ ಉತ್ತರ ನೀಡಲ್ಲ: ರವಿ



'ನಾನು ಊಹಾಪೋಹಗಳಿಗೆ ಉತ್ತರ ನೀಡಲ್ಲ. ತನಿಖಾ ಹಂತದಲ್ಲಿರುವಾಗ ಮಾಹಿತಿಗಳು ಹೇಗೆ ಹೊರ ಬಂದವು? ಮಾನ ಉಳಿಸಿಕೊಳ್ಳಲು ಕೆಲವರು ವಾಮಮಾರ್ಗ ಹಿಡಿದಿದ್ದಾರೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಕಿಡಿಕಾರಿದರು.

ಸಿಐಡಿಗೆ ಅಸಲಿ ವಿಡಿಯೊ ಲಭ್ಯವಾಗಿರುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 'ಗಲಾಟೆಗೆ ಸಂಬಂಧಿಸಿದಂತೆ ನೀಡಿದ್ದ ನೋಟಿಸ್‌ಗೆ ವಿಚಾರಣೆಗೆ ಹಾಜರಾಗಿ ಉತ್ತರ ಕೊಟ್ಟಿದ್ದೇನೆ. ನಾನು ಕೊಟ್ಟ ದೂರಿನ ಅನ್ವಯ ಎಫ್‌ಐಆರ್ ಆಗಿಲ್ಲ. ನನ್ನ ಮೇಲೆ ಹಲ್ಲೆ ನಡೆಸಿದವರ ಹೆಸರು ಸಮೇತ ದೂರು ನೀಡಿದ್ದೇನೆ. ಪೊಲೀಸರು ಪಾರದರ್ಶಕವಾಗಿ ನಡೆದುಕೊಳ್ಳುತ್ತಿಲ್ಲ. ಸಿಐಡಿ ತನಿಖೆ ಮೇಲೆ ವಿಶ್ವಾಸ ಇಲ್ಲ' ಎಂದು ಹೇಳಿದರು.

'ಸಭಾಪತಿ, ಡಿಜಿಪಿಗೂ ದೂರು ಸಲ್ಲಿಸಲಾಗಿದೆ. ಸಭಾಪತಿ ಅವರು ಕರೆದು ಹೇಳಿಕೆ ಪಡೆದುಕೊಂಡು ಎಲ್ಲಾ ಪರಿಶೀಲಿಸಿ ರೂಲಿಂಗ್ ನೀಡಿದ್ದಾರೆ. ಕಾನೂನು ಪ್ರಕಾರ ರೂಲಿಂಗ್ ಅಂತಿಮವಾಗಿದ್ದು, ಪ್ರತ್ಯೇಕವಾದ ತನಿಖೆ ಅಗತ್ಯ ಇಲ್ಲ' ಎಂದು ಪ್ರತಿಪಾದಿಸಿದರು.

ಲೋಕಾಯುಕ್ತ, ಇ.ಡಿ ತನಿಖೆಯ ಕುಣಿಕೆ

ಜೂನ್–ಜುಲೈ 2024: ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರಿಗೆ 'ಮುಡಾ'ವು 14 ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದೆ ಎಂದು ಲೋಕಾಯುಕ್ತಕ್ಕೆ ಸ್ನೇಹಮಯಿ ಕೃಷ್ಣ, ಪ್ರದೀಪ್ ಕುಮಾರ್ ಮತ್ತು ಟಿ.ಜೆ. ಅಬ್ರಹಾಂ ಅವರಿಂದ ದೂರು. ದಾಖಲಾಗದ ಪ್ರಕರಣ

ಜುಲೈ 26, 2024: ಸಿದ್ದರಾಮಯ್ಯ ವಿರುದ್ಧ ಅಪರಾಧ ಪ್ರಕರಣ ದಾಖಲಿಸಲು ಅನುಮತಿ ಕೋರಿ ರಾಜ್ಯಪಾಲರಿಗೆ ಟಿ.ಜೆ.ಅಬ್ರಹಾಂ ಮನವಿ

ಆಗಸ್ಟ್ 17: ಸಿದ್ದರಾಮಯ್ಯ ವಿರುದ್ಧ ವಿಚಾರಣೆಗೆ ಅನುಮತಿ ನೀಡಿದ ರಾಜ್ಯಪಾಲ

ಆ.19: ರಾಜ್ಯಪಾಲರ ಕ್ರಮದ ವಿರುದ್ಧ ಹೈಕೋರ್ಟ್ ಮೆಟ್ಟಿಲೇರಿದ ಸಿದ್ದರಾಮಯ್ಯ

ಸೆಪ್ಟೆಂಬರ್ 24: ರಾಜ್ಯಪಾಲರ ಕ್ರಮ ಎತ್ತಿಹಿಡಿದು, ಸಿದ್ದರಾಮಯ್ಯ ಅರ್ಜಿ ವಜಾ ಮಾಡಿದ ಹೈಕೋರ್ಟ್

ಸೆ.25: ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಲೋಕಾಯುಕ್ತ ಪೊಲೀಸರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶ

ಸೆ.27: ಲೋಕಾಯುಕ್ತ ಪೊಲೀಸರಿಂದ ಎಫ್‌ಐಆರ್ ದಾಖಲು

ಸೆ.29–ಅಕ್ಟೋಬರ್ 1: ತನಿಖೆ ನಡೆಸುವಂತೆ ಇ.ಡಿಗೆ ಸ್ನೇಹಮಯಿ ಕೃಷ್ಣ ಅವರಿಂದ ದೂರು. ಲೋಕಾಯುಕ್ತದ ಎಫ್‌ಐಆರ್ ಆಧಾರದಲ್ಲಿ ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ ಇ.ಡಿ

ಅಕ್ಟೋಬರ್ 1–4: 'ಮುಡಾ'ಗೆ ನಿವೇಶನಗಳನ್ನು ವಾಪಸ್ ಮಾಡಿದ ಪಾರ್ವತಿ. ಮುಡಾದಿಂದ ಖಾತೆ ಬದಲಾವಣೆ ಪ್ರಕ್ರಿಯೆ ಪೂರ್ಣ

ಅಕ್ಟೋಬರ್ 18: ಪ್ರಕರಣದ ಸಂಬಂಧ ದಾಳಿ ಮತ್ತು ಶೋಧ ಕಾರ್ಯ ಆರಂಭಿಸಿದ ಇ.ಡಿ. ಸಿದ್ದರಾಮಯ್ಯ ಆಪ್ತ, ಮುಡಾ ಮಾಜಿ ಅಧ್ಯಕ್ಷ, ಮುಡಾ ಮಾಜಿ ಆಯುಕ್ತರು, ರಿಯಲ್ ಎಸ್ಟೇಟ್ ಉದ್ಯಮಿಗಳ ವಿಚಾರಣೆ

ಯಡಿಯೂರಪ್ಪ ವಿರುದ್ಧದ ಪ್ರಕರಣ ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ


ಬೆಂಗಳೂರು: ತಮ್ಮ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣ ರದ್ದುಪಡಿಸುವಂತೆ ಕೋರಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಲ್ಲಿಸಿರುವ ಅರ್ಜಿ ವಿಚಾರಣೆ ಪೂರೈಸಿದ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.



ಈ ಸಂಬಂಧ ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿ ಆಲಿಕೆಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಶುಕ್ರವಾರ ಪೂರೈಸಿದರು.

ಪ್ರಕರಣವೇನು?: ತಮ್ಮ ಮಗಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸಹಾಯ ಮಾಡಬೇಕು ಎಂದು ಬೇಡಿ ಬಂದಿದ್ದ ಸಂತ್ರಸ್ತ ಬಾಲಕಿಯ ತಾಯಿ ನೀಡಿರುವ ದೂರಿನ ಅನುಸಾರ ಸದಾಶಿವನಗರದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ರಾಹುಲ್ ಗಾಂಧಿ ವಿರುದ್ಧದ ಪ್ರಕರಣಕ್ಕೆ ತಡೆ



ಬೆಂಗಳೂರು: ವಿಧಾನಸಭೆ ಚುನಾವಣೆಗೂ ಮುನ್ನ ಅಂದಿನ ಬಿಜೆಪಿ ಸರ್ಕಾರದ ವಿರುದ್ಧ ಸರಣಿ ಆರೋಪ ಮಾಡಿ ಕಾಂಗ್ರೆಸ್ ಪಕ್ಷ ನೀಡಿದ್ದ ಜಾಹೀರಾತುಗಳಿಗೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ವಿರುದ್ಧ ದಾಖಲಿಸಿರುವ ಮಾನಹಾನಿ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಪ್ರಕರಣದ ರದ್ದತಿ ಕೋರಿ ರಾಹುಲ್ ಗಾಂಧಿ ಸಲ್ಲಿಸಿರುವ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠ'ದ (ಧಾರವಾಡ) ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಶುಕ್ರವಾರ ವಿಚಾರಣೆ ನಡೆಸಿದರು. ರಾಹುಲ್ ಗಾಂಧಿ ಪರ ವಕೀಲ ಕೆ. ಶಶಿಕಿರಣ್ ಶೆಟ್ಟಿ ಅವರು, 'ಬಿಜೆಪಿ ತಪ್ಪಾಗಿ ಜಾಹೀರಾತನ್ನು ಅರ್ಥೈಸಿದೆ' ಎಂದು ಪ್ರತಿಪಾದಿಸಿದರು. ಫೆ.20ಕ್ಕೆ ವಿಚಾರಣೆ ಮುಂದೂಡಲಾಗಿದೆ.

ರೇವಣ್ಣ ವಿರುದ್ಧದ ಪ್ರಕರಣ ದೋಷಾರೋಪ ನಿಗದಿಗೆ ತಡೆ

ಬೆಂಗಳೂರು: 'ಅತ್ಯಾಚಾರ ಸಂತ್ರಸ್ತೆಯ ಅಪಹರಣ ಆರೋಪ ಪ್ರಕರಣದಲ್ಲಿ ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ವಿರುದ್ಧದ ಕ್ರಿಮಿನಲ್ ಪ್ರಕರಣದಲ್ಲಿ ದೋಷಾರೋಪ ನಿಗದಿ ಮಾಡಬಾರದು' ಎಂದು ವಿಚಾರಣಾ ನ್ಯಾಯಾಲಯಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ಶುಕ್ರವಾರ ವಿಚಾರಣೆ ನಡೆಸಿದರು.

ಮುಂದಿನ ವಿಚಾರಣೆಯನ್ನು ಜ. 30ಕ್ಕೆ ಮುಂದೂಡಲಾಗಿದೆ.



❦ ಸುಭಾಷಿತ ❦

ಪ್ರೇಮ ಎಂದರೆ ತನ್ನಲ್ಲಿ ಇನ್ನೊಬ್ಬರನ್ನು, ಇನ್ನೊಬ್ಬರಲ್ಲಿ ತನ್ನನ್ನು ಕಾಣುವ ಪ್ರಯತ್ನ.

–ಗೋಪಾಲಕೃಷ್ಣ ಅಡಿಗ

ಕೆಪಿಎಸ್‌ಸಿ ಕಾರ್ಯವೈಖರಿ ಸುಧಾರಣೆಗೆ ಬೇಕು ಕಠಿಣ ಕ್ರಮ

ಕರ್ನಾಟಕ ಲೋಕಸೇವಾ ಆಯೋಗವು ಬೇಡದ ಕಾರಣಗಳಿಗೆ ಸುದ್ದಿಯಾಗಿರುವುದೇ ಹೆಚ್ಚು. ಈಗಲೂ ಅಂತಹದೇ ಕಾರಣಕ್ಕೆ ಸುದ್ದಿಯಲ್ಲಿದೆ. ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ಕಳೆದ ವರ್ಷ ಆಗಸ್ಟ್ 27ರಂದು ಪೂರ್ವಭಾವಿ ಪರೀಕ್ಷೆ ನಡೆಸಲಾಗಿತ್ತು. ಈ ಪರೀಕ್ಷೆಯ ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಭಾರಿ ಲೋಪದೋಷಗಳು ಪತ್ತೆಯಾಗಿದ್ದರಿಂದ ಡಿ. 29ರಂದು ಮರುಪರೀಕ್ಷೆ ನಡೆಸಲಾಯಿತು. ಪ್ರಶ್ನೆಪತ್ರಿಕೆಗಳ ಕನ್ನಡ ಭಾಷಾಂತರದಲ್ಲಿ ಈ ಬಾರಿಯೂ ಬಹಳಷ್ಟು ಲೋಪಗಳಾಗಿವೆ. ಕನ್ನಡದಲ್ಲಿನ ಪ್ರಶ್ನೆಗಳನ್ನು ಓದಿದರೆ ಅರ್ಥವೇ ಆಗದಂತಹ ಪ್ರಶ್ನೆಗಳೂ ಇವೆ. ಅಪಾರ್ಥಕ್ಕೆ ಎಡೆಮಾಡುವ ಪ್ರಶ್ನೆಗಳೂ ಇವೆ. ಕನ್ನಡದಲ್ಲಿ ಪ್ರಶ್ನೆ ಅರ್ಥವಾಗದಿದ್ದರೆ ಇಂಗ್ಲಿಷ್‌ನಲ್ಲಿರುವ ಪ್ರಶ್ನೆಯನ್ನು ಓದಿ ಅರ್ಥ ಮಾಡಿಕೊಂಡು ಉತ್ತರ ಬರೆಯಿರಿ ಎಂದು ಆಯೋಗ ಸೂಚಿಸಿರುವುದು ಅದರ ಉದ್ಧಟತನಕ್ಕೆ ದ್ಯೋತಕ. ಕನ್ನಡ ನಾಡಿನಲ್ಲಿ ಕನ್ನಡದಲ್ಲಿಯೇ ಪ್ರಶ್ನೆಪತ್ರಿಕೆ ಸಿದ್ಧ ಮಾಡುವ ಯೋಗ್ಯತೆ ಆಯೋಗಕ್ಕೆ ಇಲ್ಲ ಎಂದರೆ ಅದನ್ನು ಕನ್ನಡ ನಾಡಿಗೆ ಬಗೆದ ದ್ರೋಹ ಎಂದೇ ಪರಿಗಣಿಸಬೇಕಾಗುತ್ತದೆ. ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಎಲ್ಲ ಪರೀಕ್ಷೆಗಳಲ್ಲಿಯೂ ಪ್ರಶ್ನೆಪತ್ರಿಕೆಗಳನ್ನು ಮೊದಲು ಕನ್ನಡದಲ್ಲಿಯೇ ಸಿದ್ಧಪಡಿಸಿ ನಂತರ ಅವುಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಬೇಕು. ಅದು ಸರಿಯಾದ ಕ್ರಮ. ಒಮ್ಮೆ ತಪ್ಪಾಗಿದೆ ಎಂದು ಮರುಪರೀಕ್ಷೆ ಮಾಡುವಾಗಲೂ ಆಯೋಗ ಯಾವುದೇ ಮುನ್ನೆಚ್ಚರಿಕೆ ತೆಗೆದುಕೊಳ್ಳುವುದಿಲ್ಲ ಎಂದರೆ ಅದನ್ನು ಉಡಾಫೆ ಧೋರಣೆ ಎಂದೇ ಭಾವಿಸಬೇಕಾಗುತ್ತದೆ. ಆ. 27ರಂದು ನಡೆದ ಪರೀಕ್ಷೆಯಲ್ಲಿ ಕನ್ನಡ ಭಾಷಾಂತರದ ಆಭಾಸ ವಿಪರೀತ ಆಗಿದೆ ಎನ್ನುವುದು ಗೊತ್ತಾದ ಮೇಲೆ ಮರುಪರೀಕ್ಷೆ ಮಾಡುವಾಗ ಗರಿಷ್ಠ ಎಚ್ಚರಿಕೆ ವಹಿಸಬೇಕಿತ್ತು. ಕನ್ನಡ ನಾಡಿನಲ್ಲಿ ವಿಷಯ ಪರಿಣತಿ ಹೊಂದಿರುವ ಭಾಷಾಂತರಕಾರರಿಗೆ ಕೊರತೆ ಏನೂ ಇಲ್ಲ. ಅಂತಹವರನ್ನು ಸಂಪರ್ಕಿಸಿ ಅಭ್ಯರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಬೇಕಾದುದು ಆಯೋಗದ ಹೊಣೆ. ಈ ಹೊಣೆಯನ್ನು ಸರಿಯಾಗಿ ನಿರ್ವಹಿಸದ ಆಯೋಗವು ಉದ್ಯೋಗಾಕಾಂಕ್ಷಿ ಅಭ್ಯರ್ಥಿಗಳ ಭವಿಷ್ಯದ ಜತೆ ಚೆಲ್ಲಾಟವಾಡಿದೆ. ಆಯೋಗದ ಕಿವಿ ಹಿಂಡಿ ಸರಿದಾರಿಗೆ ತರಬೇಕಾದ ಜವಾಬ್ದಾರಿ ರಾಜ್ಯ ಸರ್ಕಾರದ ಮೇಲೆ ಇದೆ.



ಒಂದು ಪ್ರಶ್ನೆಪತ್ರಿಕೆಯನ್ನು ದೋಷರಹಿತವಾಗಿ ಸಿದ್ಧಪಡಿಸಲೂ ಸಾಧ್ಯವಾಗದ ಸ್ಥಿತಿಗೆ ಲೋಕಸೇವಾ ಆಯೋಗ ತಲುಪಿರುವುದು ನಾಚಿಕೆಗೇಡು

ಡಿ. 29ರಂದು ನಡೆದ ಮರುಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿಯೂ ಲೋಪದೋಷಗಳು ಕಂಡುಬಂದಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ. ಕನ್ನಡದ ಪ್ರಶ್ನೆಪತ್ರಿಕೆಯಲ್ಲಿ ಲೋಪದೋಷ ಹೆಚ್ಚಾಗಿರುವುದರಿಂದ ಕನ್ನಡದಲ್ಲಿ ಉತ್ತರ ಬರೆದ ಅಭ್ಯರ್ಥಿಗಳಿಗೆ ತೊಂದರೆಯಾಗಿದೆ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಾಹಿತಿ ಗೊ.ರು. ಚನ್ನಬಸಪ್ಪ ಅವರೂ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಕರ್ನಾಟಕ ಆಡಳಿತ ಸೇವೆಗೆ ಸೇರಬೇಕು ಎಂಬ ಕನಸು ಹೊತ್ತ ಹಲವಾರು ಅಭ್ಯರ್ಥಿಗಳಿಗೆ ತೊಂದರೆಯಾಗಿದ್ದು ಮತ್ತೊಮ್ಮೆ ಮರುಪರೀಕ್ಷೆ ನಡೆಸಬೇಕು ಅಥವಾ ಪೂರ್ವಭಾವಿ ಪರೀಕ್ಷೆಯಲ್ಲಿ ಭಾಗಿಯಾದ ಎಲ್ಲರಿಗೂ ಮುಖ್ಯ ಪರೀಕ್ಷೆ ಬರೆಯಲು ಅವಕಾಶ ನೀಡಬೇಕು ಎಂಬ ಬೇಡಿಕೆಯನ್ನು ಕೆಲವು ಅಭ್ಯರ್ಥಿಗಳು ಇಟ್ಟಿದ್ದಾರೆ. ಅಭ್ಯರ್ಥಿಗಳ ಹೋರಾಟಕ್ಕೆ ವಿರೋಧ ಪಕ್ಷವಾದ ಬಿಜೆಪಿ ಕೂಡ ಬೆಂಬಲ ವ್ಯಕ್ತಪಡಿಸಿದೆ. ಆ ಪಕ್ಷ ಅಧಿಕಾರದಲ್ಲಿ ಇದ್ದಾಗಲೂ ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯವೈಖರಿಯು ಈಗಿರುವುದಕ್ಕಿಂತ ಭಿನ್ನವೇನೂ ಆಗಿರಲಿಲ್ಲ. ಆಯೋಗದ ಕಾರ್ಯಕ್ಷಮತೆ ಹದಗೆಡುವಲ್ಲಿ ಎಲ್ಲ ರಾಜಕೀಯ ಪಕ್ಷಗಳ ಕೊಡುಗೆಯೂ ಇದೆ. ಭ್ರಷ್ಟಾಚಾರ, ಸ್ವಜನಪಕ್ಷಪಾತದಂತಹ ಕಾರಣಗಳಿಗಾಗಿ ಕುಲಗೆಟ್ಟು ಹೋಗಿರುವ ಆಯೋಗಕ್ಕೆ ಕಾಯಕಲ್ಪ ನೀಡಲು ಈ ಹಿಂದೆ ಸಿದ್ದರಾಮಯ್ಯ ಪ್ರಯತ್ನ ನಡೆಸಿದ್ದರು. ಆ ಪ್ರಯತ್ನವೂ ನಿರೀಕ್ಷಿತ ಫಲಿತಾಂಶ ನೀಡಲಿಲ್ಲ. ಒಂದು ಪ್ರಶ್ನೆಪತ್ರಿಕೆಯನ್ನು ಸಮರ್ಪಕವಾಗಿ ಸಿದ್ಧಪಡಿಸಲೂ ಸಾಧ್ಯವಾಗದ ಸ್ಥಿತಿಗೆ ಆಯೋಗ ತಲುಪಿರುವುದು ನಾಚಿಕೆಗೇಡು. ಪ್ರಶ್ನೆಪತ್ರಿಕೆಗಳು ದೋಷಮುಕ್ತವಾಗಿರಬೇಕು. ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಬೇಕು. ಕಾಲಮಿತಿಯಲ್ಲಿ ಪರೀಕ್ಷಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕು. ಈ ಎಲ್ಲ ಕಾರಣಗಳಿಗಾಗಿ ಆಯೋಗದ ಕಾರ್ಯವೈಖರಿ ಸುಧಾರಿಸಲು ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಅಭ್ಯರ್ಥಿಗಳಲ್ಲಿ ವಿಶ್ವಾಸ ಮೂಡಿಸುವ ಜವಾಬ್ದಾರಿ ಈಗ ರಾಜ್ಯ ಸರ್ಕಾರದ ಮೇಲೆ ಇದೆ.

ದಿನದ ಟ್ವೀಟ್

ಯಾವುದು ಮುಖ್ಯ?



ಸುದೀರ್ಘ ಅವಧಿ ಕೆಲಸ ಮಾಡಿ ನಿಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿಕೊಳ್ಳುವುದು ಹಳೆಯ ಪದ್ಧತಿ. ನಿಜವಾಗಲೂ ಲೆಕ್ಕಕ್ಕೆ ಬರುವುದು ನಿಮ್ಮ ಗುಣಾತ್ಮಕ ಕೆಲಸವೇ ವಿನಾ ಎಷ್ಟು ಅವಧಿಯಲ್ಲಿ ಕೆಲಸ ಮಾಡಿದ್ದೀರಿ ಎಂಬುದಲ್ಲ. ನಿರ್ದಿಷ್ಟ ಸಮಯದಲ್ಲಿ ನೀವು ಎಷ್ಟು ಸಾಧಿಸುತ್ತೀರಿ ಎಂಬುದು ಮುಖ್ಯ. ಆಗಾಗ್ಗೆ ಕಾಫಿ ಮತ್ತು ಸಿಗರೇಟ್ ವಿರಾಮ ತೆಗೆದುಕೊಳ್ಳುತ್ತಾ ಸುದೀರ್ಘ ಕಾಲ ಕೆಲಸ ಮಾಡುವುದು ಕಠಿಣ ಪರಿಶ್ರಮ ಅಲ್ಲ– ಅದು ಅದಕ್ಷತೆ ಅಷ್ಟೆ.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ

ರಾಜಕಾರಣಿಗಳು, ಅಧಿಕಾರಿಗಳು ಈ ದೇಶದ ನಿರ್ಮಾತೃಗಳಲ್ಲ. ಉದ್ಯಮಿಗಳು ನಿಜವಾದ ನಿರ್ಮಾತೃಗಳು. ಬಡ ರೈತ, ಕಾರ್ಮಿಕರಿಗೆ ಶಕ್ತಿ ತುಂಬುವ ಸಾಮರ್ಥ್ಯ ಇರುವುದು ಅವರಿಗೆ ಮಾತ್ರ.



ಎನ್.ಆರ್.ನಾರಾಯಣಮೂರ್ತಿ, ಇನ್ಫೊಸಿಸ್ ಸಹ ಸಂಸ್ಥಾಪಕ

25 ವರ್ಷಗಳ ಹಿಂದೆ

ಮಂಗಳವಾರ, 18-1-2000

● ಕಾಶ್ಮೀರ ಉಗ್ರರಿಗೆ ಪಾಕ್ ಬೆಂಬಲ ಚೀನಾದಲ್ಲಿ ಮುಷರಫ್ ಘೋಷಣೆ

ಬೀಜಿಂಗ್, ಜ. 17 (ಪಿಟಿಐ)– ಸ್ವಯಂ ನಿರ್ಧಾರ ಕೈಗೊಳ್ಳಲು ಕಾಶ್ಮೀರದ ಸಹೋದರರು ನಡೆಸುತ್ತಿರುವ ಹೋರಾಟಕ್ಕೆ ನೈತಿಕ, ರಾಜಕೀಯ ಮತ್ತು ರಾಜತಾಂತ್ರಿಕ ಬೆಂಬಲ ಮುಂದುವರಿಸುವುದಾಗಿ ಪಾಕಿಸ್ತಾನದ ಸೇನಾಡಳಿತಗಾರ ಜನರಲ್ ಪರ್ವೇಜ್ ಮುಷರಫ್ ಅವರು ಘೋಷಿಸಿದ್ದಾರೆ.

‘ಉಭಯ ದೇಶಗಳ ನಡುವಿನ ಉದ್ವಿಗ್ನತೆ ಶಮನಗೊಳಿಸುವ ಪಾಕ್ ಯತ್ನಗಳಿಗೆ ಭಾರತವು ಸೂಕ್ತವಾಗಿ ಸ್ಪಂದಿಸುತ್ತಿಲ್ಲ’ ಎಂದೂ ಅವರು ಟೀಕಿಸಿದ್ದಾರೆ.

ಕಾಶ್ಮೀರ ವಿವಾದ ಇತ್ಯರ್ಥಪಡಿಸುವಲ್ಲಿ ಅಮೆರಿಕವು ಗಂಭೀರ ಪಾತ್ರ ನಿರ್ವಹಿಸಬಹುದಾಗಿದೆ ಎಂದು ಮುಷರಫ್ ತಿಳಿಸಿದ್ದಾರೆ ಎಂದು ಚೀನಾದ ಅಧಿಕೃತ ಪತ್ರಿಕೆ ‘ಚೀನಾ ಡೇಲಿ’ ವರದಿ ಮಾಡಿದೆ.

● ಕಾಶ್ಮೀರ: ಉಗ್ರರ ದಾಳಿ ಹತ್ತಿಕ್ಕಲು ವಿಶೇಷ ಪಡೆ

ನವದೆಹಲಿ, ಜ. 17 (ಯುಎನ್‌ಐ, ಪಿಟಿಐ)– ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರಗಾಮಿಗಳ ದಾಳಿಯನ್ನು ಹತ್ತಿಕ್ಕಲು ವಿಶೇಷ ಪರಿಣತಿ ಪಡೆದ ಕೇಂದ್ರ ಅರೆಸೇನಾ ಪಡೆಯ ಬೆಟಾಲಿಯನ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸಲು ಮತ್ತು ಉಗ್ರಗಾಮಿ ವಿರೋಧಿ ಘಟಕವನ್ನು ಪುನರ್‌ರಚಿಸಲು ಕೇಂದ್ರ ಸರ್ಕಾರ ಇಂದು ತೀರ್ಮಾನಿಸಿತು.

ಭಯೋತ್ಪಾದನೆಯನ್ನು ಪರಿಣಾಮಕಾರಿಯಾಗಿ ತಡೆಯಲು ಉಗ್ರಗಾಮಿಗಳಿಗೆ ಪ್ರತ್ಯುತ್ತರ ನೀಡುವ ತಂತ್ರವನ್ನು ಬಳಸಲು ನಿರ್ಧರಿಸಲಾಯಿತು. ವಾಸ್ತವ ನಿಯಂತ್ರಣ ರೇಖೆ, ಅಂತರರಾಷ್ಟ್ರೀಯ ಗಡಿ ಮತ್ತು ಇತರೆ ಸೂಕ್ಷ್ಮ ಪ್ರದೇಶಗಳಲ್ಲಿ ಕಾವಲು ಪಡೆಯನ್ನು ಹೆಚ್ಚಿಸಲು ಪ್ರಧಾನಿ ವಾಜಪೇಯಿ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಉನ್ನತ ಮಟ್ಟದ ಸಭೆಯಲ್ಲಿ ತೀರ್ಮಾನಿಸಲಾಯಿತು.

50 ವರ್ಷಗಳ ಹಿಂದೆ

ಶನಿವಾರ, 18-1-1975

● ನಗರದಲ್ಲಿ ಬುದ್ಧಿಜೀವಿಗಳಿಗಾಗಿ ಕಾಂಗ್ರೆಸ್ ಬಲೆ: ಯಶಪಾಲ ಕಪೂರ್ ಕಾರ್ಯಭಾರ

ಬೆಂಗಳೂರು, ಜ. 17– ಕಳೆದ ವಾರ ಬೆಂಗಳೂರಿಗೆ ಯಶಪಾಲ ಕಪೂರ್ ಬಂದು ಹೋದರು. ನಾಲ್ಕು ದಿನ ಬಿಡುವಿಲ್ಲದೆ ಕಾರ್ಯಮಗ್ನರಾಗಿದ್ದರು. ಮಧ್ಯರಾತ್ರಿ ಮೀರಿ ವ್ಯಕ್ತಿಗಳೊಂದಿಗೆ, ಗುಂಪುಗಳೊಂದಿಗೆ ಅವರ ಸಮಾಲೋಚನೆ, ಚರ್ಚೆ ನಡೆದಿತ್ತು.

ಎಲ್ಲರನ್ನೂ ಭೇಟಿ ಮಾಡಲು ಸಿದ್ಧರಿದ್ದರು, ಹಾತೊರೆದರು. ಅವರು ಸ್ವಾಗತಿಸಿದ, ಸಂದರ್ಶಿಸಿದ ಜನವರ್ಗ ವೈವಿಧ್ಯಮಯವಾಗಿತ್ತು. ಒಂದೇ ಒಂದು ವರ್ಗದ ಜನರನ್ನು ಮಾತ್ರ ಅವರು ದೂರವಿಟ್ಟರು. ಆಕಸ್ಮಿಕವಾಗಿಯೋ ಉದ್ದೇಶಪೂರ್ವಕವಾಗಿಯೋ ಅವರು ತಪ್ಪಿಸಿಕೊಂಡ ವರ್ಗ: ಪತ್ರಿಕೋದ್ಯಮಿಗಳು.

ಯಶಪಾಲ ಅವರು ಪತ್ರಿಕೋದ್ಯಮಿಗಳನ್ನು ಈ ಸಂದರ್ಭದಲ್ಲಿ ಭೇಟಿ ಮಾಡದಿರುವುದಕ್ಕೆ ಕಾರಣವಿಲ್ಲದಿಲ್ಲ. ಅವರು ಕೈಗೊಂಡಿದ್ದ ಕಾರ್ಯಭಾರ ಅಷ್ಟು ಸೂಕ್ಷ್ಮವಾದದ್ದು. ಕಪೂರ್ ಅವರು ಅಖಿಲ ಭಾರತ ಕಾಂಗ್ರೆಸ್ ನೇಮಿಸಿರುವ ‘ಚಳವಳಿ ಸಮಿತಿ’ಯ ಸಂಚಾಲಕರು; ಜಗಜೀವನ್‌ರಾಂ ಅಧ್ಯಕ್ಷರು.

● ಹಡಗುಗಳಿಂದ ಸರಕು ಇಳಿಸಲು ಸೈನ್ಯ?

ನವದೆಹಲಿ, ಜ. 17– ನೌಕರರು ಮುಷ್ಕರ ಹೂಡಿರುವ ದೊಡ್ಡ ಬಂದರುಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳನ್ನು ನೌಕಾ ಪಡೆಯವರೂ ಆಹಾರ ಧಾನ್ಯಗಳನ್ನು ಭೂ ಪಡೆಯವರೂ ಇಳಿಸುವಂತೆ ಕೋರಲು ಸರ್ಕಾರ ಈಗ ಪರಿಶೀಲಿಸುತ್ತಿದೆ.

ಅತಿಯಾದ ಶಬ್ದ ಹೇಗೆ ನಮಗೆ ಮಾರಕವೋ ಹಾಗೆಯೇ ಅತಿಯಾದ ಬೆಳಕು ಕೂಡ

ಇರುಳನು ನುಂಗುವ ಬೆಳಕು



ವಿಶ್ಲೇಷಣೆ

ಟಿ.ಆರ್.ಅನಂತರಾಮು

ಪ್ರಕೃತಿಯ ಸಹಜ ವಿದ್ಯಮಾನಗಳಲ್ಲಿ ಮೂಗು ತೂರಿಸುವುದು, ಅದಕ್ಕೆ ಬೆಲೆ ತೆತ್ತು ಮತ್ತೆ ಪರಿತಪಿಸುವುದು ನಾಗರಿಕ ಮನುಷ್ಯನ ಇತಿಹಾಸದುದ್ದಕ್ಕೂ ನಡೆದೇ ಇದೆ. ಕಾಡಾಯಿತು, ನಾಡಾಯಿತು, ನೆಲ, ಜಲ, ಬಾನಾಯಿತು... ಈಗ ಮಾಲಿನ್ಯದ ಸರದಿ ಬೆಳಕಿನದು.

ಬೆಳಕನ್ನು ಬರಮಾಡಿಕೊಳ್ಳುವುದೆಂದರೆ ಅದು ಜ್ಞಾನದ ಆವಾಹನೆ, ಬೌದ್ಧಿಕ ಪ್ರಗತಿ ಎನ್ನುವುದು ತಲೆತಲಾಂತರದಿಂದ ಬಂದ ಅರ್ಥ. ‘ಬೆಳಕು ಬಂದಿದೆ ಮನೆಯ ಹೊಸ್ತಿಲವರೆಗೆ, ಕಿಟಕಿ ಬಾಗಿಲು ತೆರೆದು ಬರಮಾಡಿಕೋ ಒಳಗೆ’ ಎನ್ನುವ ರಾಘವೇಂದ್ರ ಇಟಗಿ ಅವರ ಕವನದ ಸಾಲು ಇದನ್ನೇ ಧ್ವನಿಸುತ್ತದೆ. ಆದರೆ ಈಗಿನ ಪರಿಸ್ಥಿತಿ ಉಲ್ಟಾ ಆಗಿದೆ. ರಾತ್ರಿಯ ಕೃತಕ ಬೆಳಕು ಅಂದರೆ ನಮ್ಮ ವಿದ್ಯುದ್ದೀಪ ಅಗತ್ಯಕ್ಕಿಂತ ಹೆಚ್ಚಾಗಿ ಕೋರೈಸಿ ಇಡೀ ಜೀವಿಸಂಕುಲದ ದೈನಿಕ ಲಯವನ್ನೇ ತಪ್ಪಿಸುತ್ತಿದೆ ಎಂಬ ಅಳುಕು ಪರಿಸರ ಪ್ರಿಯರಿಗಷ್ಟೇ ಅಲ್ಲ, ವೈದ್ಯಕೀಯ ಕ್ಷೇತ್ರದಲ್ಲೂ ತಳಮಳ ತಂದಿದೆ.

ಬೆಳಕೆಂದರೆ ರಾತ್ರಿಯನ್ನು ಕದಿಯುವ ಕಳ್ಳ, ಒಂದರ್ಥದಲ್ಲಿ ಹಗಲು ದರೋಡೆ ಕೂಡ. ಇದು ಆಧುನಿಕ ಬದುಕಿನ ಪ್ರಸಾದ. ಬೆಳಕಿನ ಮಾಲಿನ್ಯವೆಂದರೆ ಅದರ ಅರ್ಥ ಅಗತ್ಯಕ್ಕಿಂತ ಹೆಚ್ಚು ಬೆಳಕಿನ ಬಳಕೆ. ಅತಿ ಶಬ್ದ ಹೇಗೆ ನಮಗೆ ಮಾರಕವೋ ಹಾಗೆಯೇ ಅತಿ ಬೆಳಕು ಕೂಡ.

ಇಂದಿನ ದಿನಗಳಲ್ಲಿ ಜಗತ್ತಿನಲ್ಲಿ ಅತಿ ಮಾಲಿನ್ಯಕಾರಕ ದೇಶಗಳು ಯಾವುವು, ಅತಿಯಾಗಿ ಭೂಮಿಯಿಂದ ನೀರನ್ನೆತ್ತಿ ಬರಡು ಮಾಡುತ್ತಿರುವ ದೇಶಗಳು ಯಾವುವು, ಅತಿ ತೈಲದ ಬಳಕೆಯ ದೇಶಗಳು ಯಾವುವು ಎಂಬುದನ್ನು ಬೊಟ್ಟು ಮಾಡುವುದು ಕಷ್ಟವಲ್ಲ. ಈ ಪಟ್ಟಿಯನ್ನೇ ಮುಂದುವರಿಸಿ, ಅತಿ ಬೆಳಕನ್ನು ಬಳಸಿದ ಆರೋಪಕ್ಕೆ ಗುರಿಯಾಗಿರುವ ದೇಶಗಳು ಯಾವುವು ಎಂಬುದನ್ನು ಗುರುತಿಸುವುದೂ ಕಷ್ಟವಲ್ಲ. ಸಿಂಗಪುರ, ಕುವೈತ್, ಕತಾರ್, ಯುಎಇ, ದಕ್ಷಿಣ ಕೊರಿಯಾ ಇವು ಬೆಳಕಿನ ಮಾಲಿನ್ಯಕ್ಕೆ ಹೆಸರಾದ ದೇಶಗಳು. ಈ ದೇಶಗಳ ನಗರವಾಸಿಗಳು ರಾತ್ರಿಯಾಕಾಶದಲ್ಲಿ ನಕ್ಷತ್ರ, ಗ್ರಹಗಳನ್ನು ಗುರುತಿಸುವ ಹವ್ಯಾಸ ಕೈಬಿಟ್ಟು ಹಲವು ದಶಕಗಳೇ ಆಗಿವೆ. ಜಗತ್ತಿನಾದ್ಯಂತ ಐವತ್ತು ಸಾವಿರಕ್ಕೂ ಮಿಕ್ಕು ಆಕಾಶ ವೀಕ್ಷಕರದು ಅದೇ ಅಳಲು. ಅಂದರೆ ವರ್ಷದಿಂದ ವರ್ಷಕ್ಕೆ ನಕ್ಷತ್ರ ವೀಕ್ಷಣೆಯಲ್ಲಿ ಶೇ 10ರಷ್ಟು ಭಾಗ ಕುಸಿಯುತ್ತಿದೆ. ಅಷ್ಟರಮಟ್ಟಿಗೆ ಬೆಳಕು ರಾತ್ರಿಯಾಗಸವನ್ನು ಆಕ್ರಮಿಸಿದೆ. ಅದರಲ್ಲೂ ನಗರವಾಸಿಗಳು ನಮ್ಮ ಕ್ಷೀರಪಥವನ್ನು ಕಾಣುವುದಂತೂ ತೀರಾ ಅಸಂಭವ.

ಸಮೀಕ್ಷೆಯೊಂದರ ಪ್ರಕಾರ, ಜಗತ್ತಿನ ಜನಸಂಖ್ಯೆಯ ಮೂರನೇ ಒಂದು ಭಾಗ ಕ್ಷೀರಪಥದ ವೀಕ್ಷಣೆಯಿಂದ ವಂಚಿತವಾಗಿದೆ. ‘ಡಾರ್ಕ್ ಸ್ಕೈ ಇಂಟರ್‌ನ್ಯಾಷನಲ್’ ಎಂಬ ಸಂಸ್ಥೆ ಬೆಚ್ಚಿಬೀಳಿಸುವ ಇನ್ನೊಂದು ಅಂಶವನ್ನೂ ವರದಿ ಮಾಡಿದೆ. ಜಗತ್ತಿನ ಬಹಳಷ್ಟು ನಗರಗಳ ಜನ ಬೆಳಕು ಮಾಲಿನ್ಯದ ಪ್ರದೇಶಗಳಲ್ಲೇ ಬದುಕುತ್ತಿದ್ದಾರೆ. ಇದೀಗ ಅತಿ ಬೆಳಕು ಬೀರುತ್ತಿರುವ ದೇಶಗಳ ನಕ್ಷೆಯೂ ತಯಾರಾಗಿದೆ.

ಇನ್ನೊಂದು ವೈರುಧ್ಯ ನೋಡಿ. ಜಾಗತಿಕ ಮಟ್ಟದಲ್ಲಿ ತಯಾರಿಸಿದ ‘ಸುಸ್ಥಿರ ಅಭಿವೃದ್ಧಿ ಗುರಿ– 2023’ ವರದಿಯ ಪ್ರಕಾರ, ಈಗಲೂ ಜಗತ್ತಿನಲ್ಲಿ ವಿದ್ಯುದ್ದೀಪವಿಲ್ಲದೆ ಬಾಳ್ವೆ ಮಾಡುತ್ತಿರುವವರ ಸಂಖ್ಯೆ ಸುಮಾರು 75 ಕೋಟಿ. ಇವರೆಲ್ಲ ಅಭಿವೃದ್ಧಿ ಕಾಣದ ದೇಶಗಳಲ್ಲಿ ಇರುವುದೇ ಹೆಚ್ಚು. ಝುಗಮಗಿಸುವ ಬೆಳಕು ಹೆಚ್ಚು ಕಂಡುಬರುವುದು ಚರ್ಚು, ರೈಲು ನಿಲ್ದಾಣ, ವಿಮಾನ ನಿಲ್ದಾಣ, ಸ್ಮಾರಕಗಳ ಸುತ್ತಮುತ್ತ. ಇದು ಬಹುತೇಕ ಎಲ್ಲ ರಾಷ್ಟ್ರಗಳಲ್ಲೂ ಕಂಡುಬರುವ ಸರ್ವಸಾಮಾನ್ಯ ನೋಟ.

ಭಾರತದಲ್ಲಿ ಅತಿ ಬೆಳಕನ್ನು ಮಾಲಿನ್ಯವೆಂದು ಪರಿಗಣಿಸದೆ, ಕೋರೈಸುವ ಬೆಳಕೇ ಸಾರ್ವಜನಿಕರ ಆಕರ್ಷಣೆಯ ಮೂಲ ಎಂದು ಭಾವಿಸಿದಂತಿದೆ. ಹೋದ ವರ್ಷ ಮುಂಬೈ ಹೈಕೋರ್ಟ್‌ನಲ್ಲಿ ಒಂದು ವಿಶಿಷ್ಟ ಸಾರ್ವಜನಿಕ ಹಿತಾಸಕ್ತಿ ದಾವೆ ಹೂಡಲಾಗಿತ್ತು. ಮುಂಬೈನ ಮಲಬಾರ್ ಹಿಲ್ಸ್, ಬ್ರೀಚ್ ಕ್ಯಾಂಡಿ, ವಾಲ್ಕೇಶ್ವರ, ಅಂಧೇರಿ ಪ್ರದೇಶಗಳಲ್ಲಿ ಮರಗಿಡಗಳು ಎಲ್ಲಿ ನೋಡಿದರೂ ಸೀರಿಯಲ್ ಲೈಟ್‌ನಿಂದ ಝುಗಮಗಿಸುತ್ತಿದ್ದವು. ಠಾಣೆಯಲ್ಲೂ ಇದೇ ಪರಿಸ್ಥಿತಿ. ಕೊನೆಗೆ ಕಾರ್ಪೊರೇಷನ್‌ಗೆ ಹೈಕೋರ್ಟ್ ನೋಟಿಸ್ ನೀಡಿ, ಈ ಸೀರಿಯಲ್ ಲೈಟ್‌ಗಳ ಪ್ರಖರತೆಯನ್ನು ತಗ್ಗಿಸಲು ಸೂಚಿಸಿತ್ತು.

ಝುಗಮಗಿಸುವ ಬೆಳಕು ವೈಭವದ ಸಂಕೇತವೂ ಅಲ್ಲ, ಸಾಂಸ್ಕೃತಿಕ ಸಂಭ್ರಮದ ಪ್ರತೀಕವೂ ಅಲ್ಲ ಎಂಬುದನ್ನು ಪ್ರಜ್ಞಾವಂತ ಜನ ಅರಿತಿದ್ದಾರೆ. ಪ್ರಖರ ಬೆಳಕು ಏಕೆ ಸ್ವಾಗತಾರ್ಹವಲ್ಲ ಎಂಬುದರ ಕುರಿತು ದೀರ್ಘ ಸಂಶೋಧನೆಗಳೇ ಆಗಿವೆ. ‘ಲ್ಯಾನ್ಸೆಟ್’ ಎಂಬ ಅಂತರರಾಷ್ಟ್ರೀಯ ಪತ್ರಿಕೆ ಈ ಕುರಿತು ವಿಶೇಷ ಲೇಖನವನ್ನೇ ಪ್ರಕಟಿಸಿದೆ. ರಾತ್ರಿಯ ಪಾಳಿಯಲ್ಲಿ ಕೆಲಸ ಮಾಡುವವರಿಗೆ ಪ್ರಖರ ಬೆಳಕು ಮಾರಕವಾಗಿ ಪರಿಣಮಿಸುತ್ತದೆ. ಅಂತಹವರಲ್ಲಿ ನಿರೋಧಕ ಗುಣ ಕಡಿಮೆಯಾಗಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚಾಗುತ್ತಿವೆ. ಹೃದಯಸಂಬಂಧಿ ಬೇನೆಗಳು ಬಹುಬೇಗ ಕಾಣಿಸಿಕೊಳ್ಳುತ್ತವೆ. ಹಗಲು–ರಾತ್ರಿಗೆ ಹೊಂದಿಕೊಂಡೇ ವಿಕಾಸವಾಗಿರುವ ನಮ್ಮ ದೇಹದ ದೈನಂದಿನ ಲಯ ತಪ್ಪುತ್ತದೆ. ಹೀಗಾದಾಗ, ಶರೀರದ ಗ್ಲೂಕೋಸ್ ಮಟ್ಟವೂ ಏರುಪೇರಾಗಬಹುದು. ಅದು ಮಧುಮೇಹಕ್ಕೆ ಆಹ್ವಾನ ಕೊಡಬಹುದು. ನಮ್ಮ ಬೆಳಗಿನ ಚಟುವಟಿಕೆಗಳನ್ನು ಈ ಕೃತಕ ಬೆಳಕು ರಾತ್ರಿಗೂ ವಿಸ್ತರಿಸುತ್ತದೆ.

‘ಡಾರ್ಕ್ ಸ್ಕೈ ಇಂಟರ್‌ನ್ಯಾಷನಲ್ ಸಂಸ್ಥೆ’ ಸಮೀಕ್ಷೆ ಮಾಡಿ, ಸುಮಾರು 160 ವಿವಿಧ ಸಸ್ಯ, ಪ್ರಾಣಿಗಳ ಮೇಲೆ ಕೃತಕ ಬೆಳಕು ತರುವ ಪರಿಣಾಮವನ್ನು ಬಹಿರಂಗಪಡಿಸಿದೆ. ಹೆಚ್ಚಿನ ಸಂದರ್ಭಗಳಲ್ಲಿ ಪ್ರಖರ ಬೆಳಕು ರೋಗನಿರೋಧಕ ಶಕ್ತಿಯನ್ನು ಕುಂದಿಸುತ್ತದೆ. ಇದರಿಂದಾಗಿ ಪರಿಸರ ಒತ್ತಡವನ್ನು ನಿಭಾಯಿಸುವ ಸಾಮರ್ಥ್ಯ ಕುಗ್ಗುತ್ತದೆ. ಜೊತೆಗೆ ಕೆಲವು ಕೀಟಗಳು ಈ ಬೆಳಕಿನ ಆಕರ್ಷಣೆಗೆ ಬಲಿಯಾಗಿ ಪರೋಪಜೀವಿಗಳಿಗೆ ಆಹಾರವಾಗುತ್ತವೆ. ಇದು ಪರಾಗಸ್ಪರ್ಶದ ಮೇಲೆ ಪರಿಣಾಮ ಬೀರುತ್ತದೆ ಎಂದಿದೆ.

ಕೋರೈಸುವ ಬೆಳಕು ಜೀವಿಕೋಶದ ಡಿಎನ್‌ಎಯನ್ನು ಗಾಸಿಗೊಳಿಸಬಹುದು, ಅಸಹಜ ಅಧಿಕ ಒತ್ತಡ ತರಬಹುದು, ಜೀರ್ಣಶಕ್ತಿಯ ಮೇಲೆ ದುಷ್ಪರಿಣಾಮ ಬೀರಬಹುದು. ಈ ಫಲಿತಾಂಶವನ್ನು ಪ್ರಕಟಿಸಿರುವುದು ಜಾಗತಿಕ ಮಟ್ಟದಲ್ಲಿ ಆರೋಗ್ಯದ ಕುರಿತು ಪ್ರಕಟ ಆಗುತ್ತಿರುವ ‘ಹೆಲ್ತ್ ಜಿಯಾಗ್ರಫಿಕ್’ ಎಂಬ ಪತ್ರಿಕೆ. ನಮ್ಮ ಸ್ವಆಸಕ್ತಿಯನ್ನು ಬದಿಗಿಟ್ಟು ನೋಡಿದರೂ ಜೀವಿಸಂಕುಲಕ್ಕೆ ಕೃತಕ ಬೆಳಕು ಎಂದೂ ಮಾರಕವೇ. ರಾತ್ರಿಯಲ್ಲಿ ವಲಸೆ ಹೋಗುವ ಹಕ್ಕಿಗಳಿಗೆ ಕೃತಕ ಬೆಳಕು ಹದಿನೈದು ಕಿಲೊಮೀಟರ್ ಆಚೆಯಿಂದಲೇ ದಾರಿತಪ್ಪಿಸುತ್ತದೆ. ಇದೀಗ ವಿಶ್ವದಾದ್ಯಂತ ವಲಸೆ ಹಕ್ಕಿಗಳ ಮಾರ್ಗ ಕುರಿತು ನಕ್ಷೆ ತಯಾರಾಗಿದೆ. ಪ್ರಜ್ಞಾವಂತ ದೇಶಗಳು ಅಂಥ ಮಾರ್ಗಗಳಲ್ಲಿ ಬೆಳಕಿನ ಪ್ರಖರತೆಯನ್ನು ಕಡಿಮೆ ಮಾಡಬೇಕೆಂದು ಆಯಾ ದೇಶಗಳನ್ನು ಕೇಳಿಕೊಳ್ಳುತ್ತಿವೆ.

ಕೆಲವು ದೇಶಗಳು ಬೆಳಕಿನ ಪ್ರಖರತೆಯ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಇದಕ್ಕೆ ಪರಿಹಾರ ಅಷ್ಟೇನೂ ಜರೂರಲ್ಲ ಎಂದು ಭಾವಿಸಿವೆ. ಆದರೆ ಸ್ಲೊವೇನಿಯಾ ದೇಶವು ಬೆಳಕಿನ ಪ್ರಖರತೆಯನ್ನು ತಗ್ಗಿಸಲು, ಬಳಸುವ ಬೆಳಕಿನ ಪ್ರಮಾಣವನ್ನೇ ತಗ್ಗಿಸುವಂಥ ಕಾನೂನನ್ನು 2007ರಲ್ಲೇ ಜಾರಿಗೆ ತಂದಿದೆ. ಪ್ರತಿ ಮನೆಯಲ್ಲಿ ವರ್ಷಕ್ಕೆ 44.5 ಕಿಲೊವಾಟ್ ವಿದ್ಯುತ್ತಿಗಿಂತ ಹೆಚ್ಚಿನ ಪ್ರಮಾಣವನ್ನು ಬಳಸುವಂತಿಲ್ಲ. ಜನ ಇದಕ್ಕೆ ಹೊಂದಿಕೊಂಡಿದ್ದಾರೆ. ಝೆಕ್ ಗಣರಾಜ್ಯ ಇನ್ನೂ ಒಂದು ಹೆಜ್ಜೆ ಮುಂದೆಹೋಗಿ, ಬೀದಿದೀಪಗಳು ಬೀದಿಗಷ್ಟೇ ಬೆಳಕು ಬೀರಬೇಕೇ ವಿನಾ ಅಕ್ಕಪಕ್ಕದ ಕಟ್ಟಡಗಳಿಗಲ್ಲ ಎಂಬ ನಿರ್ದಿಷ್ಟ ಗುರಿಯೊಂದಿಗೆ ಕೆಲಸ ಮಾಡುತ್ತಿದೆ. ವಿಶೇಷ ಸಂದರ್ಭಗಳಲ್ಲಿ ಎಷ್ಟು ಪ್ರಮಾಣದ ಬೆಳಕು ಬಳಸಬಹುದು ಎಂಬ ಬಗ್ಗೆ ಮಾರ್ಗಸೂಚಿಯನ್ನೂ ಹೊರತಂದಿದೆ.

ಕಲ್ಲಿದ್ದಲು, ತೈಲ ದಹನದಿಂದ ಆಗಿರುವ ಮಾಲಿನ್ಯವನ್ನು ನಿವಾರಿಸಬೇಕೆಂದರೆ ಕನಿಷ್ಠ ನೂರು ವರ್ಷಗಳಾದರೂ ಬೇಕು. ಆದರೆ ಪ್ರಖರ ಬೆಳಕನ್ನು ತಡೆಯಲು ಇಷ್ಟೊಂದು ಪ್ರಯತ್ನ ಅನಗತ್ಯ. ಒಡನೆಯೇ ಕೈಗೊಳ್ಳಬಹುದಾದ ಕಾರ್ಯತಂತ್ರ ಕೂಡ. ಕಡಿಮೆ ಬೆಳಕು ಎಂದರೆ ಅದು ಪ್ರಗತಿಯ ಸಂಕೇತ ಎಂಬ ವಾಸ್ತವದ ಅರಿವು ನಮಗೆ ಆಗಬೇಕು.



ಚುರುಮುರಿ



ಕೊನೆ (ಇಲ್ಲದ) ಪ್ರಶ್ನೆ!

● ತುರುವೇಕೆರೆ ಪ್ರಸಾದ್

ಕೋಟ್ಯಧಿಪತಿ ಹಾಟ್‌ಸೀಟಲ್ಲಿ ಪರ್ಮೇಶಿ ಕೂತಿದ್ದ. ಆ ಕಡೆಯಿಂದ ಸೂಪರ್ ಎ.ಐ. ಕಂಪ್ಯೂಟರ್ ಹೇಳಿತು: ನಿಮ್ ಕೊನೇ ಪ್ರಶ್ನೆ ಹೀಗಿದೆ: ‘ಕರ್ನಾಟಕದ ಕೈ ಪಕ್ಷದ ಮುಂದಿನ ಅಧ್ಯಕ್ಷರಾಗೋರು ಯಾರು?’ ಆಯ್ಕೆ ಹೀಗಿವೆ: 1. ಹೋಳಿಗೆ ಈಶಣ್ಣ 2. ಖಾರ ಪ್ರಭಣ್ಣ 3. ಲೈಟ್ ಪಾಟೀಲು 4. ಮೇ.ಯಾ.ಅ. ಅಂದ್ರೆ ಮೇಲಿನದ್ದು ಯಾವುದೂ ಅಲ್ಲ.

‘ಇದು ಸಂಭವನೀಯ ಪ್ರಶ್ನೆ. ಇಂಥದ್ದು ಕೇಳೋದು ಅನ್ಯಾಯ’ ಎಂದ ಪರ್ಮೇಶಿ.

‘ನಾನು ಎ.ಐ, ನನ್ ಉತ್ರಕ್ಕೆ ಟ್ಯಾಲಿ ಆದ್ರೆ ಕೋಟಿ, ಇಲ್ಲ ಲಂಗೋಟಿ’ ನಕ್ಕಿತು ಕಂಪ್ಯೂಟರ್.

‘50–50 ಆಪ್ಷನ್ ತಗೊತೀನಿ’.

‘ಓಕೆ’ ಎಂದ ಕಂಪ್ಯೂಟರ್, ಹೋಳಿಗೆ ಈಶಣ್ಣ, ಮೇ.ಯಾ.ಅ. ಎರಡು ಆಯ್ಕೆಗಳನ್ನು ಮುಂದಿಟ್ಟಿತು. ಪರ್ಮೇಶಿ ಮತ್ತೆ ಗೊಂದಲಕ್ಕೆ ಬಿದ್ದ: ‘ಜನತಾ ಪೋಲ್‌ಗೆ ಹೋಗ್ತೀನಿ’ ಅಂದ. ಜನ ವೋಟಿಂಗ್ ಪ್ಯಾಡ್ ತಗಂಡು ಒತ್ತುದ್ರು. ಹೋಳಿಗೆ ಈಶಣ್ಣ ಅಂತ ಬಂತು.

‘ಹೋಳಿಗೆ ಈಶಣ್ಣ ಉತ್ರ ಲಾಕ್ ಮಾಡ್ಲಾ?’ ಕೇಳಿತು ಕಂಪ್ಯೂಟರ್.

‘ಬೇಡ ಬೇಡ, ‘ಫೋನ್– ಎ– ಫ್ರೆಂಡ್’ಗೆ ಹೋಗ್ತೀನಿ’ ಅಂದ. ಓಕೆ ಎಂದ ಕಂಪ್ಯೂಟರ್ ಪರ್ಮೇಶಿಯ ಗಳಸ್ಯ ಕಂಠಸ್ಯ ಗುದ್ಲಿಂಗಂಗೆ ಕನೆಕ್ಟ್ ಮಾಡ್ತು. ಆ ಕಡೆಯಿಂದ ಗುದ್ಲಿಂಗ ‘ಇಂಥ ಜುಜುಬಿ ಪ್ರಶ್ನೆ ಕೇಳಿ ನಮ್ ಮರ್ಯಾದೆ ತೆಗೀತೀಯಾ? ಹೋಳಿಗೆ ಈಶಣ್ಣ ಅಂತಲೇ ಬೊಗಳೋ’ ಎಂದು ಕಿರುಚಿದ.

‘ಈಗ ಇದನ್ನೇ ಲಾಕ್ ಮಾಡ್ಲಾ?’ ಕೇಳಿತು ಕಂಪ್ಯೂಟರ್. ಪರ್ಮೇಶಿ ಬೇಡ ಅಂದ.

‘ನಿಮ್ ಮೂರೂ ಲೈಫ್‌ಲೈನ್ ನೆಗೆದು ಬಿದ್ಹೋಯ್ತು? ಇನ್ನೂ ಏನ್ ಯೋಚನೆ ಮಾಡ್ತಿದ್ದೀರಿ?’ ಕೇಳಿತು ಕಂಪ್ಯೂಟರ್.

‘ಗುದ್ಲಿಂಗ ಫೋನ್– ಎ– ಫ್ರೆಂಡ್ ಅಲ್ಲ, ಫೋನ್– ಎ– ಎನಿಮಿ. ಅವನು ನನ್ ಕಾಲ್ ಎಳೆಯೋಕೆ ಬೇಕು ಅಂತ ತಪ್ ಹೇಳ್ತಿರ್ತಾನೆ. ಇನ್ನು ಜನತಾ ಪೋಲ್! ಅವರತ್ರ ಇರೋ ವೋಟಿಂಗ್ ಪ್ಯಾಡ್ ಮೇಲೇ ನಂಗೆ ಡೌಟ್ ಇದೆ. ಸೋ ನನ್ನ ಆಯ್ಕೆ ಮೇ.ಯಾ.ಅ., ಆದ್ರೆ ನೀನು ಹೇಳಿದಂಗೆ ‘ಮೇಲಿನದ್ದು ಯಾವುದೂ ಅಲ್ಲ ಅಂತ ಅಲ್ಲ, ‘ಮೇಲಿನವರು ಯಾರಂತಾರೋ ಅವರು’ ಅಂತ. ಕರೆಕ್ಟಲ್ವಾ?’ ಎಂದ ಪರ್ಮೇಶಿ.

ಕಂಪ್ಯೂಟರ್ ಗಪ್ಪಂತ ಹ್ಯಾಂಗಾಯಿತು.

ಸಂಗತ

ವೈಚಾರಿಕ ಪಾತಳಿಯ ದಾರಿದೀಪ

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಸಮತೋಲನದಿಂದ ನಡೆಸಿಕೊಂಡು ಹೋಗುವ ಬೆಳಕಾಗಿ ಬಂದದ್ದು ಸಮಸಮಾಜದ ವಿಚಾರಧಾರೆ

● ಲೋಕೇಶ್ ಅಗಸನಕಟ್ಟೆ

ಸಮಾಜೋ ಧಾರ್ಮಿಕ ಕ್ರಾಂತಿಯನ್ನು ಮಾಡಿದ ಹನ್ನೆರಡನೆಯ ಶತಮಾನದ ಬಸವಣ್ಣ ಅವರನ್ನು ‘ಸಾಂಸ್ಕೃತಿಕ ನಾಯಕ’ ಎಂದು ರಾಜ್ಯ ಸರ್ಕಾರ ಘೋಷಿಸಿ ಇಂದಿಗೆ (ಜ. 18) ಸರಿಯಾಗಿ ಒಂದು ವರ್ಷವಾಯಿತು. ಅದರ ಫಲದ ಪರಿಣಾಮವೋ ಎಂಬಂತೆ, ಇಂದು ಆಯೋಜಿಸಿರುವ 13ನೇ ಶರಣ ಸಾಹಿತ್ಯ ಸಮ್ಮೇಳನವು ಮೊದಲ ಬಾರಿಗೆ, ದಲಿತ ಶರಣರಾದ ಬೆಲ್ದಾಳ ಸಿದ್ದರಾಮ ಅವರ ಸರ್ವಾಧ್ಯಕ್ಷತೆಯಲ್ಲಿ ನಡೆಯಲಿದೆ. ಇದು, ಸಾಂಸ್ಕೃತಿಕ ನಾಯಕ ಬಸವಣ್ಣನವರ ತಾತ್ವಿಕತೆಯನ್ನು ಸಾಧ್ಯವಾಗಿಸುವ ಒಂದು ಪ್ರಯತ್ನದಂತೆಯೂ ತೋರುತ್ತಿದೆ.

ಒಂಬೈನೂರು ವರ್ಷಗಳ ಹಿಂದೆ ಸಮಸಮಾಜದ ಕನಸನ್ನು ಕಂಡು ಅದನ್ನು ಎಲ್ಲ ಹಂತಗಳಲ್ಲೂ ಸಾಧ್ಯವಾಗಿಸುವ ಒಂದು ಪ್ರಯತ್ನವೇ ಇಂದಿಗೆ ಚೋದ್ಯದಂತೆ ತೋರುತ್ತದೆ. ದುಡಿಯುವ ಲಕ್ಷಾಂತರ ಜನ ಈ ತತ್ವವನ್ನು ಒಪ್ಪಿ, ಸ್ವೀಕರಿಸಿ ಅದನ್ನು ಆಗುಮಾಡಲು ಬಸವಣ್ಣನವರಿಗೆ ಹೆಗಲೆಣೆಯಾಗಿ ನಿಂತದ್ದೂ ಈ ಚಳವಳಿಯ ತಾತ್ವಿಕತೆಯ ಶಕ್ತಿ. ಜನಸಮುದಾಯದ ನಡುವಿನಿಂದ ಹುಟ್ಟಿಕೊಂಡು ಬಂದ ಜನತಾ ಧರ್ಮ ಇದು. ಅನುಭವದಿಂದ ಅನುಭಾವ ಹುಟ್ಟಿಕೊಂಡು ಬಂದ ಅಪರೂಪದ ಏಕೈಕ ತಾತ್ವಿಕ ಧರ್ಮವಿದು.

ಸಮುದಾಯದ ಸೃಜನಶೀಲತೆಯು ಸೃಷ್ಟಿಸಿದ ಈ ಧರ್ಮವು ‘ದಯವೇ ಧರ್ಮದ ಮೂಲ’ ಎಂದಿತು. ಏಕದೇವೋಪಾಸನೆಯನ್ನು ಇಷ್ಟಲಿಂಗದ ಮೂಲಕ ದರ್ಶಿಸಿತು. ಮನುಷ್ಯರಾದವರೆಲ್ಲರೂ ಮಾನವೀಯತೆಗಾಗಿ ತುಡಿದ ಕಾಯಕಜೀವಿಗಳೆಲ್ಲರೂ ಒಂದುಗೂಡಿ ರೂಪಿಸಿದ ದೂರದೃಷ್ಟಿಯ ಕಾಣ್ಕೆ ಇದು. ಎಲ್ಲರನ್ನೂ ಒಳಗೊಳ್ಳುವ ಬಹುದೊಡ್ಡ ಆಶಯದ ಈ ಚಿಂತನಾಕ್ರಮವು ಚಳವಳಿಯ ಉಪ ಉತ್ಪನ್ನವಾದ ವಚನಗಳಲ್ಲಿ ರೂಪುಗೊಂಡು ಬಂದಿದೆ.


‘ಆವನಾದಡೇನು ಶ್ರೀ ಮಹಾದೇವನ ನೆನೆವನ, ಬಾಯ ತಂಬುಲವ ಮೆಲುವೆ’, ‘...ಇವನಾರವನೆಂದೆನಿಸದಿರಯ್ಯ, ...ಇವ ನಮ್ಮವನೆಂದೆನಿಸಯ್ಯ’... ಹೀಗೆ ಎಲ್ಲರನ್ನೂ ಎಲ್ಲ ಜಾತಿ, ಧರ್ಮ, ಲಿಂಗ, ಮತಗಳನ್ನೂ ಒಳಗೊಂಡು, ವಸ್ತು ಚೈತನ್ಯವೇ ದೇಹ ಎಂಬ ದೇವಾಲಯದೊಳಗಿರುವ ಆತ್ಮ, ದೇವರು ಎಲ್ಲರೊಳಗೂ ಇರುವನು ಎಂದು ಹೇಳಿ, ತರತಮ ಭಾವವನ್ನು ತೊರೆಯಬೇಕೆಂದು ಕರೆ ಕೊಟ್ಟರು ಬಸವಣ್ಣ.

ವಾದ– ಸಂವಾದ ರೂಪದ, ಅಚ್ಚ ಕನ್ನಡದ ದೇಸಿ ರೂಪದ, ಅನುಭಾವವನ್ನು ಸರಳವಾಗಿಸಿ, ಕೇಳುವವನ ಅಂತಃಕರಣವನ್ನು, ಅವನ ಆತ್ಮಸಾಕ್ಷಿಯನ್ನು ಪ್ರಶ್ನಿಸುವಂತೆ ಇರುವ ಸರ್ವ ಶರಣರ ವಚನ ಸಮುಚ್ಚಯವು ಕಾಲದಿಂದ ಕಾಲಕ್ಕೆ ಸಾಹಿತ್ಯ ಪಂಥಗಳಿಗೆ, ಪ್ರಕಾರಗಳಿಗೆ ಪ್ರೇರಕಶಕ್ತಿಯಾಗಿದೆ. ಹಲವು ಚಳವಳಿಗಳ ಚಾಲಕಶಕ್ತಿಯೂ ಆಗಿದೆ.

ಇಪ್ಪತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ‘ಖಡ್ಗವಾಗಲಿ ಕಾವ್ಯ’ ಎಂದ ದಲಿತ ಬಂಡಾಯದ ನೇಪಥ್ಯದಲ್ಲಿ ಇದ್ದದ್ದು ನಿಸ್ಸಂಶಯವಾಗಿ ಅಂಬೇಡ್ಕರ್ ಅವರ ವಿಚಾರಧಾರೆಯೇ. ಅದಕ್ಕೆ ಒದಗಿಬಂದ ಇನ್ನೆರಡು ಶಕ್ತಿಗಳೆಂದರೆ ಬುದ್ಧ ಹಾಗೂ ಬಸವಣ್ಣ. ಈ ತ್ರಿಶಕ್ತಿಗಳು ಇಪ್ಪತ್ತನೆಯ ಶತಮಾನದಲ್ಲಿ ಪ್ರಜಾಪ್ರಭುತ್ವವನ್ನು ಗೌರವಿಸುವವರೆಲ್ಲರ ಧಾರಣಾಶಕ್ತಿಯಾಗಿವೆ. ಕುವೆಂಪು ಸಾರಿದ ವಿಶ್ವಮಾನವ ಸಂದೇಶ ಕೂಡ ಈ ವಿಚಾರಧಾರೆಯ ಮುಂದುವರಿದ ಭಾಗವೇ ಹೌದು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಒಕ್ಕೂಟ ವ್ಯವಸ್ಥೆಯನ್ನು ಸಮತೋಲನದಿಂದ ನಡೆಸಿಕೊಂಡು ಹೋಗುವ ಬೆಳಕಾಗಿ ಬಂದದ್ದು ಈ ಸಮಸಮಾಜದ ವಿಚಾರಧಾರೆಯೇ. ಇದರ ಜೊತೆಗೆ ಸಮತಾವಾದ ಹಾಗೂ ಸಮಾಜವಾದವೂ ಕೈ ಜೋಡಿಸಿ ಭಾರತದ ಸಾಂಸ್ಕೃತಿಕತೆಯನ್ನು ಕಾಪಾಡುವಲ್ಲಿ ಸಹಾಯಕ್ಕೆ ಬಂದವು. ಆಡಳಿತದ ಚುಕ್ಕಾಣಿ ಹಿಡಿದು ಭಾರತವನ್ನು ಮುನ್ನಡೆಸಿದ ನೆಹರೂ ಈ ಚಿಂತನಾ ಶಾಲೆಯ ವಿಚಾರಗಳನ್ನು ಒಪ್ಪಿಕೊಂಡದ್ದರಿಂದಲೇ ಬಹುತ್ವವನ್ನು, ಬಹುಸಂಸ್ಕೃತಿಯ ಸಮಾಜಗಳನ್ನು ಒಟ್ಟಿಗೆ ಮುನ್ನಡೆಸಲು ಸಾಧ್ಯವಾದುದು.

ಇಂತಹ ಚಿಂತನೆಯ ಕುರಿತು ಇಂದು ಹಲವರು ಅಪಸ್ವರ ಎತ್ತಬಹುದಾದರೂ ಅಂದು ದೇಶವನ್ನು ಕಾಪಾಡಿದ್ದು ಇದೇ ಚಿಂತನೆ ಎಂಬುದನ್ನು ಮರೆಯಲಾಗುವುದಿಲ್ಲ. ಈ ವೈಚಾರಿಕಾ ಪಾತಳಿಯ ಮೇಲೆಯೇ ಆಡಳಿತ ನಡೆಸಿದ ಇಂದಿರಾ ಗಾಂಧಿ ಅವರ ಗರೀಬಿ ಹಟಾವೊ, ರಾಷ್ಟ್ರೀಕರಣದಂತಹ ಧೀರ ನಿರ್ಧಾರಗಳು ಈ ದೇಶದ ಬಹುಸಂಖ್ಯಾತರ ಬದುಕಿಗೆ ದಾರಿದೀಪವಾದದ್ದರ ಹಿಂದಿನ ಚಿಂತನೆಯೂ ಇದೇ ಆಗಿದೆ.



ಕರ್ನಾಟಕದಲ್ಲಿ ಹಲವು ಪಕ್ಷಗಳು ಆಡಳಿತ ನಡೆಸಿವೆ. ಪರಸ್ಪರ ಆರೋಪ, ಪ್ರತ್ಯಾರೋಪಗಳಲ್ಲೇ ಬಹುಸಮಯವನ್ನು ಕಳೆದಿವೆ. ಸಾಂಸ್ಕೃತಿಕ ಬಿಕ್ಕಟ್ಟು ತೀವ್ರ ಸ್ವರೂಪವನ್ನು ತಾಳುತ್ತಾ ಹೊರಟ ಸಮಯದಲ್ಲಿ, ಇದಕ್ಕೆ ಸರಿಯಾದ ಉತ್ತರ ಇರುವುದು ಬುದ್ಧ, ಬಸವ, ಅಂಬೇಡ್ಕರ್ ಅವರ ಚಿಂತನೆಗಳಲ್ಲಿಯೇ ಎನ್ನುವ ವಾದವನ್ನು ಚಳವಳಿಗಳು ಮುಂದೆ ಇಡುತ್ತಲೇ ಬಂದಿವೆ. ಇದಕ್ಕೆ ಪರ್ಯಾಯ ನಾಯಕರ, ಪರ್ಯಾಯ ಪಠ್ಯಗಳ ಅಪವ್ಯಾಖ್ಯಾನಗಳ ಮೆರವಣಿಗೆಯೂ ನಡೆದೇ ಇದೆ. ಈ ಮೂವರು ದಾರ್ಶನಿಕರ ಚಿಂತನೆಗಳ ಜೊತೆಯಲ್ಲಿ ಅವೈದಿಕ ತಾತ್ವಿಕತೆಯನ್ನು ರೂಪಿಸಿದ ಹಲವು ಧಾರ್ಮಿಕ, ಸಾಮಾಜಿಕ ಹೋರಾಟಗಾರರ ಚಿಂತನೆಗಳು ನಮ್ಮ ಸಮಾಜವನ್ನು ಸರಿಯಾದ ದಿಕ್ಕಿನಲ್ಲಿ ಮುನ್ನಡೆಸಬಲ್ಲವು.

ಈಗ ಇರುವ ಪ್ರಶ್ನೆ, ಪ್ರಭುತ್ವದ ಆಶಯಕ್ಕೆ ಪೂರಕವಾಗಿ ಸಮುದಾಯಗಳು ವಹಿಸುವ ಜವಾಬ್ದಾರಿಯ ಸ್ವರೂಪ ಎಂಥಾದ್ದು ಎಂಬುದು. ಪ್ರಭುತ್ವ ಮತ್ತು ಬಹುತ್ವದ ಸಹಸ್ಪಂದನದಿಂದ ಮಾತ್ರವೇ ಸಮಸಮಾಜವನ್ನು ರೂಪಿಸಲು ಸಾಧ್ಯ ಎಂಬುದು ಈವರೆಗೂ ಶೋಧಿಸಿಕೊಂಡ ಉತ್ತರವಾಗಿದೆ. ಅದು ಈಗ ಅನುಷ್ಠಾನಗೊಳ್ಳಬೇಕಷ್ಟೆ.

ವಾಚಕರ ವಾಣಿ

ಜಾತಿ ಜನಗಣತಿ: ಸರ್ಕಾರ ಹೆದರುವುದೇಕೆ?

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಜನಗಣತಿ) ವರದಿಯನ್ನು ಮಂಡಿಸುವ ಮೊದಲೇ ಪ್ರಬಲ ಸಮುದಾಯಗಳು ಹಾಗೂ ಅದಕ್ಕೆ ಸೇರಿದ ಸಚಿವರೇ ಏಕಮುಖವಾಗಿ ವಿರೋಧ ವ್ಯಕ್ತಪಡಿಸುತ್ತಿರುವುದು ಬೇಸರದ ಸಂಗತಿ. ಭಾರತದಲ್ಲಿ ಹತ್ತು ವರ್ಷಗಳಿಗೊಮ್ಮೆ ಜನಗಣತಿ ವರದಿಯನ್ನು ಸಿದ್ಧಪಡಿಸಲಾಗುತ್ತದೆ. ಆದರೆ 1931ರ ನಂತರ ದೇಶದಲ್ಲಿ ಜಾತಿ ಜನಗಣತಿ ನಡೆಸಲಾಗಿಲ್ಲ. ಕರ್ನಾಟಕದಲ್ಲಿ ಮೊದಲ ಬಾರಿಗೆ ಎಚ್. ಕಾಂತರಾಜ ಅವರ ನೇತೃತ್ವದಲ್ಲಿ ಸಮೀಕ್ಷೆ ನಡೆಸಿ ಜಾತಿ ಜನಗಣತಿಯ ವರದಿಯನ್ನು ಸಿದ್ಧಪಡಿಸಲಾಗಿದೆ. ಅಂತಹ ವರದಿಯನ್ನು ಸಂಪುಟ ಸಭೆಯಲ್ಲಿ ಮಂಡಿಸುವ ಮೊದಲೇ ವಿರೋಧ ವ್ಯಕ್ತಪಡಿಸುವುದು ಸಮಂಜಸವಲ್ಲ. ವರದಿಯನ್ನು ಸಾರ್ವಜನಿಕವಾಗಿ ಬಹಿರಂಗಗೊಳಿಸಿದ ನಂತರ, ಅದರ ಸಾಧಕ– ಬಾಧಕಗಳ ಬಗ್ಗೆ ಚರ್ಚಿಸಿ, ಪರಿಶೀಲಿಸಿ ಅಭಿಪ್ರಾಯ ವ್ಯಕ್ತಪಡಿಸುವುದು ಉತ್ತಮ. ವರದಿಯಿಂದ ಯಾವುದೇ ಸಮುದಾಯಕ್ಕೆ ಅನ್ಯಾಯವಾದರೆ ಅದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ ನ್ಯಾಯ ಪಡೆಯುವಂತಹ ಅವಕಾಶವನ್ನು ಸಂವಿಧಾನ ನೀಡಿದೆ.

ಸಮಸಮಾಜದ ನಿರ್ಮಾಣಕ್ಕೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ವಿರೋಧ ಮೊದಲಿನಿಂದಲೂ ಇದೆ. ಆದರೆ ಆಡಳಿತ ನಡೆಸುವವರು ಇದಕ್ಕೆ ಹೆದರಬಾರದು. ವರದಿಯ ಸಾರಾಂಶವನ್ನು ಬಹಿರಂಗಗೊಳಿಸಿ, ಸಾರ್ವಜನಿಕರ ಅಭಿಪ್ರಾಯವನ್ನು ಆಲಿಸಿ, ಅದರಲ್ಲಿ ಇರುವ ನ್ಯೂನತೆಗಳನ್ನು ಸರಿಪಡಿಸಿಕೊಂಡು ವರದಿಯನ್ನು ಜಾರಿ ಮಾಡುವ ಪ್ರಯತ್ನ ಮಾಡಬೇಕು.

ಆಂಜನೇಯ ಎನ್., ಕಸಿನಾಯಕನಹಳ್ಳಿ, ಮಧುಗಿರಿ

ಸಿಸೇರಿಯನ್ ಹೆರಿಗೆ: ಅರಿವು ಮೂಡಲಿ

‘ಸಿಸೇರಿಯನ್ ಹೆಚ್ಚಳ ತಂದ ಕಳವಳ’ ಎಂಬ ಲೇಖನದಲ್ಲಿ (ಆಳ– ಅಗಲ, ಜ. 17) ಸಿಸೇರಿಯನ್ ಮೂಲಕ ಮಾಡಿಸುವ ಹೆರಿಗೆ ಸಂಖ್ಯೆಯ ಹೆಚ್ಚಳದಲ್ಲಿ ವೈದ್ಯಕೀಯ ಅಲ್ಲದ ಕಾರಣಗಳನ್ನು ನೋಡಿ ಬೆರಗಾದೆ. ಸಹಜ ಹೆರಿಗೆಯಲ್ಲಿ ನೋವು ಅಧಿಕ ಎಂಬುದನ್ನು ಬಿಟ್ಟರೆ ಬೇರೆ ಯಾವ ದುಷ್ಪರಿಣಾಮಗಳೂ ಇಲ್ಲ. ನಿರ್ದಿಷ್ಟ ದಿನ ಮತ್ತು ನಿರ್ದಿಷ್ಟ ಸಮಯದಂದೇ ಮಗುವಿಗೆ ಜನ್ಮ ನೀಡಬೇಕೆಂಬ ಪೋಷಕರ ಹಂಬಲವೂ ಈ ಬಗೆಯ ಹೆರಿಗೆಗಳ ಸಂಖ್ಯೆ ಹೆಚ್ಚಲು ಕಾರಣವಾಗಿರಬಹುದು. ಸಹಜ ಹೆರಿಗೆಯಲ್ಲಿ ಏನಾದರೂ ವ್ಯತ್ಯಾಸವಾದರೆ ಎದುರಿಸಬೇಕಾಗಬಹುದಾದ ಕಾನೂನಿನ ತೊಡಕುಗಳು, ವೈದ್ಯರಿಗೆ ಸಿಗಬಹುದಾದ ಇನ್ಸೆಂಟಿವ್‌ನಂತಹ ಅಂಶಗಳು ಕೂಡ ಪೂರಕವಾಗಿ ಕೆಲಸ ಮಾಡುತ್ತವೆ. ಸುಶಿಕ್ಷಿತರೇ ಹೆಚ್ಚಾಗಿ ಸಿಸೇರಿಯನ್ ಹೆರಿಗೆಯತ್ತ ಮುಖ ಮಾಡುತ್ತಿರುವುದು ಅತ್ಯಂತ ವಿಪರ್ಯಾಸ ಎನಿಸಿತು. ಏನೇ ಆದರೂ ಸಿಸೇರಿಯನ್ ಹೆರಿಗೆಯಲ್ಲಿ ದೀರ್ಘಾವಧಿ ದುಷ್ಪರಿಣಾಮಗಳು ಇದ್ದೇ ಇರುತ್ತವೆ. ಇದರ ಬಗ್ಗೆ ಮೊದಲು ಪ್ರಜ್ಞಾವಂತರು ಪುನರ್ ಆಲೋಚಿಸುವುದು ಉತ್ತಮ.

ಆಶಾ ಅಪ್ರಮೇಯ, ದಾವಣಗೆರೆ

ಹೋರಾಟದ ಫಲ: ಕಸಿಯುವುದು ಬೇಡ

ವಾರದಲ್ಲಿ 90 ಗಂಟೆ ದುಡಿಯಬೇಕೆಂಬ ಎಲ್ ಆ್ಯಂಡ್ ಟಿ ಕಂಪನಿಯ ಮುಖ್ಯಸ್ಥ ಎಸ್.ಎನ್.ಸುಬ್ರಹ್ಮಣ್ಯನ್ ಮತ್ತು 70 ಗಂಟೆ ಕೆಲಸ ಮಾಡಬೇಕೆಂಬ ಇನ್ಫೊಸಿಸ್ ಸಹ ಸಂಸ್ಥಾಪಕ ನಾರಾಯಣ ಮೂರ್ತಿ ಅವರ ಹೇಳಿಕೆಗಳು ಈಗ ಚರ್ಚೆಗೆ ಒಳಗಾಗಿವೆ. ಇವರ ಈ ಹೇಳಿಕೆಗಳ ಬಗ್ಗೆ ನಾವು ಆಶ್ಚರ್ಯಪಡಬೇಕಾಗಿಲ್ಲ. ಏಕೆಂದರೆ ಇಂತಹವರ ಮನೋಧರ್ಮವೇ ಹಾಗಿರುತ್ತದೆ. ಕೆಲಸಗಾರರನ್ನು ಶೋಷಿಸಿದಷ್ಟೂ ಅವರಿಗೆ ಲಾಭ ಹೆಚ್ಚು. ಇಂತಹ ಮನಃಸ್ಥಿತಿ ಉಳ್ಳವರಿಗೆ ಕುಟುಂಬದ ಶಾಂತಿ, ನೌಕರರ ಆರೋಗ್ಯ, ಮನೆ ಜವಾಬ್ದಾರಿ, ಮಕ್ಕಳ ಪಾಲನೆ ಎಲ್ಲವೂ ಗೌಣ.

ಹಲವು ಮಹನೀಯರ ಹೋರಾಟಗಳ ಫಲವಾಗಿ ದಿನದ ಕೆಲಸದ ಅವಧಿ, ರಜಾ ದಿನ ನಿಗದಿಯಾಯಿತು. ಮೇ ದಿನಾಚರಣೆ ಸಂದರ್ಭದಲ್ಲಾದರೂ ನಾವು ಇದನ್ನೆಲ್ಲ ಅರಿತುಕೊಳ್ಳಬೇಕು. ಆರ್ಥಿಕ ಬೆಳವಣಿಗೆ ಹಾಗೂ ಅಭಿವೃದ್ಧಿ ಚಟುವಟಿಕೆಗಳು ಎಷ್ಟು ಮುಖ್ಯವೋ ಕುಟುಂಬದ ಶಾಂತಿ ಅದಕ್ಕಿಂತಲೂ ಹೆಚ್ಚು ಮುಖ್ಯ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಎಚ್.ಎಸ್.ಚಂದ್ರಶೇಖರ, ಬೆಂಗಳೂರು

ಅತಿಥಿ ಉಪನ್ಯಾಸಕರ ಸಂಕಟಕ್ಕೆ ಸ್ಪಂದಿಸಿ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕೆಲಸ ಮಾಡುತ್ತಾ ಬಂದಿದ್ದ ಐದು ಸಾವಿರ ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಳ್ಳಲಿದ್ದಾರೆ ಎಂಬ ವರದಿ (ಪ್ರ.ವಾ., ಜ. 12) ಓದಿ ತೀವ್ರ ಬೇಸರವಾಯಿತು. ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವುದು ಇಂದು ನಿನ್ನೆಯ ಬೆಳವಣಿಗೆಯಲ್ಲ. ಸುಮಾರು ನಾಲ್ಕು ದಶಕಗಳದ್ದು. ಅರೆಕಾಲಿಕ, ತಾತ್ಕಾಲಿಕ, ಅತಿಥಿ ಉಪನ್ಯಾಸಕ ಎಂದೆಲ್ಲ ಬೇರೆ ಬೇರೆ ಹೆಸರುಗಳಲ್ಲಿ ಕರೆದು, ನಮ್ಮನ್ನು ಆಳುವ ಸರ್ಕಾರಗಳು ಈ ಪದ್ಧತಿಯನ್ನು ಉಳಿಸಿ, ಬೆಳೆಸಿಕೊಂಡು ಬಂದಿವೆ. ಕಾಯಂ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಸರ್ಕಾರದಿಂದ ಸಾಧ್ಯವಾಗದ್ದಕ್ಕೆ ಅಧಿಕಾರಿಗಳು ಸೃಷ್ಟಿ ಮಾಡಿದ ಪದ್ಧತಿ ಇದು. ಹವಾನಿಯಂತ್ರಿತ ಕೋಣೆಗಳಲ್ಲಿ ಕುಳಿತು ಕಾನೂನು ರೂಪಿಸುವ ಇವರು, ನೊಂದವರ ನೋವನ್ನು ಹೇಗೆ ಅರಿಯಬಲ್ಲರು?

ಇಂದಿನ ಬಹಳಷ್ಟು ರಾಜಕಾರಣಿಗಳು ಅರೆಕಾಲಿಕ ಉಪನ್ಯಾಸಕರ ಪಾಠಗಳನ್ನು ಕೇಳಿಯೇ ಬಂದಿರುವಂತಹವರು. ಅಷ್ಟೇ ಏಕೆ, ಹತ್ತು– ಹದಿನೈದು ವರ್ಷಗಳಿಂದ ಕಾಯಂ ಉಪನ್ಯಾಸಕರಾಗಿ ನೇಮಕಗೊಂಡಿರುವ ಸಾವಿರಾರು ಉಪನ್ಯಾಸಕರು ಅರೆಕಾಲಿಕ ಉಪನ್ಯಾಸಕರ ಶಿಷ್ಯರಾಗಿಯೇ ಕಲಿತವರು. ಅಂತಹ ರಾಜಕಾರಣಿಗಳು, ಉಪನ್ಯಾಸಕರು, ಅಧಿಕಾರಿಗಳನ್ನು ತಯಾರು ಮಾಡಿದ ಅತಿಥಿ ಉಪನ್ಯಾಸಕರನ್ನು ಏಕಾಏಕಿ ಮನೆಗೆ ಕಳುಹಿಸುವುದು ಯಾವ ನ್ಯಾಯ? ಅವರಿಗೆ ಸರ್ಕಾರ ನೀಡಿದ ಸವಲತ್ತು, ಸೌಲಭ್ಯಗಳಾದರೂ ಏನು? ಕೊನೇಪಕ್ಷ ಇಷ್ಟು ವರ್ಷ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ, ಯುಜಿಸಿ ರೂಪಿಸಿರುವ ಮಾನದಂಡದ ಅನ್ವಯ ಅರ್ಹತೆ ಪಡೆದವರನ್ನು ಕಾಯಂ ಮಾಡುತ್ತೇವೆ ಎಂಬ ಆದೇಶವನ್ನಾದರೂ ಸರ್ಕಾರ ಹೊರಡಿಸಿದೆಯೇ? ಅತಿಥಿ ಉಪನ್ಯಾಸಕರಿಗೆ ಸೇವಾಭದ್ರತೆ ನೀಡುವ ಕೆಲಸ ಆಗಲಿ.

ಕೂಡ್ಲೂರು ವೆಂಕಟಪ್ಪ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಾರಕ್ಕೆ 90 ಗಂಟೆ ಕೆಲಸ ಮಾಡಿ, ಹೆಂಡತಿ ಮುಖ ಎಷ್ಟು ನೋಡುತ್ತೀರಿ ಎಂಬ ಎಲ್ ಆ್ಯಂಡ್ ಟಿಯ ಸುಬ್ರಹ್ಮಣ್ಯನ್ ಹೇಳಿಕೆಗೆ ಪ್ರತಿಕ್ರಿಯೆಗಳು



ಉಳ್ಳವರ ಧಾರ್ಷ್ಟ್ಯ ನೌಕರರ ಹಿತ ನಿರ್ಲಕ್ಷ್ಯ

ವಾರಕ್ಕೆ 55 ಗಂಟೆಗಳಿಗಿಂತ ಹೆಚ್ಚು ದುಡಿಯುವುದರಿಂದ ಗಂಭೀರ ಅಪಾಯ ಉಂಟಾಗಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಐಎಲ್‌ಒ ಎಚ್ಚರಿಕೆ ನೀಡಿವೆ. ಆದ್ದರಿಂದ ಸರ್ಕಾರವು ಈ ಐ.ಟಿ ಕಂಪನಿಗಳಿಗೆ ಕಾರ್ಮಿಕ ಕಾಯ್ದೆಗಳಿಂದ ನೀಡಿರುವ ಎಲ್ಲಾ ವಿನಾಯಿತಿಗಳನ್ನು ಕೂಡಲೇ ಹಿಂಪಡೆದು, ವಾರಕ್ಕೆ 48 ಗಂಟೆ ಮಿತಿ ಕಡ್ಡಾಯ ಮಾಡಬೇಕು

• ಡಾ.ಬಿ.ಶ್ರೀನಿವಾಸ ಕಕ್ಕಿಲ್ಲಾಯ

'ವಾರಕ್ಕೆ 90 ಗಂಟೆ ದುಡಿಯಬೇಕು, ರವಿವಾರವೂ ದುಡಿಯಬೇಕು, ಮನೆಯಲ್ಲಿದ್ದು ಹೆಂಡತಿಯ ಮುಖವನ್ನು ದಿಟ್ಟಿಸುವುದೇನಿದೆ' ಎನ್ನುತ್ತಾರೆ ಲಾರ್ಸೆನ್ ಆ್ಯಂಡ್ ಟೂಬ್ರೊ ಇನ್ಫೊಟೆಕ್ ಅಧ್ಯಕ್ಷ ಸುಬ್ರಹ್ಮಣ್ಯನ್. 'ಪ್ರಧಾನಿ 100 ಗಂಟೆ ಕೆಲಸ ಮಾಡುತ್ತಾರೆ, ನೌಕರರು ವಾರಕ್ಕೆ ಎಪ್ಪತ್ತು ಗಂಟೆ ದುಡಿಯಬೇಕು' ಎನ್ನುತ್ತಾರೆ ಇನ್ಫೊಸಿಸ್ ನಾರಾಯಣಮೂರ್ತಿ. ಯಾರೆಷ್ಟು ನಿದ್ದೆಗೆಟ್ಟಿದ್ದಾರೆ ಎಂದು ನೋಡಿದವರಿಲ್ಲ. ಆದರೆ, ಇವರಿಂದ ಎಲ್ಲರ ನಿದ್ದೆಗೆಡುತ್ತಿದೆ. ವಿಶ್ವಮಾನ್ಯ ನಿಯಮಗಳನ್ನು ಧಿಕ್ಕರಿಸಿ, ತಮ್ಮದೇ ನೌಕರರ ಹಿತವನ್ನೂ ಕಡೆಗಣಿಸಿ ಹೀಗೆಲ್ಲ ಹೇಳುತ್ತಾರೆಂದರೆ, ಇಂದಿನ ಭಾರತದಲ್ಲಿ ಉಳ್ಳವರ ಧಾರ್ಷ್ಟ್ಯವು ಎಲ್ಲಿಗೆ ತಲುಪಿದೆ ಎನ್ನುವುದು ಸ್ಪಷ್ಟವಾಗುತ್ತದೆ.

ಯಾವುದೇ ಕಾರ್ಮಿಕನನ್ನು ದಿನಕ್ಕೆ 8 ಗಂಟೆಗಳಿಗಿಂತ ಹೆಚ್ಚು ದುಡಿಸುವಂತಿಲ್ಲ ಎನ್ನುವುದು ವಿಶ್ವದೆಲ್ಲೆಡೆ ಇರುವ ಕಾನೂನು. ಇದು ಕಾರ್ಮಿಕರ ಬಲಿದಾನಗಳಿಂದ ದೊರೆತದ್ದೇ ಹೊರತು ಯಾರೋ ಪುಕ್ಕಟೆಯಾಗಿ ನೀಡಿದ್ದಲ್ಲ. ಕೈಗಾರಿಕಾ ಕ್ರಾಂತಿಯ ಹೊಸ ಯಂತ್ರಗಳಲ್ಲಿ ಗಾಣದೆತ್ತುಗಳಂತೆ 12– 20 ಗಂಟೆ ದುಡಿಸುತ್ತಿದ್ದುದನ್ನು ಪ್ರತಿಭಟಿಸಿ '8 ಗಂಟೆ ದುಡಿಮೆ, 8 ಗಂಟೆ ವಿನೋದ, 8 ಗಂಟೆ ನಿದ್ದೆ' ಎಂದು ವಿಶ್ವದಾದ್ಯಂತ ಕಾರ್ಮಿಕರು ಮುಷ್ಕರ ಹೂಡಿದ್ದರು. 1886ರ ಮೇ 1ರಿಂದ ಅಮೆರಿಕದ ಷಿಕಾಗೊದಲ್ಲಿ ನಡೆದ ಪ್ರತಿಭಟನೆಯ ಮೇಲೆ ಪೊಲೀಸರ ಅಮಾನುಷ ದಾಳಿಗಳಲ್ಲಿ ಅನೇಕರು ಸತ್ತರು; ನಾಯಕರು ಗಲ್ಲಿಗೇರಿಸಲ್ಪಟ್ಟರು. ಅವರ ಬಲಿದಾನದ ನೆನಪಿಗಾಗಿಯೇ ಮೇ 1 ಅಂತರರಾಷ್ಟ್ರೀಯ ಕಾರ್ಮಿಕರ ದಿನವಾಯಿತು. ಎಡಪಂಥೀಯ ವಿದ್ಯಾರ್ಥಿ ಸಂಘಟನೆ ಎಐಎಸ್‌ಎಫ್ ಸದಸ್ಯನಾಗಿದ್ದೆ ಎಂದು ಹೇಳಿಕೊಳ್ಳುವ ನಾರಾಯಣಮೂರ್ತಿ ಅವರಿಗೆ ಮೇ ದಿನದ ಈ ಮಹತ್ವ ನೆನಪಿಲ್ಲವೇ?

ದಿನಕ್ಕೆ 8, ವಾರಕ್ಕೆ 48 ಗಂಟೆ ಮೀರದ ದುಡಿಮೆಯ ಬೇಡಿಕೆಯನ್ನು ಮೊದಲ ಮಹಾಯುದ್ಧದ ಕೊನೆಗೆ, 1919ರ ಜುಲೈ 28ರಂದು ಸಹಿ ಹಾಕಿದ ವರ್ಸೈ ಒಪ್ಪಂದದಲ್ಲೇ ಸೇರಿಸಲಾಗಿತ್ತು. ಅದೇ ವರ್ಷಾಂತ್ಯಕ್ಕೆ ನಡೆದ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ (ಐಎಲ್‌ಒ) ಮೊದಲ ಸಮ್ಮೇಳನದ ನಿರ್ಣಯದ ಮೊದಲಲ್ಲೇ ಇದನ್ನು ಘೋಷಿಸಲಾಯಿತು; 1930ರಲ್ಲಿ ನಡೆದ ಐಎಲ್‌ಒ ಸಮ್ಮೇಳನವು ಇದನ್ನು ಕಚೇರಿ ಹಾಗೂ ವಹಿವಾಟುಗಳ ನೌಕರರಿಗೂ ವಿಸ್ತರಿಸಿತು. ಭಾರತದಲ್ಲಿ 1948ರ ಕಾರ್ಖಾನೆಗಳ ಕಾಯ್ದೆ 7:51, ಕರ್ನಾಟಕ ಅಂಗಡಿಗಳು ಮತ್ತು ಸಂಸ್ಥೆಗಳ ಕಾಯ್ದೆ 1961ರ 3:7(1), ಮತ್ತು ವೃತ್ತಿ ಸುರಕ್ಷತೆ, ಆರೋಗ್ಯ ಮತ್ತು ದುಡಿಮೆ ನಿಬಂಧನೆಗಳು 2020, ಕಂಡಿಕೆ 25, 26 ಎಲ್ಲವೂ ಕೆಲಸದ ಅವಧಿಯನ್ನು ವಾರಕ್ಕೆ 48 ಗಂಟೆಗಳಿಗೆ ಸೀಮಿತಗೊಳಿಸಿವೆ; 8 ಗಂಟೆಗಳಿಗಿಂತ ಹೆಚ್ಚು ದುಡಿಸಿದರೆ ದುಪ್ಪಟ್ಟು ಭತ್ಯೆ ನೀಡಬೇಕೆಂದು ಷರತ್ತನ್ನೂ ವಿಧಿಸಿವೆ.

ಹಾಗಿರುವಾಗ, 70-90 ಗಂಟೆ ದುಡಿಯಬೇಕೆಂದು ಈ ಐಟಿ ದೈತ್ಯರು ನಿರ್ಭಿಡೆಯಿಂದ ಹೇಳುವುದಕ್ಕೆ ಕಾರಣವೇನು? ತಮ್ಮ ನೌಕರರಿಗೂ, ರಾಜಕೀಯ ಪಕ್ಷಗಳಿಗೂ ವಿಪರೀತ ಬುದ್ಧಿವಾದ ಹೇಳುವ ಈ ಕಂಪನಿಗಳು 90ರ ದಶಕದ ಆರಂಭದಲ್ಲಿ ಐಟಿ ಕ್ರಾಂತಿಯ ಹೊಸತನದ ದುರ್ಲಾಭವನ್ನು ಪಡೆದು ಸರ್ಕಾರಗಳಿಂದ ಭೂಮಿ, ಇತರ ಸೌಲಭ್ಯಗಳು, ಬಗೆಬಗೆಯ ವಿನಾಯಿತಿಗಳು ಎಲ್ಲವನ್ನೂ ಪಡೆದುಕೊಂಡವು. ಉದ್ಯೋಗಿಗಳ ದುಡಿಮೆಯ ಷರತ್ತುಗಳನ್ನು ತಿಳಿಸಬೇಕೆಂದು ವಿಧಿಸಿರುವ 1946ರ ಕೈಗಾರಿಕಾ ಉದ್ಯೋಗ (ಸ್ಥಾಯಿ ಆದೇಶಗಳು) ಕಾಯ್ದೆಯಿಂದಲೂ ಕರ್ನಾಟಕದ ಐಟಿ ಕಂಪನಿಗಳು 1999ರಿಂದಲೇ ವಿನಾಯಿತಿಯನ್ನು ಪಡೆದುಕೊಂಡವು. ಜೂನ್ 2024ರಲ್ಲಿ ಇದನ್ನು ಮತ್ತೆ 5 ವರ್ಷಗಳಿಗೆ ಮುಂದುವರಿಸಲಾಗಿದೆ. ಐಟಿ ಉದ್ಯೋಗಿಗಳ ಹಿತಾಸಕ್ತಿಗಳನ್ನು ಕಡೆಗಣಿಸಿ, ಮಾಲೀಕರಿಗೆ ಮಣೆ ಹಾಕುವಲ್ಲಿ ಕಾಂಗ್ರೆಸ್-ಬಿಜೆಪಿ ನಡುವೆ ಯಾವ ವ್ಯತ್ಯಾಸವೂ ಕಾಣುವುದಿಲ್ಲ. ಇಂಥ ವಿನಾಯಿತಿಗಳಿಂದಾಗಿಯೇ ಅತಿ ಕಡಿಮೆ ಸಂಬಳಕ್ಕೆ, ಹೆಚ್ಚುವರಿ ಭತ್ಯೆಯೂ ಇಲ್ಲದೆ, ಅತಿ ಹೆಚ್ಚು ದುಡಿಸುವುದರಲ್ಲಿ ಭಾರತದ ಐಟಿ ಕಂಪನಿಗಳು ಅಗ್ರಣಿಗಳಾಗಿವೆ.

ಶತಮಾನದ ಹಿಂದೆ 8 ಗಂಟೆಗಳಿಗಿಂತ ಹೆಚ್ಚು ದುಡಿಯೆವು ಎಂದು ಪ್ರತಿಭಟಿಸಿ ಕಾರ್ಮಿಕರು ಹುತಾತ್ಮರಾಗಿದ್ದರೆ, ಇಂದು ಅನೇಕರು ತಮ್ಮ ಎಳೆಯ ವಯಸ್ಸಿನಲ್ಲೇ ಕೆಲಸದ ಒತ್ತಡದಿಂದ ಹುತಾತ್ಮರಾಗುತ್ತಿದ್ದಾರೆ. ಮೂರ್ನಾಲ್ಕು ವರ್ಷಗಳಿಂದ ಐಟಿ, ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳ ಉದ್ಯೋಗಿಗಳು ಕೆಲಸದ ಒತ್ತಡ ತಾಳಲಾರದೆ ಸಾವಿಗೆ ಶರಣಾಗುತ್ತಿರುವ ವರದಿಗಳು ತಿಂಗಳಿಗೆ 2–3ರಂತೆ ಬರುತ್ತಿವೆ. ಭಾರತದಲ್ಲಿ ಆತ್ಮಹತ್ಯೆ ಪ್ರಕರಣಗಳು ವರ್ಷಕ್ಕೆ ಶೇ 4– ಶೇ 5ರಷ್ಟು ಹೆಚ್ಚುತ್ತಿದ್ದು, ಕೆಲಸದ ಒತ್ತಡಗಳು, ಖಿನ್ನತೆ, ಆತಂಕ, ಒಂಟಿತನಗಳು ಪ್ರಮುಖ ಕಾರಣಗಳಾಗಿವೆ. ಶೇ 80ಕ್ಕೂ ಹೆಚ್ಚು ಐಟಿ ಉದ್ಯೋಗಿಗಳು ಅಧಿಕ ಕೆಲಸದ ಒತ್ತಡ ಅನುಭವಿಸುತ್ತಿದ್ದು, ಶೇ 40ರಷ್ಟು ಮಂದಿ ಅದರಿಂದ ಖಿನ್ನತೆಗೂ, ಆತಂಕಕ್ಕೂ ಒಳಗಾಗುತ್ತಿದ್ದಾರೆಂದೂ ಶೇ 60ರಷ್ಟು ನಿದ್ರಾಹೀನತೆಯಿಂದ ಬಳಲುತ್ತಿದ್ದಾರೆಂದೂ ಇದರಿಂದಾಗಿ ಧೂಮಪಾನ ಹಾಗೂ ಮದ್ಯಪಾನದ ಚಟಗಳು ಹೆಚ್ಚುತ್ತಿವೆಯೆಂದೂ ಗಂಡ-ಹೆಂಡತಿಯರಿಗೆ ಬೆರೆಯುವುದಕ್ಕೂ ಆಗದೆ ವಿಚ್ಛೇದನಗಳು ಹೆಚ್ಚುತ್ತಿವೆಯೆಂದೂ ಅಧ್ಯಯನಗಳು ತೋರಿಸಿವೆ. ಇವುಗಳ ಮೂಲ ಕಾರಣವನ್ನು ಸರಿಪಡಿಸುವ ಬದಲು ಯೋಗಾಭ್ಯಾಸ, ದಿನಕ್ಕೊಂದರಂತೆ ಹುಟ್ಟುತ್ತಿರುವ ಬಾಬಾಗಳ ಉಪದೇಶ ಮುಂತಾದವುಗಳನ್ನು ಉದ್ಯೋಗಿಗಳ ಮೇಲೆ ಹೇರಲಾಗುತ್ತಿದೆ.

ಅತಿಯಾದ ಕೆಲಸದ ಒತ್ತಡಗಳಿಂದ ಯುವ ಜನರಲ್ಲಿ ಬೊಜ್ಜು, ಹೃದಯಾಘಾತ, ಹಠಾತ್ ಹೃದಯ ಸ್ತಂಭನ, ಮಿದುಳಿನ ಆಘಾತಗಳೂ ಹೆಚ್ಚುತ್ತಿವೆ. ಐಟಿಯ ಶೇ 90ಕ್ಕೂ ಹೆಚ್ಚು ಉದ್ಯೋಗಿಗಳಲ್ಲಿ ಅತಿಯಾದ ಕೆಲಸದಿಂದ ಕುತ್ತಿಗೆ, ಭುಜ, ಬೆರಳುಗಳ ನೋವು, ಕಣ್ಣಿನ ತೊಂದರೆ ಇತ್ಯಾದಿಗಳಾಗುವುದನ್ನು ಗುರುತಿಸಲಾಗಿದೆ. 7.40 ಲಕ್ಷ ನೌಕರರಲ್ಲಿ ನಡೆಸಿದ ಅಧ್ಯಯನದಂತೆ, ವಾರಕ್ಕೆ 55 ಗಂಟೆಗಳಿಗಿಂತ ಹೆಚ್ಚು ದುಡಿಯುವವರಲ್ಲಿ 2000ನೇ ವರ್ಷಕ್ಕೆ ಹೋಲಿಸಿದರೆ 2016ರ ವೇಳೆಗೆ ಹೃದಯಾಘಾತದ ಸಾವುಗಳಲ್ಲಿ ಶೇ 42ರಷ್ಟು ಮತ್ತು ಮಿದುಳಿನ ಆಘಾತದ ಸಾವುಗಳಲ್ಲಿ ಶೇ 19ರಷ್ಟು ಏರಿಕೆಯಾಗಿದೆ. ಐದು ವರ್ಷ ಪಾಳಿ ಬದಲಿಸುತ್ತಾ ಕೆಲಸ ಮಾಡುವವರಲ್ಲಿ ಹೃದಯಾಘಾತವು ಶೇ 7ರಷ್ಟು ಹೆಚ್ಚುತ್ತದೆ ಎನ್ನಲಾಗಿದೆ. ಕೊರೊನಾ ನೆಪದಲ್ಲಿ ಲಾಕ್‌ಡೌನ್ ಮಾಡಿ, ಮನೆಯಿಂದಲೇ ಕೆಲಸ ಎಂಬುದನ್ನು ಆರಂಭಿಸಿ, ಲಸಿಕೆಯನ್ನೂ ಕೊಟ್ಟು, ಜನರು ಮನೆಯಲ್ಲೂ ನೆಮ್ಮದಿಯಿಲ್ಲದೆ, ಸಾಮಾಜಿಕ ಸಂವಹನಗಳೂ ಇಲ್ಲದೆ, ಶೀಘ್ರ ತಿನಿಸುಗಳ ದಾಸರಾಗಿ, ಬೊಜ್ಜು ಬೆಳೆಸಿ, ಇನ್ನಷ್ಟು ಸಮಸ್ಯೆಗಳಿಗೀಡಾಗುವಂತಾಗಿದೆ.

ವಾರಕ್ಕೆ 55 ಗಂಟೆಗಳಿಗಿಂತ ಹೆಚ್ಚು ದುಡಿಯುವುದರಿಂದ ಗಂಭೀರವಾದ ಅಪಾಯ ಉಂಟಾಗಬಹುದು ಎಂದು ವಿಶ್ವ ಆರೋಗ್ಯ ಸಂಸ್ಥೆ, ಐಎಲ್‌ಒಗಳು ಎಚ್ಚರಿಕೆ ನೀಡಿವೆ. ಆದ್ದರಿಂದ ಸರ್ಕಾರವು ಈ ಐ.ಟಿ ಕಂಪನಿಗಳಿಗೆ ಕಾರ್ಮಿಕ ಕಾಯ್ದೆಗಳಿಂದ ನೀಡಿರುವ ಎಲ್ಲಾ ವಿನಾಯಿತಿಗಳನ್ನು ಕೂಡಲೇ ಹಿಂಪಡೆದು, ವಾರಕ್ಕೆ 48 ಗಂಟೆಗಳ ಮಿತಿಯನ್ನು ಕಡ್ಡಾಯ ಮಾಡಬೇಕು. ಉಡಾಫೆ ಹೇಳಿಕೆಗಳನ್ನು ನೀಡುವವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು. ದೇಶದ ಪ್ರಜೆಗಳ ನೆಮ್ಮದಿ ಹಾಗೂ ಆರೋಗ್ಯವೇ ದೇಶದ ಅಭಿವೃದ್ಧಿಯ ಮಾನಕವೇ ಹೊರತು ನಾಲ್ಕೈದು ಕಂಪನಿಗಳ ಕೋಟಿಗಟ್ಟಲೆ ಲಾಭವಲ್ಲ.

ಲೇಖಕ: ವೈದ್ಯ



ಮಹಿಳೆಯನ್ನು ಕೀಳಾಗಿ ಕಂಡದ್ದರ ಗುರುತು

ಹೆಂಡತಿ ಮುಖ ನೋಡುವ ಕೆಲಸಕ್ಕೆ ಬಾರದ ಕೆಲಸವನ್ನು ಮಾಡುತ್ತಾ ಭಾನುವಾರ ಕೂರುವ ಬದಲು ಅದೇ ಸಮಯವನ್ನು ದುಡಿದು ಸದುಪಯೋಗ ಮಾಡಿಕೊಳ್ಳಿ ಎಂಬುದು ಸುಬ್ರಹ್ಮಣ್ಯನ್ ಸಲಹೆ. ಗಂಡ ಹೆಂಡತಿ ಮುಖ ನೋಡೋದರಿಂದ ಕಾಸು ಹುಟ್ಟದೇ ಇರಬಹುದು. ಆದರೆ ಪ್ರೀತಿ ಹುಟ್ಟದೆ. ಪ್ರೀತಿ ಇಲ್ಲದ ಮೇಲೆ ಏನಿದ್ದೇನು ಫಲ?

• ಕುಸುಮಾ ಆಯರಹಳ್ಳಿ

'ಭಾನುವಾರ ನಿಮ್ಮಿಂದ ಕೆಲಸ ತೆಗೆಯಲು ಆಗದಿರೋ ಬಗ್ಗೆ ನನಗಂತೂ ಬಹಳ ಬೇಸರ ಇದೆ. ನನ್ನನ್ನು ಕೇಳಿದರೆ, ಖುಷಿಯಿಂದ ಭಾನುವಾರವೂ ಕೆಲ್ಸ ಮಾಡ್ತೀನಿ. ನೀವೆಲ್ಲ ಭಾನುವಾರ ಮನೇಲಿದ್ದು ಏನ್ಮಾಡ್ತೀರ? ಹೆಂಡ್ತಿ ಮುಖಾನೇ ಎಷ್ಟೊತ್ತೂ ಅಂತ ನೋಡ್ತಾ ಇರ್ತೀರ?'

- ಇದು ಎಲ್ ಆ್ಯಂಡ್ ಟಿ ಇನ್ಫೊಟೆಕ್ ಅಧ್ಯಕ್ಷ ಸುಬ್ರಹ್ಮಣ್ಯನ್ ಅವರ ಇತ್ತೀಚಿನ ಹೇಳಿಕೆ. ಇದಕ್ಕೆ ವಿರೋಧ ವ್ಯಕ್ತವಾಗತೊಡಗಿದಾಗ, 'ಅವರ ಮಾತನ್ನು ಸರಿಯಾಗಿ ಅರ್ಥೈಸಿಕೊಳ್ಳಿ, ಅವರು ಹೇಳಿದ್ದು ಆ ಅರ್ಥದಲ್ಲಲ್ಲ, ಹೆಚ್ಚು ಹೊತ್ತು ಕೆಲಸ ಮಾಡಿದಷ್ಟೂ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬಹುದೆಂಬ ಅರ್ಥದಲ್ಲಿ' ಎಂಬ ಸಮರ್ಥನೆಗಳು ಕಂಪನಿಯ ಮತ್ತು ಅವರ ಹಿತಚಿಂತಕರಿಂದ ಬಂದವು. ಪದಗಳಿಗೆ ಅರ್ಥಗಳನ್ನು ಹಚ್ಚಬಹುದು. ಅದರ ಹಿಂದಿನ ಧ್ವನಿಗೆ? ಹೆಚ್ಚು ಕೆಲಸ ಮಾಡಿರಿ ಎಂಬುದು ಅವರ ಉದ್ದೇಶದಲ್ಲೂ ಬಳಸಿದ ಪದಗಳಲ್ಲೂ ಇದ್ದ ಅರ್ಥವಾದರೆ, ಹೆಂಡತಿಯ ಮುಖ ನೋಡುವ ಮಾತು ಬಂದದ್ದು ಅವರಿಗೇ ಗೊತ್ತಿಲ್ಲದೆ ಸೇರಿಹೋಗಿರಬಹುದಾದ ಮನಃಸ್ಥಿತಿಯಿಂದ. ಪದದಾಚೆಯ ಧ್ವನಿಯಲ್ಲಿದ್ದದ್ದು 'ಹೆಂಡತಿಯಾದವಳ ಮುಖ ನೋಡುತ್ತಾ ಕೂರುವುದೊಂದು ನಿಷ್ಪ್ರಯೋಜಕ ಕೆಲಸ' ಎಂಬ ಅರ್ಥ. ಸುಬ್ರಹ್ಮಣ್ಯನ್ ಅವರು ಕೊನೆಯ ಸಾಲುಗಳನ್ನು ಹೇಳುವಾಗಿನ ಅವರ ದೇಹಭಾಷೆ ಕೂಡ ಎರಡನೇ ಅರ್ಥದ ನಿಜವಾದ ಭಾವವನ್ನೇ ಹೇಳುತ್ತದೆ.

ಸುಬ್ರಹ್ಮಣ್ಯನ್ ಅವರ ಕಂಪನಿಯ ಕೆಲಸಗಾರರು ಪ್ರತಿದಿನವೂ ಆಫೀಸಿನಲ್ಲಿ ನೆಮ್ಮದಿಯಾಗಿ ದುಡಿಯಬೇಕಾದರೆ, ಅಡುಗೆ, ಬಟ್ಟೆ, ಮನೆಯ ಸ್ವಚ್ಛತೆ, ಮಕ್ಕಳ ಓದು, ಹವ್ಯಾಸ, ಬಂಧುಗಳು- ಇದೆಲ್ಲವನ್ನೂ ನಿಭಾಯಿಸಲು ಮನೆಯಲ್ಲಿ ಹೆಂಡತಿಯೂ ದುಡಿಯುತ್ತಿರುತ್ತಾಳೆ. ಯಾವ ವಾರವೂ ರಜೆಯೇ ಇಲ್ಲದ ನಿರಂತರ ದುಡಿಮೆ ಅದು. ಗೃಹಿಣಿಯರು ಈ ಕೆಲಸ ನಿರಾಕರಿಸಿ, ಮುಷ್ಕರ ಹೂಡಿದರೆ, ಎಲ್ ಆ್ಯಂಡ್ ಟಿಯೂ ಸೇರಿದಂತೆ ಅನೇಕ ಕಂಪನಿಗಳ ಕೆಲಸದಲ್ಲಿ ಏರುಪೇರಾದೀತು. ಆ ಲೆಕ್ಕದಲ್ಲಿ ಕಂಪನಿಗಾಗಿ ಪರೋಕ್ಷವಾಗಿ ಹೆಂಡತಿಯೂ ದುಡಿಯುತ್ತಿರುತ್ತಾಳೆ; ಸಂಬಳವಿಲ್ಲದೇ... ಹೊರಗೆ ದುಡಿವ ಗಂಡ, ಒಳಗೆ ದುಡಿವ ಹೆಂಡತಿ ಇವೆರಡೂ ಪರಸ್ಪರ ಪೂರಕ. ಯಾವುದೂ ನಿಕೃಷ್ಟವಲ್ಲ. ತಾವೂ ದುಡಿವ ಮಹಿಳೆಯರಾದರಂತೂ ಅವರ ಪಾಡು ಹೇಳತೀರದು. ಮನೆಯನ್ನೂ ತಮ್ಮ ವೃತ್ತಿಯನ್ನೂ ಸಂಭಾಳಿಸುವ (ಮುಟ್ಟಿನ ಚಕ್ರದೊಂದಿಗೆ) ಮಹಿಳೆಯರು ಈ ದೇಶಕ್ಕೆ ನೀಡುತ್ತಿರುವ ಕೊಡುಗೆ ಅಸಾಧಾರಣವಾದುದು. ಆಫೀಸಿನದು ಮಾತ್ರವಲ್ಲ; ಕೃಷಿ, ಕಾರ್ಖಾನೆ, ಕೂಲಿ ಕೆಲಸ ಹೀಗೆ ಮನೆಯಲ್ಲೂ ಹೊರಗೂ ದುಡಿಯುತ್ತಾ ದಣಿಯುವ ಮಹಿಳೆಯರಿದ್ದಾರೆ. ಒಂದು ವರ್ಗದ ಜನ ಈಗ ಎಚ್ಚೆತ್ತುಕೊಂಡಿದ್ದಾರೆ. ಮನೆಕೆಲಸದಲ್ಲೂ ಸಮಭಾಗಿಯಾಗುವ ಆಲೋಚನೆಗೆ ಈಗೀಗ ಒಗ್ಗಿಕೊಳ್ಳುತ್ತಿದ್ದಾರೆ. ಆದರೆ, ಎಲ್ಲ ಕಡೆಯೂ ಅದನ್ನು ನಿರೀಕ್ಷಿಸಲಾಗದು. ಹೀಗಿರುವಾಗ 'ಎಷ್ಟೂಂತ ಹೆಂಡ್ತಿ ಮುಖ ನೋಡ್ತಾ ಕೂತಿರ್ತೀರ?' ಅನ್ನೋ ಮಾತು, ಆ ಮುಖದ ಹಿಂದಿನ ಜೀವಗಳನ್ನು ನಿಕೃಷ್ಟವಾಗಿ ಕಂಡದ್ದರ ಗುರುತು.

ಅವರ ಮಾತನ್ನು ಪೂರ್ತಿ ಕೇಳಿದಾಗ ಅಲ್ಲಿ ಹೆಂಡತಿ ಮುಖ ನೋಡೋದರ ಬಗ್ಗೆ ಮಾತ್ರವಲ್ಲ, ಅವರೂ ಎಷ್ಟೂಂತ ನಿಮ್ಮ ಮುಖಾ ನೋಡೋದು ಅಂತಲೂ ಇದೆ. ದಿನಾ ನೋಡೋ ಅದೇ ಮುಖಗಳನ್ನು ಭಾನುವಾರವೂ ನೋಡೋ ಬದಲು ಆಫೀಸಿಗೆ ಬಂದು ಕೆಲಸ ಮಾಡಬಾರದೇ ಅನ್ನೋದು ಅವರ ಅಭಿಪ್ರಾಯ. ಇದು ಕೂಡ ಸರಿಯಲ್ಲ. ಸಮಾಜದ ಯಾವುದೇ ಸ್ತರವಿರಲಿ, ಗಂಡ – ಹೆಂಡತಿ ಇಬ್ಬರೂ ದುಡಿಯಬೇಕಾದ ಅನಿವಾರ್ಯ ಸ್ಥಿತಿ ಅನೇಕರಿಗಿದೆ. ದಿನಾ ಬೆಳಗಾಗೆದ್ದರೆ ಗಂಡ, ಹೆಂಡತಿ, ಮಕ್ಕಳು ಎಲ್ಲರೂ ಯುದ್ಧೋಪಾದಿಯಲ್ಲಿ ಸಿದ್ಧರಾಗಿ ಓಡೂ ಓಡೂ ಓಡೂ ಅಂತ ಮೆಟ್ರೊ ರೈಲಿಗಿಂತ ತುಸು ಹೆಚ್ಚೇ ವೇಗದಲ್ಲಿ, ಧಾವಂತದಲ್ಲಿ ಓಡುತ್ತಿರುತ್ತದೆ ಬದುಕು. ಮನೆಕೆಲಸ, ಹೊರಗಿನ ಕೆಲಸ ಎರಡನ್ನೂ ಸರಿದೂಗಿಸುತ್ತಾ, ಭಾನುವಾರಕ್ಕಾಗಿಯೇ ಎಷ್ಟೋ ಕೆಲಸಗಳು ಕಾದು ಕುಳಿತಿರುತ್ತವೆ. ಕೆಲಸವಿರಲಿ, ಧಾವಂತವೆಷ್ಟೆಂದರೆ ಎಷ್ಟೋ ಮನೆಗಳಲ್ಲಿ ಗಂಡ ಹೆಂಡತಿ ಮಕ್ಕಳು ಸರಿಯಾಗಿ ಮುಖ ನೋಡುವುದಕ್ಕಾಗೋದೇ ಭಾನುವಾರ. ಅವತ್ತೂ ಮನೇಲಿರೋದ್ಯಾಕೆ? ಬನ್ನಿ ಆಫೀಸಿಗೆ ಅನ್ನುವ ಮಾತಿಗೆ ಅರ್ಥವಿದೆಯೇ?

ನಮ್ಮ ಫೋನು, ಲ್ಯಾಪ್‌ಟಾಪ್‌ಗಳನ್ನು ಆಗಾಗ ಚಾರ್ಜ್ ಮಾಡಿಕೊಳ್ಳುತ್ತೇವೆ. ಚಾರ್ಜ್ ಮಾಡದೇ ಒಂದೇ ಸಮ ಬಳಸಿದರೆ? ಮನುಷ್ಯರೂ ಹಾಗೆಯೇ. ದೈಹಿಕ ದುಡಿಮೆಯೇ ಆಗಿರಲಿ, ಕಂಪ್ಯೂಟರ್ ಕೆಲಸವೇ ಆಗಿರಲಿ, ನಿರಂತರ ಕೆಲಸ ಮಾಡುತ್ತಿದ್ದರೆ, ಒತ್ತಡ ಮತ್ತು ಏಕತಾನತೆಯಿಂದ ದೇಹ ಮನಸ್ಸು ದಣಿದು, ಉತ್ಸಾಹಹೀನವಾಗುತ್ತವೆ. ವಾರದಲ್ಲೊಮ್ಮೆ ಗಡಿಯಾರದ ಹಂಗಿರದೇ, ಓಡುವ ಧಾವಂತವಿರದೇ ಕಾಲು ಚಾಚಿ ಕೂತು, ಮನೆಯಲ್ಲಿ ಕುಟುಂಬದೊಂದಿಗೆ ಕಳೆದರೆ... ಅದುವೇ ಮನಸ್ಸು, ದೇಹಗಳ ಪಾಲಿನ ರೀಚಾರ್ಜ್! ಮತ್ತೊಂದು ವಾರದ ಓಡುವಿಕೆಗೆ ಕೂಡಿಕೆಯಾಗುವ ಹೊಸತ್ರಾಣ. ಸುಬ್ರಹ್ಮಣ್ಯನ್ ಹೇಳಿದಂತೆ ಭಾನುವಾರವೂ ರಜೆ ಬೇಡವೆಂದರೆ, 365 ದಿನವೂ ಕೆಲಸ ಮಾಡುತ್ತಿದ್ದರೆ ಸುಸ್ತಾದ ದೇಹ–ಮನಸ್ಸುಗಳು ಆಫೀಸಿನಲ್ಲಿ ತೂಕಡಿಸುತ್ತವೆ ಅಷ್ಟೇ. ದಣಿದ ದೇಹ, ಮನಸ್ಸುಗಳು ಯಾವ ದೇಶವನ್ನೂ ಮುನ್ನಡೆಸಲಾರವು. ಕೆಲಸದ ಅವಧಿಗಿಂತ ಕೆಲಸದ ಗುಣಮಟ್ಟ ಮುಖ್ಯ.

ಸುಬ್ರಹ್ಮಣ್ಯನ್ ಅವರು ತಮ್ಮ ಕಂಪನಿಯ ಕೆಲಸಗಾರರ ಕುರಿತು, ಬಿಡುವಿರದೇ ದುಡಿದು ದೇಶ ಕಟ್ಟೋಣ ಅನ್ನುತ್ತಾರೆ. ಆದರೆ, ದಿನವೊಂದಕ್ಕೆ ಲೆಕ್ಕವಿರದಷ್ಟು ಮಾನವ ಗಂಟೆಗಳು ಸೋರಿಹೋಗುತ್ತಿವೆ ಇಲ್ಲಿ. ಸರ್ಕಲ್ ಕೂಲಿಗಳು ಅಂತ ಎಲ್ಲ ನಗರಗಳಲ್ಲೂ ಸಾಮಾನ್ಯವಾಗಿ ಇರುತ್ತಾರೆ. ಗಮನಿಸಿ; ದಿನವೂ ಬೆಳಿಗ್ಗೆ ನಿರ್ದಿಷ್ಟ ಸಮಯಕ್ಕೆ ನಿರ್ದಿಷ್ಟ ಜಾಗದಲ್ಲಿ ಬಂದು ನಿಂತಿರುತ್ತಾರೆ. ಯಾರೋ ಬಂದು ಅವರನ್ನು 'ಇಷ್ಟು ಜನ ಬೇಕು' ಅಂತ ಕರೆದುಕೊಂಡು ಹೋಗುತ್ತಾರೆ. ಕೂಲಿ ಇಷ್ಟು, ಅಷ್ಟು ಅನ್ನುವ ಚೌಕಾಸಿಯೂ ಇರುತ್ತದೆ. ಪ್ರತಿದಿನವೂ ಯಾರೋ ಬರುತ್ತಾರೆ ಅಂತೇನಿಲ್ಲ. ಮತ್ತು ಸೂರ್ಯ ಏರುತ್ತಲೂ 'ಬೆಲೆ' ಇಳಿಯುತ್ತಾ ಹೋಗುತ್ತದೆ. ಈ ಆಟದಲ್ಲಿ ಎಲ್ಲ ದಿನವೂ ಕೆಲಸ ಇರುವುದಿಲ್ಲ. ಇದೊಂದು ಉದಾಹರಣೆಯಷ್ಟೇ. ಪದವಿ ಓದಿದ ಎಷ್ಟು ಜನರಿಗೆ ಏನು ಉದ್ಯೋಗಾವಕಾಶಗಳಿವೆ? ಅವರೆಲ್ಲ ಏನು ಮಾಡುತ್ತಿದ್ದಾರೆ? ಹಾಗಿದ್ದರೆ ಪದವಿಗೆ ವ್ಯಯಿಸಿದ ಸಮಯ? ಹೀಗೆ ಕೆದಕುತ್ತಾ ಹೋದರೆ ಸುಬ್ರಹ್ಮಣ್ಯನ್ ಕ್ಯಾಲ್ಕ್ಯುಲೇಟರ್ ಲೆಕ್ಕತಪ್ಪುವಷ್ಟು ಸಮಯ ಮತ್ತು ಮಾನವಶಕ್ತಿ ವ್ಯರ್ಥವಾಗುತ್ತಿದೆ. ದೊಡ್ಡವರು ಈ ದಿಕ್ಕಿನಲ್ಲಿ ಯೋಚಿಸಬೇಕು.

ಹೆಂಡತಿ ಮುಖ ನೋಡುವ ಕೆಲಸಕ್ಕೆ ಬಾರದ ಕೆಲಸವನ್ನು ಮಾಡುತ್ತಾ ಭಾನುವಾರ ಕೂರುವ ಬದಲು ಅದೇ ಸಮಯವನ್ನು ದುಡಿದು ಸದುಪಯೋಗ ಮಾಡಿಕೊಳ್ಳಿ ಎಂಬುದು ಅವರ ಸಲಹೆ. ಗಂಡ ಹೆಂಡತಿ ಮುಖ ನೋಡೋದರಿಂದ ಕಾಸು ಹುಟ್ಟದಿರಬಹುದು. ಆದರೆ ಪ್ರೀತಿ ಹುಟ್ಟದೆ. ಪ್ರೀತಿಯೇ ಇಲ್ಲದ ಮೇಲೆ ಏನಿದ್ದೇನು ಫಲ ಹೇಳಿ?

ಲೇಖಕಿ: ಕಥೆಗಾರ್ತಿ





ರಚಿತಾ ರಾಮ್, ಶ್ರೀನಗರ ಕಿಟ್ಟಿ

ನಿರೀಕ್ಷೆ ತಲುಪದ ಪ್ರೇಮಕಥೆ

ದಶಕದ ಹಿಂದೆ ತೆರೆಕಂಡಿದ್ದ ನಾಗಶೇಖರ್ ನಿರ್ದೇಶನದ 'ಸಂಜು ವೆಡ್ಸ್ ಗೀತಾ' ಸಿನಿಮಾ ತನ್ನ ಕಥೆ, ಹಾಡುಗಳಿಂದ ಜನರನ್ನು ಸೆಳೆದಿತ್ತು. ಇದೇ ಶೀರ್ಷಿಕೆಯನ್ನಿಟ್ಟುಕೊಂಡು ನಾಗಶೇಖರ್ ಅವರೇ 'ಸಂಜು ವೆಡ್ಸ್ ಗೀತಾ–2' ತೆರೆ ಮೇಲೆ ತಂದಿದ್ದಾರೆ. ಆದರೆ ಇದು ನಿರೀಕ್ಷೆಯನ್ನು ತಣಿಸಿಲ್ಲ.

ಇಲ್ಲಿ ಸಿನಿಮಾ ಶೀರ್ಷಿಕೆ ಮರುಬಳಕೆಯಾಗಿದೆಯಷ್ಟೇ. ಮೊದಲ ಭಾಗಕ್ಕೂ ಈ ಭಾಗದ ಕಥೆಗೂ ಯಾವುದೇ ಸಂಬಂಧವಿಲ್ಲ. ರೇಷ್ಮೆ ಬೆಳೆಗಾರರ ಸಂಕಷ್ಟ ಎಂಬ ಒಂದು ಎಳೆಯನ್ನು ಇಟ್ಟುಕೊಂಡು ಅದಕ್ಕೆ ಕಮರ್ಷಿಯಲ್ ಸ್ಪರ್ಶ ನೀಡಿದ್ದಾರೆ ನಿರ್ದೇಶಕರು. 'ಸಂಜು' (ಶ್ರೀನಗರ ಕಿಟ್ಟಿ) ಶಿಡ್ಲಘಟ್ಟದ ರೇಷ್ಮೆ ಕೈಮಗ್ಗ ವ್ಯಾಪಾರಿ. ಗೀತಾ (ರಚಿತಾ ರಾಮ್) ಖ್ಯಾತ ಉದ್ಯಮಿಯ ಮಗಳು. ಸಂಜು ಕೊಟ್ಟ ರೇಷ್ಮೆ ಸೀರೆಯೊಂದರಿಂದ ಗೀತಾ 'ಮಿಸ್ ಕರ್ನಾಟಕ' ಸ್ಪರ್ಧೆಯಲ್ಲಿ ಗೆಲ್ಲುತ್ತಾಳೆ. ಅಲ್ಲಿಂದ ಸಂಜು ಮೇಲೆ ಗೀತಾಳಿಗೆ ಪ್ರೀತಿ ಹುಟ್ಟುತ್ತದೆ. ಅವರಿಬ್ಬರೂ ಒಂದಾಗುತ್ತಾರೆಯೇ? ಗೀತಾ ಕನಸು ಏನಾಗುತ್ತದೆ? ಎನ್ನುವುದೇ ಚಿತ್ರದ ಮುಂದಿನ ಕಥೆ.

ಅನನುಕ್ರಮಣಿಕೆಯ(non-linear) ನಿರೂಪಣೆಯಲ್ಲಿ ಚಿತ್ರದ ಕಥೆಯಿದೆ. ಚಿತ್ರದ ಮೊದಲಾರ್ಧದ ಚಿತ್ರಕಥೆ ಪೇಲವವಾಗಿದೆ. ಸಂಭಾಷಣೆಯಲ್ಲೂ ತೂಕವಿಲ್ಲ. 'ಸಂಜು ವೆಡ್ಸ್ ಗೀತಾ'ದಲ್ಲಿ ಗೆದ್ದಂಥ ರೀತಿಯ ಕಥೆ, ಬಿಗಿಯಾದ ನಿರೂಪಣೆ ಇಲ್ಲಿಲ್ಲ. ಅದೇ ರೀತಿಯ ಎಳೆಯಷ್ಟೇ ಇದೆ. ಮೊದಲ ಭಾಗಕ್ಕೂ ಎರಡನೇ ಭಾಗದ ಕೆಲ ಸನ್ನಿವೇಶಗಳಿಗೂ ಸಾಮ್ಯತೆ ಇದೆ. ಮೊದಲಾರ್ಧದಲ್ಲಿ ಚಿತ್ರಕಥೆಯನ್ನು ಎಳೆದಾಡಲಾಗಿದೆ. ಇದು ತಾಳ್ಮೆ ಪರೀಕ್ಷಿಸುತ್ತದೆ. ಮಧ್ಯಂತರದ ಬಳಿಕ ಕಥೆಗೆ ತಿರುವು ಸಿಗುತ್ತದೆ ಎಂದು ಊಹಿಸಿದರೆ ಅದೂ ಹುಸಿ. ಸ್ವಿಟ್ಜರ್ಲೆಂಡ್‌ನ ಸನ್ನಿವೇಶಗಳು ಹೊರದೇಶದ ಶೂಟಿಂಗ್‌ಗಷ್ಟೇ ಸೀಮಿತವಾಗಿದೆ.

ಶ್ರೀನಗರ ಕಿಟ್ಟಿ ಹಾಗೂ ಸಂಪತ್ ರಾಜ್ ಅವರ ಪಾತ್ರದ ಬರವಣಿಗೆ ಬಹಳ ಕೃತಕವಾಗಿದೆ. ಕಥೆಯಲ್ಲಿ ರಚಿತಾ ರಾಮ್ ಪಾತ್ರಕ್ಕೆ ಹೆಚ್ಚಿನ ತೆರೆ ಅವಧಿಯಿದ್ದು, ಇದನ್ನು ಅವರು ಸಮರ್ಥವಾಗಿ ನಿಭಾಯಿಸಿದ್ದಾರೆ. ಆದರೆ ಸೂಕ್ತವಾದ ಕಥೆಯ ಕೊರತೆ ಈ ಪಾತ್ರಕ್ಕೆ ಅಡೆತಡೆಯಾದಂತಿದೆ. ಸಾಧು ಕೋಕಿಲ ಅವರ ಪಾತ್ರದ ಬರವಣಿಗೆ ಅವರ ಹಾಸ್ಯದ ಅಸ್ತ್ರವನ್ನೇ ವ್ಯರ್ಥವಾಗಿಸಿದೆ. ರಾಗಿಣಿ ದ್ವಿವೇದಿ ಪಾತ್ರದ ಪ್ರವೇಶ ಯಾವ ಕಾರಣಕ್ಕೋ ತಿಳಿಯದು.

ಈ ಹಿಂದೆ ಕನ್ನಡದಲ್ಲೇ ಬಂದಿದ್ದ 'ಕ್ಷೇತ್ರಪತಿ' ಸಿನಿಮಾ ರೈತರ ಆರ್ಥಿಕ ಸ್ಥಿತಿ, ವ್ಯವಸ್ಥೆಯ ಕುತಂತ್ರಗಳು, ಕಾರ್ಪೊರೇಟ್ ಕಂಪನಿಗಳ ಹಿಡಿತ, ದಲ್ಲಾಳಿಗಳ ಆಟ ಮುಂತಾದವುಗಳನ್ನು ಕಮರ್ಷಿಯಲ್ ವೇದಿಕೆಯಡಿ ತಂದು ಒಂದು ಹಂತಕ್ಕೆ ಗೆದ್ದಿತ್ತು. ಆದರೆ ಈ ಸಿನಿಮಾದ ಕಥೆ ರೇಷ್ಮೆ ಬೆಳೆಗಾರರ ಸಂಕಷ್ಟವನ್ನು ಹೇಳಬೇಕು ಎಂದು ಹೊರಟು ಒಂದೆರಡು ದೃಶ್ಯಗಳಲ್ಲಷ್ಟೇ ಉಲ್ಲೇಖವಾಗಿ ನಂತರ ದಾರಿ ತಪ್ಪುತ್ತದೆ. ಈ ವಿಷಯಕ್ಕೆ ಹೆಚ್ಚಿನ ಒತ್ತು ಕೊಡದೆ ಕೊನೆಯಲ್ಲಿ ಸಂಜು ಮತ್ತು ಗೀತಾ ನಡುವಿನ ಪ್ರೀತಿಗಷ್ಟೇ ಸೀಮಿತವಾಗುತ್ತದೆ. ಸಿನಿಮಾದುದ್ದಕ್ಕೂ ಭಾವನಾತ್ಮಕ ದೃಶ್ಯಗಳ ಬರವಣಿಗೆಯೂ ತೆಳುವಾಗಿದೆ. ಪದೇ ಪದೇ ಗುನುಗುವಂತಹ ಹಾಡುಗಳು ಎರಡನೇ ಭಾಗದ ಕೊರತೆ. ಸತ್ಯ ಹೆಗಡೆ ಛಾಯಾಚಿತ್ರಗ್ರಹಣ ಸಿಡ್ಜರ್ಲೆಂಡ್ ಅನ್ನು ಅದ್ಭುತವಾಗಿ ತೋರಿಸಿದೆ. ಮೊದಲಾರ್ಧದಲ್ಲಿ ಡಬ್ಬಿಂಗ್ ಸಮಸ್ಯೆ ತೆರೆ ಮೇಲೆ ಸ್ಪಷ್ಟವಾಗಿ ಗೋಚರಿಸುತ್ತದೆ. ಕೆಲವೆಡೆ ವಿಎಫ್‌ಎಕ್ಸ್ ಗುಣಮಟ್ಟ ಕಳಪೆಯಾಗಿದೆ.

ಅಭಿಲಾಷ್ ಪಿ.ಎಸ್.

ನಾವು ನೋಡಿದ ಸಿನಿಮಾ


ಸಂಜು ವೆಡ್ಸ್ ಗೀತಾ–2 (ಕನ್ನಡ)

- **ನಿರ್ದೇಶನ:** ನಾಗಶೇಖರ್
- **ನಿರ್ಮಾಣ:** ಛಲವಾದಿ ಕುಮಾರ್
- **ತಾರಾಗಣ:** ಶ್ರೀನಗರ ಕಿಟ್ಟಿ, ರಚಿತಾ ರಾಮ್, ಸಂಪತ್ ರಾಜ್, ಸಾಧುಕೋಕಿಲ, ತಬಲಾ ನಾಣಿ, ರಂಗಾಯಣ ರಘು ಮತ್ತಿತರರು

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5926

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1. ಹೆದರಬೇಡ ರಕ್ಷಿಸುತ್ತೇನೆಂದು ಧೈರ್ಯ ಕೊಡುವುದು (5)
3. ನಿಸರ್ಗದಲ್ಲೇ ಪುಸ್ತಕದ ಅಧ್ಯಾಯವನ್ನು ಹುಡುಕಿ! (2)
4. ಅಡಗಿಕೊಳ್ಳಲು ಸೂಕ್ತವಾದ ಕಾಡು! (3)
5. ಹೆಬ್ಬೆರಳಿನ ಪಕ್ಕದ ಬೆರಳು (3)
7. ಕಮ್ಮಾರನ ಕೈ! (3)
8. ರಭಸವಾಗಿ ಹರಿಯುತಿರುವ ದ್ರವ! (2)
10. ತಳವಾರ ಹಿಡಿದಿರುವ ಲೋಹ! (3)
11. ಸುಗಮವಾಗಿ ಕಿತ್ತಿರುವ ಹೂವು (2)
13. ಕಾದಲನ ಹತ್ತಿರ ಕಳೆದ ವೇಳೆ (2)
14. ಮಣಿ ಧರಿಸಿದ ಚಲುವೆ ಉಲ್ಟಾ ನಿಂತಿದ್ದಾಳಲ್ಲಾ! (3)
15. ರಥದಲ್ಲಿ ಕುಳಿತು ಯುದ್ಧಮಾಡುವವನು (3)
16. ಪಥದಲ್ಲಿ ಮಾಡಿದ ಪ್ರತಿಜ್ಞೆ (2)
17. ಪ್ರಾಣವಾಯು ಇಲ್ಲಿದೆ (5)

ಮೇಲಿಂದ ಕೆಳಕ್ಕೆ

2. ಬೇರೆಯ ಜನ್ಮ (4)
3. ಸರದಲ್ಲೇ ವಿವರಗಳನ್ನೊಳಗೊಂಡುದುದನ್ನು ಹುಡುಕಿ! (4)
4. ಅಧಿಕಾರಯುತವಾಗಿ ಆಡುವ ಮಾತು (6)
6. ಗೊತ್ತಾದ ಕಾಲಕ್ಕೆ ಹೊರಬರುವ ಪತ್ರಿಕೆ (6)
7. ಇನ್ನೂ ಕರು ಹಾಕದೇ ಇರುವ ಹಸು (3)
9. ಫಲವನ್ನು ಹೊಂದಿದುದು (3)
12. ಮನಸ್ಸಿನ ಬಯಕೆ (4)
13. ಪಿತೂರಿ ಕೆಲಸ ನಡೆಯುವ ಸ್ಥಳ (4)

5925ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ನಿಶ್ವಾಸ 3.ಗಾಬರಿ 5.ಭಿನ್ನಾಭಿಪ್ರಾಯ 7.ಎರಕ 8.ಕಹಳೆ 9.ಓರಿಗೆ 11.ಗರತಿ 13.ಸುಮ್ಮಾನ 15.ಶುಕ್ತಿಕೆ 16.ವಿಮಾನಯಾನ 17.ಹುಯಿಲು 18.ಕಷಾಯ

ಮೇಲಿಂದ ಕೆಳಕ್ಕೆ: 2.ಸಭಿಕ 3.ಗಾಯಕ 6.ಭಿಕಾರಿ 9.ಓದುಗ 10.ಗೆಳತಿ 12.ರಸನ 14.ನವಿಲು 15.ಶುನಕ

ಸುಡೊಕು 6311

3		2	1		4		6	
							3	2
7			6		2	5		
2					3			5
				4		2	9	
			9					1
	4		2				8	
9				7	8		5	
	6			5		4	2	9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6310 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜನವರಿ 18, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ಪಂಚಮಿ ಅಹೋರಾತ್ರ ನಕ್ಷತ್ರ: ಪೂರ್ವಫಲ್ಗುನಿ ಗಂ. 14-52 ಯೋಗ: ಶೋಭನ ಗಂ. 25-16 ಕರಣ: ಕೌಲವ ಗಂ. 18-27, ಮಕರ ಮಾಸದ 04 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 3.

ರಾಹುಕಾಲ : ಬೆಳಿಗ್ಗೆ 09-00 – 10-30

ಸೂರ್ಯೋದಯ : 07-01 ಸೂರ್ಯಾಸ್ತ : 06-21

ಮುಸ್ಲಿಂ ದಿನಾಂಕ : 17 ರಜಬ್

ಅದೃಷ್ಟ ಸಂಖ್ಯೆ : 4, 2

ಮೇಷ: ಕಟ್ಟಡ ನಿರ್ಮಾಣದ ಗುತ್ತಿಗೆಯನ್ನು ಪಡೆಯುವವರು ಆಮೂಲಾಗ್ರ ಚಿಂತನೆ ನಡೆಸಿ, ಒಪ್ಪಿಕೊಳ್ಳುವುದು ಸೂಕ್ತ. ಸ್ಥಾನ ಬದಲಾವಣೆಯಿಂದ ಮನಸ್ಸಿಗೆ ನೆಮ್ಮದಿಯ ವಾತಾವರಣ ಸೃಷ್ಟಿಯಾಗುವುದು.

ವೃಷಭ: ಆರೋಗ್ಯದ ವಿಷಯದಲ್ಲಿ ನಿಮ್ಮ ಗೋಚರಕ್ಕೆ ಬಂದ ಸಮಸ್ಯೆಗಳನ್ನು ಗುರುತಿಸಿಕೊಂಡು ಅದನ್ನು ಪರಿಹರಿಸುವ ಬಗೆಯನ್ನು ಕಂಡುಹಿಡಿದರೆ ಉತ್ತಮ. ಗೌರವಯುತವಾದಂಥ ಸ್ಥಾನಮಾನಗಳು ನಿಮ್ಮದಾಗಲಿವೆ.

ಮಿಥುನ: ನಿರ್ಧರಿಸಿದ ನಿಲುವಿನಿಂದ ಹಿಂದೆ ಸರಿಯುವ ಯೋಚನೆ ಮಾಡಬೇಡಿ. ದೇವಿ ಕೃಪಾಕಟಾಕ್ಷ ಇರುವುದರಿಂದ ಕಾರ್ಯದಲ್ಲಿ ತೊಂದರೆ ಇರುವುದಿಲ್ಲ. ಕುಟುಂಬ ವರ್ಗದಲ್ಲಿ ಆರೋಗ್ಯ ಉತ್ತಮವಾಗಿ ಇರುವುದು.

ಕರ್ಕಾಟಕ: ವಿಭಿನ್ನ ರೀತಿಯ ಕೆಲಸವೊಂದನ್ನು ಸ್ನೇಹಿತರೊಬ್ಬರು ನಿಮಗೊಪ್ಪಿಸಲಿದ್ದಾರೆ, ಒಪ್ಪಿಕೊಳ್ಳಿ. ಅದು ನಿಮಗೆ ಸಾಕಷ್ಟು ಆದಾಯ ಮತ್ತು ಹೆಸರನ್ನು ತರಲಿದೆ. ಹೊಸ ಮನೆ ಖರೀದಿಸುವ ಬಗ್ಗೆ ಮನೆಯಲ್ಲಿ ಮಾತುಕತೆ ನಡೆಯಲಿದೆ.

ಸಿಂಹ: ನಡೆಯದೇ ಇರುವ ತಪ್ಪುಗಳ ಅಪವಾದವನ್ನು ಹೊರಬೇಕಾಗಬಹುದು. ಮಗನ ಮದುವೆಯ ವಿಷಯಗಳು ಪ್ರಸ್ತಾಪಕ್ಕೆ ಬಂದು ಉತ್ತಮ ಕಡೆ ಸಂಬಂಧ ಕೂಡಿ ಬರಲಿದೆ. ಆರ್ಥಿಕವಾಗಿ ಖರ್ಚಿನ ಮೇಲೆ ನಿಯಂತ್ರಣವಿರಲಿ.

ಕನ್ಯಾ: ರಫ್ತು ವ್ಯವಹಾರವನ್ನು ಮಾಡುವವರಿಗೆ ತಾಪತ್ರಯಗಳು ಕಾಣಿಸಿಕೊಳ್ಳಲಿವೆ. ಆಪ್ತರ ಕಷ್ಟಗಳ ಕಡೆಗೆ ಗಮನ ಹರಿಸುವುದು ಸಾಧ್ಯವಾಗುತ್ತದೆ. ಮನರಂಜನೆಗಿಂತ ಕೆಲಸದ ಬಗ್ಗೆ ಗಮನವಿರಲಿ.

ತುಲಾ: ಇನ್ನೊಬ್ಬರಿಂದ ಹೇಳಿಸಿಕೊಂಡ ವಿಚಾರವನ್ನು ಅಗೌರವವೆಂದು ಭಾವಿಸಬೇಡಿ. ಸ್ನೇಹಿತರೊಂದಿಗೆ ಪ್ರವಾಸ ಮಾಡಬೇಕೆನಿಸಿದ್ದರೂ ಮುಂದೂಡುವುದು ಉತ್ತಮವೆನಿಸಲಿದೆ. ವಿದ್ಯಾಕ್ಷೇತ್ರದವರಿಗೆ ಮನ್ನಣೆ ಸಿಗಲಿದೆ.

ವೃಶ್ಚಿಕ: ಸಂಗೀತಗಾರರಿಗೆ ಮತ್ತು ಕ್ರೀಡಾಪಟುಗಳಿಗೆ ಉತ್ತಮ ಅವಕಾಶ ಸಿಗಲಿದೆ. ಸಜ್ಜನರ ಒಡನಾಟದಿಂದ ಯಶೋಭಿವೃದ್ಧಿ ಉಂಟಾಗಲಿದೆ. ಆರಕ್ಷಕ ಅಧಿಕಾರಿಗಳಿಗೆ ಕೆಲಸಗಳ ಒತ್ತಡ ಕಡಿಮೆಯಾಗಲಿದೆ.


ಧನು: ಅನವಶ್ಯಕ ಪ್ರಯಾಣ ಖರ್ಚು-ವೆಚ್ಚಗಳನ್ನು ಹೆಚ್ಚುಮಾಡಲಿದ್ದೂ, ಆರ್ಥಿಕ ಬಿಕ್ಕಟ್ಟು ಎದುರಾಗಲಿದೆ. ಸ್ವ ಸಾಮರ್ಥ್ಯದಿಂದ ಗುರಿ ಸಾಧಿಸಿದ ಹೆಮ್ಮೆ ಈ ದಿನ ನಿಮ್ಮದಾಗಲಿದೆ.

ಮಕರ: ತಂತ್ರಜ್ಞಾನಕ್ಕೆ ಸಂಬಂಧಿಸಿದಂಥ ಉದ್ಯೋಗದಲ್ಲಿ ಹಿನ್ನಡೆ ತೋರಿಬರಲಿದೆ. ವ್ಯವಹಾರಕ್ಕೆ ದೀರ್ಘಕಾಲದಿಂದ ನಿರೀಕ್ಷಿಸುತ್ತಿರುವ ಉತ್ತೇಜನ ದೊರೆಯುತ್ತದೆ. ಧನಾಗಮನದಲ್ಲಿ ವ್ಯತ್ಯಯ ಇರಲಿದೆ.

ಕುಂಭ: ರಾಜಕೀಯದಲ್ಲಿ ತಮ್ಮವರಿಂದಲೇ ತೋರಿ ಬರುವ ವಿರೋಧಗಳನ್ನು ಜಾಣ್ಮೆಯಿಂದ ನಿವಾರಿಸಿಕೊಳ್ಳುವ ತಂತ್ರಗಾರಿಕೆ ಅಳವಡಿಸಿಕೊಳ್ಳಿರಿ. ಪ್ರಾಮಾಣಿಕತೆಯನ್ನು ಈ ದಿನ ದುರುಪಯೋಗ ಪಡಿಸಿಕೊಳ್ಳುವವರು ಜಾಗ್ರತರಾಗಿರಿ.

ಮೀನ: ಮುಖ್ಯ ಅತಿಥಿ ಬರುವ ಸಾಧ್ಯತೆ ಇದ್ದು, ಶುಭ ಸಮಾಚಾರವನ್ನು ಕೇಳುವಿರಿ. ವಸ್ತ್ರ ವ್ಯಾಪಾರಿಗಳಿಗೆ ವ್ಯಾಪಾರ ಇರಲಿದೆ. ಹತ್ತಿ ಬೆಳೆಗಾರರಿಗೆ ಉತ್ತಮ ಲಾಭ ಪಡೆಯುವಂತಾಗಲಿದೆ.


ಷೇರುಪೇಟೆ ವಹಿವಾಟು
423



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,311
ಇಂದಿನ ಅಂತ್ಯ	23,203
▼	108
ದಿನದ ಕನಿಷ್ಠ	23,100

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹510
12 ಕ್ಕೆ	₹70
ಮೈಸೂರು	
100ಕ್ಕೆ	₹510

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹345-656
ದ್ವಿತಳಿ (ಬಿ.ವಿ) ₹450-851

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್‌-4 ₹188
ಆರ್‌ಎಸ್‌ಎಸ್‌-5 ₹183
ಗುಡ್ ಲಾಟ್ ₹177
(ಪ್ರತಿ ಕೆ.ಜಿಗೆ)


ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹22750
ಎಸಿ	₹12880
ಆರ್‌ಪಿ	₹19400
ಆರ್‌ಸಿ	₹11230

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹2500-3000
ಮಧ್ಯಮ	₹2000-2500
ಸಣ್ಣ	₹1500-2000

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹9000-13000
ತುರುವೇಕೆರೆ	₹14000-14000

₹82 ಸಾವಿರಕ್ಕೆ ಮುಟ್ಟಿದ ಚಿನ್ನದ ದರ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ 10 ಗ್ರಾಂ ಚಿನ್ನದ ಧಾರಣೆಯು ₹82 ಸಾವಿರಕ್ಕೆ ಮುಟ್ಟಿದೆ.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ 10 ಗ್ರಾಂ ಚಿನ್ನದ ಬೆಲೆಯು (ಶೇ 99.9 ಪರಿಶುದ್ಧತೆ) ₹82,400 ಹಾಗೂ ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ₹82,000ಕ್ಕೆ ತಲುಪಿ ದಾಖಲೆ ಬರೆದಿತ್ತು.

ಸದ್ಯ ಚಿನ್ನದ ದರವು 10 ಗ್ರಾಂಗೆ (ಶೇ 99.9 ಪರಿಶುದ್ಧತೆ) ₹700 ಏರಿಕೆಯಾಗಿ, ₹82,000 ಆಗಿದೆ. ಆಭರಣ ಚಿನ್ನದ ಬೆಲೆ ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹81,600 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ. ಬೆಳ್ಳಿ ದರವು ಪ್ರತಿ ಕೆ.ಜಿಗೆ ₹500 ಇಳಿಕೆಯಾಗಿದ್ದು, ₹93,500ಕ್ಕೆ ಮಾರಾಟವಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೇಡಿಕೆ ಕಡಿಮೆಯಾಗಿದೆ. ಆದರೆ, ದೇಶದಲ್ಲಿ ಆಭರಣ ತಯಾರಕರು ಮತ್ತು ವರ್ತಕರಿಂದ ಖರೀದಿ ಹೆಚ್ಚಳ ಆಗಿರುವುದರಿಂದ ದೇಶೀಯ ಮಾರುಕಟ್ಟೆಯಲ್ಲಿ ಹಳದಿ ಲೋಹದ ಧಾರಣೆಯಲ್ಲಿ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-35000
ಹಳತು	45000-49000
ಚಿತ್ರದುರ್ಗ	
ಅಪಿ	49100-49500
ಬೆಟ್ಟೆ	24400-24800
ಕೆಂಪುಗೋಟು	21600-22000
ರಾಶಿ	48600-49000
ಕುಮಟ	
ಚಾಲಿ	32189-37499
ಚಿಪ್ಪು	15509-25899
ಕೋಕ	5099-20999
ಫ್ಯಾಕ್ಟರಿ	3569-23169
ಹಳೆಚಾಲಿ	36569-39399
ಹೊಸಚಾಲಿ	25089-31100
ಪುತ್ತೂರು	
ಕೋಕ	20500-27500
ಹೊಸತು	25000-36000
ಹಳತು	32000-49000
ಶಿವಮೊಗ್ಗ	
ಬೆಟ್ಟೆ	44200-56019
ಗೊರಬಲು	18111-28199
ರಾಶಿ	32089-51299
ಸರಕು	47010-83400
ಸಿದ್ದಾಪುರ	
ಬಿಳಿಗೋಟು	24499-27909
ಚಾಲಿ	32779-38319
ಕೋಕ	20899-22899
ಹೊಸಚಾಲಿ	21399-30109
ಕೆಂಪುಗೋಟು	20119-21689
ರಾಶಿ	42099-49339
ತಟ್ಟಿಬೆಟ್ಟೆ	26509-35099
ಶಿರಸಿ	
ಬೆಟ್ಟೆ	28101-44669
ಬಿಳಿಗೋಟು	17199-31099
ಚಾಲಿ	35019-39513
ಕೆಂಪುಗೋಟು	11899-22699
ರಾಶಿ	42508-46911
ಯಲ್ಲಾಪುರ	
ಅಪಿ	58100-68779
ಬಿಳಿಗೋಟು	11899-29501
ಚಾಲಿ	29800-39009
ಕೋಕ	4600-16899
ಕೆಂಪುಗೋಟು	12899-26711
ರಾಶಿ	37499-56899
ತಟ್ಟಿಬೆಟ್ಟೆ	28719-37119

ಭ್ರಷ್ಟಾಚಾರ ಪ್ರಕರಣ: ಇಮ್ರಾನ್ ಖಾನ್‌ಗೆ 14 ವರ್ಷ, ಪತ್ನಿಗೆ 7 ವರ್ಷ ಜೈಲು


ಇಮ್ರಾನ್ ಖಾನ್

ಇಸ್ಲಾಮಾಬಾದ್ (ಪಿಟಿಐ): ಅಲ್ ಖಾದಿರ್ ಟ್ರಸ್ಟ್ ಪ್ರಕರಣದಲ್ಲಿ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್, ಅವರ ಪತ್ನಿ ಬುಶ್ರಾ ಬೀಬಿ 190 ಮಿಲಿಯನ್ ಪೌಂಡ್ (6,478 ಕೋಟಿ ಪಾಕಿಸ್ತಾನಿ ರೂಪಾಯಿ) ಭ್ರಷ್ಟಾಚಾರ ಎಸಗಿದ್ದು ಸಾಬೀತಾಗಿದೆ. ಇಮ್ರಾನ್‌ಗೆ 14 ವರ್ಷ ಹಾಗೂ ಅವರ ಪತ್ನಿಗೆ 7 ವರ್ಷ ಜೈಲುಶಿಕ್ಷೆ ವಿಧಿಸಿ, ಇಲ್ಲಿನ ನ್ಯಾಯಾಲಯವು ಶುಕ್ರವಾರ ಆದೇಶ ಪ್ರಕಟಿಸಿದೆ.

ಅದಿಲಾ ಜೈಲಿನಲ್ಲಿ ಸ್ಥಾಪಿಸಿದ್ದ ತಾತ್ಕಾಲಿಕ ನ್ಯಾಯಾಲಯದಲ್ಲಿ ಭ್ರಷ್ಟಾಚಾರ ನಿಗ್ರಹ ನ್ಯಾಯಾಲಯದ ನ್ಯಾಯಾಧೀಶ ನಾಸೀರ್ ಜಾವೇದ್ ಅವರು ತೀರ್ಪು ಪ್ರಕಟಿಸಿದರು. ಈ ಹಿಂದೆ ಮೂರು ಬಾರಿ ವಿವಿಧ ಕಾರಣಗಳಿಗಾಗಿ ತೀರ್ಪು ಪ್ರಕಟಿಸುವುದು ಮುಂದೂಡಿಕೆಯಾಗಿತ್ತು.

'ಜೈಲು ಶಿಕ್ಷೆ ಜೊತೆಗೆ ಖಾನ್ ಅವರಿಗೆ 10 ಲಕ್ಷ ಪಾಕಿಸ್ತಾನಿ ರೂಪಾಯಿ, ಅವರ ಪತ್ನಿಗೆ 5 ಲಕ್ಷ ಪಾಕಿಸ್ತಾನಿ ರೂಪಾಯಿ ದಂಡ ವಿಧಿಸಲಾಗಿದೆ. ಒಂದೊಮ್ಮೆ ದಂಡ ಪಾವತಿಸಲು ಇಬ್ಬರು ವಿಫಲರಾದರೆ ಆರು ಹಾಗೂ ಮೂರು ತಿಂಗಳು ಹೆಚ್ಚುವರಿ ಜೈಲುಶಿಕ್ಷೆ ಅನುಭವಿಸಬೇಕು. ದಂಪತಿ ಸ್ಥಾಪಿಸಿದ ಅಲ್–ಖಾದಿರ್ ವಿಶ್ವವಿದ್ಯಾಲಯದ ಜಾಗವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು' ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ.

ಬೆಂಗಳೂರಿನಲ್ಲಿರುವ ಅಮೆರಿಕದ 90 ಸಾವಿರ ನಾಗರಿಕರಿಗೆ ಅನುಕೂಲ

ಕಾನ್ಸುಲೇಟ್‌ಗೆ ಚಾಲನೆ: ವೀಸಾ ಸದ್ಯಕ್ಕಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಲ್ಲಿ ಅಮೆರಿಕದ ಕಾನ್ಸುಲೇಟ್ ಕಚೇರಿ ಶುಕ್ರವಾರ ಕಾರ್ಯಾರಂಭ ಮಾಡಿದ್ದು, ಇಲ್ಲಿಂದಲೇ ವೀಸಾ ಸೇವೆ ಪಡೆಯಲು ಕರ್ನಾಟಕದ ಜನರು ಇನ್ನಷ್ಟು ತಿಂಗಳು ಕಾಯಬೇಕಿದೆ.

ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು, ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂತನ ಕಾನ್ಸುಲೇಟ್ ಅನ್ನು ಉದ್ಘಾಟಿಸಿದರು.

ಭಾರತದಲ್ಲಿನ ಅಮೆರಿಕ ರಾಯಭಾರಿ ಎರಿಕ್ ಗ್ಯಾರ್‌ಸೆಟಿ, 'ಇಲ್ಲಿ ಅಮೆರಿಕದ ಪ್ರಜೆಗಳ ಸಹಾಯ ಮತ್ತು ಇತರ ಸೇವೆಗಳನ್ನು ಮಾತ್ರವೇ ಆರಂಭಿಸಲಾಗುತ್ತಿದೆ. ವೀಸಾ ಸೇವೆ ಇಲ್ಲಿ ಲಭ್ಯವಿರುವುದಿಲ್ಲ' ಎಂದು ಹೇಳಿದರು.

'ದೇಶದಲ್ಲಿ ನಾಲ್ಕು ಕಾನ್ಸುಲೇಟ್‌ಗಳಲ್ಲಿ ವೀಸಾ ಸೇವೆ ಒದಗಿಸುತ್ತಿದ್ದು, ಪ್ರತಿ ಕಾನ್ಸುಲೇಟ್‌ಗೂ ಕೆಲ ರಾಜ್ಯಗಳ ಅಧಿಕಾರ ವ್ಯಾಪ್ತಿಯನ್ನು ಹಂಚಲಾಗಿದೆ. ಬೆಂಗಳೂರಿನಲ್ಲಿ ವೀಸಾ ಸೇವೆ ಒದಗಿಸುವುದಕ್ಕೂ ಮುನ್ನ ಎಲ್ಲ ಕಾನ್ಸುಲೇಟ್‌ಗಳ ವ್ಯಾಪ್ತಿಯನ್ನು ಮರುಹಂಚಿಕೆ ಮಾಡಬೇಕಿದೆ. ನಂತರ ಬೆಂಗಳೂರು ಕಾನ್ಸುಲೇಟ್‌ಗೂ ವೀಸಾ ನೀಡಿಕೆ ವ್ಯಾಪ್ತಿಯನ್ನು ನಿಗದಿ ಮಾಡಬೇಕಿದೆ. ಇದೊಂದು ದೀರ್ಘ ಪ್ರಕ್ರಿಯೆ ಆಗಿದ್ದು, ಹಲವು ತಿಂಗಳು ಬೇಕಾಗಬಹುದು' ಎಂದು ಮೂಲಗಳು ಸ್ಪಷ್ಟಪಡಿಸಿವೆ.

'ಅಮೆರಿಕದ 90,000ದಷ್ಟು ಪ್ರಜೆಗಳು, ಅಧಿಕಾರಿ–ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ ನೆಲಸಿದ್ದಾರೆ. ಈ ಕಾನ್ಸುಲೇಟ್ ಕಾರ್ಯಾರಂಭದಿಂದ ಆ ಮಂದಿಗೆ ಅನುಕೂಲವಾಗಲಿದೆ' ಎಂದು ಹೇಳಿವೆ.

ಬೆಂಗಳೂರಿನ ಅಮೆರಿಕ ಕಾನ್ಸುಲೇಟ್ ಸದ್ಯಕ್ಕೆ ವಿಠ್ಠಲ್ ಮಲ್ಯ ರಸ್ತೆಯಲ್ಲಿರುವ ಜೆ.ಡಬ್ಲ್ಯು. ಮ್ಯಾರಿಯೆಟ್ ಬ್ಯುಸಿನೆಸ್ ಸ್ಪೇಸ್‌ನಲ್ಲಿ ಕಾರ್ಯ ನಿರ್ವಹಿಸಲಿದೆ. ಇದು ತಾತ್ಕಾಲಿಕ ಕಚೇರಿ ಆಗಿದ್ದು, ರಾಜ್ಯ ಸರ್ಕಾರವು ಸೂಕ್ತ ಸ್ಥಳವನ್ನು ಒದಗಿಸಿದ ನಂತರ ಶಾಶ್ವತ ಕಚೇರಿ ಆರಂಭವಾಗಲಿದೆ.

ಭಾರತದಲ್ಲಿ ಕೋಲ್ಕತ್ತ, ಚೆನ್ನೈ, ಮುಂಬೈ ಮತ್ತು ಹೈದರಾಬಾದ್‌ನಲ್ಲಿ ಕಾನ್ಸುಲೇಟ್‌ಗಳಿದ್ದು, ಅಲ್ಲಿ ಅಮೆರಿಕದ ನಾಗರಿಕ ಸಹಾಯ ಸೇವೆ ಮತ್ತು ವೀಸಾ ಸೇವೆ ಲಭ್ಯವಿದೆ. ಆದರೆ ಬೆಂಗಳೂರಿನಲ್ಲಿ ಕಾನ್ಸುಲೇಟ್ ಇಲ್ಲದೇ ಇದ್ದುದರಿಂದ ರಾಜ್ಯದ ಜನರು ಅಮೆರಿಕದ ವೀಸಾ ಪಡೆಯಲು ಚೆನ್ನೈಗೆ ಹೋಗಬೇಕಾಗಿದೆ.

ಹೀಗಾಗಿ, ಇಲ್ಲಿ ಕಾನ್ಸುಲೇಟ್ ಆರಂಭಿಸಬೇಕು ಎಂದು ಎರಡೂವರೆ ದಶಕಗಳಲ್ಲಿ ರಾಜ್ಯದಲ್ಲಿದ್ದ ಸರ್ಕಾರಗಳು, ಕೇಂದ್ರದ ವಿದೇಶಾಂಗ ಸಚಿವರು ಮತ್ತು ಸಂಸದರೂ ಅಮೆರಿಕದ ರಾಯಭಾರಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರು. ಭಾರತದಲ್ಲಿ ನಾಲ್ಕು ಕಾನ್ಸುಲೇಟ್ ಇರುವುದರಿಂದ ಇಲ್ಲಿ ಕಾನ್ಸುಲೇಟ್ ಆರಂಭಿಸುವ ಮನವಿ ಫಲಿಸಿರಲಿಲ್ಲ. ಈಗ ಕಚೇರಿ ಆರಂಭವಾಗಿದ್ದರೂ ವೀಸಾ ಸೇವೆ ಈಗಲೇ ಲಭ್ಯವಿರುವುದಿಲ್ಲ.



ಬೆಂಗಳೂರಿನಲ್ಲಿ ಅಮೆರಿಕದ ಕಾನ್ಸುಲೇಟ್ ಕಚೇರಿಯ ಉದ್ಘಾಟನೆ ನಂತರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಭಾರತದಲ್ಲಿನ ಅಮೆರಿಕ ರಾಯಭಾರಿ ಎರಿಕ್ ಗ್ಯಾರ್‌ಸೆಟಿ ಮತ್ತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಪರಸ್ಪರ ಅಭಿನಂದಿಸಿದರು –ಪಿಟಿಐ ಚಿತ್ರ

'ಎಲ್ಲ ಸೇವೆ ಶೀಘ್ರ ಆರಂಭವಾಗಲಿ'

ಬೆಂಗಳೂರಿನ ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿಯಲ್ಲಿ ವಾರ್ಷಿಕ 8.83 ಲಕ್ಷ ಪಾಸ್‌ಪೋರ್ಟ್‌ಗಳನ್ನು ನೀಡಲಾಗುತ್ತಿದೆ. ಇಲ್ಲಿ ಕಾನ್ಸುಲೇಟ್‌ನ ಅವಶ್ಯ ಎಷ್ಟಿದೆ ಎಂಬುದನ್ನು ಈ ಸಂಖ್ಯೆಯೇ ವಿವರಿಸುತ್ತದೆ. ಬೆಂಗಳೂರಿನಲ್ಲಿ ಅಮೆರಿಕದ ನೂರಾರು ನಾಗರಿಕರು ನೆಲಸಿದ್ದಾರೆ. ಕರ್ನಾಟಕದ ಜನತೆ ಜತೆಗೆ ಇಲ್ಲಿ ಕಾನ್ಸುಲೇಟ್ ಬೇಕು ಎಂಬುದು ಆ ನಾಗರಿಕರ ಬೇಡಿಕೆಯೂ ಆಗಿತ್ತು. ಅದು ಈಡೇರಿದೆ. ಎಲ್ಲ ಸೇವೆಗಳು ಶೀಘ್ರ ಆರಂಭವಾದಷ್ಟೂ ಅನುಕೂಲ ಹೆಚ್ಚಾಗಲಿದೆ.

ಎಸ್.ಜೈಶಂಕರ್, ವಿದೇಶಾಂಗ ಸಚಿವ

'ಗಟ್ಟಿಗೊಳ್ಳಲಿದೆ ದ್ವಿಪಕ್ಷೀಯ ಸಂಬಂಧ'

ಅಮೆರಿಕವು ವಿದೇಶದಲ್ಲಿ ಅತಿಹೆಚ್ಚು ಕಾನ್ಸುಲೇಟ್ ಮತ್ತು ವಿದೇಶಾಂಗ ವ್ಯವಹಾರಗಳ ಕಚೇರಿಗಳನ್ನು ಭಾರತದಲ್ಲಿ ಹೊಂದಿದೆ. 1776ರಲ್ಲಿ ಅಮೆರಿಕ ಸ್ವಾತಂತ್ರ್ಯಗೊಂಡ ನಂತರ ಮೊದಲ ಕಾನ್ಸುಲೇಟ್ ಆರಂಭವಾಗಿದ್ದು ಫ್ರಾನ್ಸ್‌ನಲ್ಲಿ. ಎರಡನೆಯದ್ದು ಕೋಲ್ಕತ್ತದಲ್ಲಿ. ಭಾರತವು ಅಮೆರಿಕಕ್ಕೆ ಎಷ್ಟು ಮುಖ್ಯ ಎಂಬುದನ್ನು ಅದು ತೋರಿಸುತ್ತದೆ. ಈಗ ಐದನೇ ಕಾನ್ಸುಲೇಟ್ ಆರಂಭವಾಗಿರುವುದು ನಮ್ಮ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ.

ಎರಿಕ್ ಗ್ಯಾರ್‌ಸೆಟಿ, ಭಾರತದಲ್ಲಿನ ಅಮೆರಿಕ ರಾಯಭಾರಿ

'ಇಲ್ಲಿ ಕಾನ್ಸುಲೇಟ್ ಅವಶ್ಯ ಇತ್ತು'

ಬೆಂಗಳೂರು ಯೋಜಿತ ನಗರವಲ್ಲ ಎಂಬ ಅಪವಾದ ಇದೆ. ಆದರೆ ದೇಶದಲ್ಲೇ ಅತಿಹೆಚ್ಚು ಸುರಕ್ಷಿತ ನಗರ ಎಂಬ ಖ್ಯಾತಿ ಬೆಂಗಳೂರಿನದ್ದು. ಹೀಗಾಗಿಯೇ ಜಾಗತಿಕ ಕಂಪನಿಗಳಲ್ಲಿ ಹಲವು ತಮ್ಮ ಕೇಂದ್ರ ಕಚೇರಿಯನ್ನು ಇಲ್ಲಿ ಹೊಂದಿವೆ. ದೇಶದಿಂದ ಮಾಹಿತಿ ತಂತ್ರಜ್ಞಾನ ಸೇವೆಯು ಅತಿಹೆಚ್ಚು ರಫ್ತಾಗುವುದು ಇಲ್ಲಿಂದಲೇ. ಇಲ್ಲಿ ಅಮೆರಿಕದ ಕಾನ್ಸುಲೇಟ್‌ನ ಅವಶ್ಯ ಇತ್ತು. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿ ಆಗಿದ್ದಾಗಲೇ ಆ ಪ್ರಯತ್ನ ಆರಂಭಿಸಿದ್ದರು. ಹಲವರ ಪ್ರಯತ್ನದ ನಂತರ ಅದು ಈಗ ಈಡೇರಿದೆ.

ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಸೆನ್ಸೆಕ್ಸ್ 423 ಅಂಶ ಇಳಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಸತತ ಮೂರು ದಿನಗಳ ಗೂಳಿ ಓಟಕ್ಕೆ ಶುಕ್ರವಾರ ತಡೆಬಿದ್ದಿತು. ಐ.ಟಿ, ಬ್ಯಾಂಕಿಂಗ್ ಹಾಗೂ ಹಣಕಾಸು ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಸೂಚ್ಯಂಕಗಳು ಇಳಿಕೆ ಕಂಡಿವೆ.

ವಿದೇಶಿ ಬಂಡವಾಳದ ಹೊರಹರಿವು ಮುಂದುವರಿದಿದ್ದರಿಂದ ದೇಶೀಯ ಮಾರುಕಟ್ಟೆಯಲ್ಲಿ ನಕಾರಾತ್ಮಕ ವಹಿವಾಟು ನಡೆಯಿತು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 423 ಅಂಶ ಇಳಿಕೆ ಕಂಡು, 76,619 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 779 ಅಂಶ ಇಳಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 108 ಅಂಶ ಇಳಿಕೆ ಕಂಡು, 23,203 ಅಂಶಗಳಲ್ಲಿ ಸ್ಥಿರಗೊಂಡಿತು.

ಇನ್ಫೊಸಿಸ್ ಷೇರಿನ ಮೌಲ್ಯದಲ್ಲಿ ಶೇ 6ರಷ್ಟು ಕುಸಿದಿದೆ. ಎಕ್ಸಿಸ್ ಬ್ಯಾಂಕ್‌ನ ಷೇರಿನ ಮೌಲ್ಯ ಶೇ 4ರಷ್ಟು ಇಳಿಕೆಯಾಗಿದೆ. ಗುರುವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹4,341 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

'ಮೊಬಿಲಿಟಿ ಹೂಡಿಕೆಗೆ ಭಾರತ ಪ್ರಶಸ್ತ'

ನವದೆಹಲಿ (ಪಿಟಿಐ): 'ದೇಶದಲ್ಲಿ ವರ್ಷಕ್ಕೆ 2.5 ಕೋಟಿ ವಾಹನಗಳು ಮಾರಾಟವಾಗುತ್ತಿವೆ. ಕಳೆದ ನಾಲ್ಕು ವರ್ಷಗಳಲ್ಲಿ ಆಟೊಮೊಬೈಲ್ ವಲಯದಲ್ಲಿ ₹3.11 ಲಕ್ಷ ಕೋಟಿ ವಿದೇಶಿ ನೇರ ಬಂಡವಾಳ ಆಕರ್ಷಿಸಲಾಗಿದೆ. ಹಾಗಾಗಿ, ಭವಿಷ್ಯದಲ್ಲಿ ಈ ವಲಯದಲ್ಲಿ ಬಂಡವಾಳ ಹೂಡಿಕೆಗೆ ಭಾರತವು ಪ್ರಶಸ್ತ ತಾಣವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಭಾರತ ಮಂಟಪದಲ್ಲಿ ಶುಕ್ರವಾರ ಆರಂಭವಾದ ಭಾರತ್ ಮೊಬಿಲಿಟಿ ಗ್ಲೋಬಲ್ ಎಕ್ಸ್‌ಪೋ–2025ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಸರ್ಕಾರವು 'ಮೇಕ್ ಇನ್ ಇಂಡಿಯಾ'ಕ್ಕೆ ಒತ್ತು ನೀಡಿದೆ. ಇದು ದೇಶದ ಆಟೊಮೊಬೈಲ್ ವಲಯ ಅಭಿವೃದ್ಧಿಗೆ ನಿರ್ಣಾಯಕ ಪಾತ್ರವಹಿಸಲಿದೆ. ಜಾಗತಿಕ ಬೆಳವಣಿಗೆಗೂ ನೆರವಾಗಲಿದೆ. ಇದರಡಿ ₹2.25 ಲಕ್ಷ ಕೋಟಿ ಮೌಲ್ಯದ ಮಾರಾಟ ವಹಿವಾಟು ನಡೆದಿದೆ. 1.5 ಲಕ್ಷ ನೇರ ಉದ್ಯೋಗಗಳು ಸೃಷ್ಟಿಯಾಗಿವೆ ಎಂದರು.


ನವದೆಹಲಿಯ ಭಾರತ ಮಂಟಪದಲ್ಲಿ ಶುಕ್ರವಾರ ಭಾರತ್ ಮೊಬಿಲಿಟಿ ಗ್ಲೋಬಲ್ ಎಕ್ಸ್‌ಪೋ ಮಳಿಗೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿದರು. ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಹಾಜರಿದ್ದರು –ಪಿಟಿಐ ಚಿತ್ರ

ಕಳೆದ ಒಂದು ವರ್ಷದಲ್ಲಿ ದೇಶದ ಆಟೊಮೊಬೈಲ್ ವಲಯವು ಶೇ 12ರಷ್ಟು ಪ್ರಗತಿ ಕಂಡಿದೆ. ರಫ್ತು ವಹಿವಾಟಿನಲ್ಲೂ ಏರಿಕೆಯಾಗಿದೆ ಎಂದು ತಿಳಿಸಿದರು.

ಐದು ದಿನಗಳವರೆಗೆ ನಡೆಯುವ ಈ ಪ್ರದರ್ಶನದಲ್ಲಿ ವಿವಿಧ ಕಂಪನಿಗಳಿಂದ 100ಕ್ಕೂ ಹೆಚ್ಚು ಹೊಸ ವಾಹನಗಳು ಬಿಡುಗಡೆಯಾಗುವ ನಿರೀಕ್ಷೆಯಿದೆ. ವಾಹನ ತಯಾರಕರು, ಎಲೆಕ್ಟ್ರಾನಿಕ್ ಬಿಡಿಭಾಗಗಳು, ಟೈರ್, ಬ್ಯಾಟರಿ ತಯಾರಕರು, ಆಟೊಮೋಟಿವ್ ಸಾಫ್ಟ್‌ವೇರ್ ಕಂಪನಿಗಳು ಮತ್ತು ಉಪಕರಣಗಳ ಮರುಬಳಕೆ ಮಾಡುವ ಕಂಪನಿಗಳು ಒಂದೇ ವೇದಿಕೆಯಲ್ಲಿ ಸೇರಲಿವೆ.

ತೊಗರಿ ಉತ್ಪಾದನೆ ಶೇ 2.5ರಷ್ಟು ಹೆಚ್ಚಳ ನಿರೀಕ್ಷೆ: ಕೇಂದ್ರ

ನವದೆಹಲಿ (ಪಿಟಿಐ): ಉತ್ತಮ ಮುಂಗಾರು ಹಾಗೂ ಅನುಕೂಲಕರ ವಾತಾವರಣದಿಂದಾಗಿ ದೇಶದಲ್ಲಿ 2024–25ನೇ ಮಾರುಕಟ್ಟೆ ವರ್ಷದಲ್ಲಿ (ಜುಲೈನಿಂದ ಜೂನ್‌ವರೆಗೆ) ಬೇಳೆಕಾಳು ಮತ್ತು ಈರುಳ್ಳಿ ಉತ್ಪಾದನೆಯಲ್ಲಿ ಏರಿಕೆಯಾಗುವ ನಿರೀಕ್ಷೆಯಿದೆ ಎಂದು ಕೇಂದ್ರ ಆಹಾರ ಸಚಿವಾಲಯ ಶುಕ್ರವಾರ ತಿಳಿಸಿದೆ.

ಕಳೆದ ಮಾರುಕಟ್ಟೆ ವರ್ಷದಲ್ಲಿ 34.17 ಲಕ್ಷ ಟನ್ ತೊಗರಿ ಉತ್ಪಾದನೆಯಾಗಿತ್ತು. ಈ ಬಾರಿ 35.02 ಲಕ್ಷ ಟನ್ ಉತ್ಪಾದನೆಯಾಗುವ ನಿರೀಕ್ಷೆಯಿದೆ. ಒಟ್ಟಾರೆ ಶೇ 2.5ರಷ್ಟು ಹೆಚ್ಚಳವಾಗಲಿದೆ ಎಂದು ಹೇಳಿದೆ.

ಈಗಾಗಲೇ, ಕೇಂದ್ರ ಕೃಷಿ ಸಚಿವಾಲಯವು ಕನಿಷ್ಠ ಬೆಂಬಲ ಬೆಲೆ ಅಡಿ ತೊಗರಿ ಖರೀದಿಗೆ ಚಾಲನೆ ನೀಡಿದೆ. ಮುಂಗಾರು ಹಂಗಾಮು ಹಾಗೂ ಮುಂಗಾರು ನಂತರದ ಅವಧಿಯಲ್ಲಿ ಬಿತ್ತಿರುವ ಈರುಳ್ಳಿ ಉತ್ಪಾದನೆ ಉತ್ತಮವಾಗಿದೆ. ಹಿಂಗಾರು ಅವಧಿಯಲ್ಲೂ ಉತ್ತಮ ಬಿತ್ತನೆಯಾಗಿದೆ ಎಂದು ಸಚಿವಾಲಯ ಹೇಳಿದೆ.

ದೇಶದ ಚಿಲ್ಲರೆ ಮಾರುಕಟ್ಟೆಯಲ್ಲಿ ಅಗತ್ಯ ವಸ್ತುಗಳ ಬೆಲೆ ಮತ್ತು ಪೂರೈಕೆ ಮೇಲೆ ನಿಗಾ ಇಡಲಾಗಿದೆ. ಗ್ರಾಹಕರಿಗೆ ಕೈಗೆಟುಕುವ ದರದಲ್ಲಿ ಆಹಾರ ಪದಾರ್ಥಗಳ ಪೂರೈಕೆಗೆ ಕ್ರಮವಹಿಸಲಾಗುವುದು ಎಂದು ತಿಳಿಸಿದೆ.

ದೇಶೀಯ ಉತ್ಪಾದನೆಗೆ ಅಗತ್ಯ ಪ್ರೋತ್ಸಾಹ ನೀಡಲಾಗುತ್ತಿದೆ. ಗ್ರಾಹಕರು ಮತ್ತು ರೈತರ ಹಿತದೃಷ್ಟಿಯಿಂದ ಸಕಾಲದಲ್ಲಿ ಬೆಲೆ ನಿಯಂತ್ರಿಸಲು ಅಗತ್ಯ ಕ್ರಮಕೈಗೊಳ್ಳಲಾಗಿದೆ ಎಂದು ಹೇಳಿದೆ.

ವಿಪ್ರೊ ಲಾಭ ಶೇ 24ರಷ್ಟು ಏರಿಕೆ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ವಿಪ್ರೊ ಕಂಪನಿಯು ₹3,354 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಗಳಿಸಿದ್ದ ಲಾಭಕ್ಕೆ ಹೋಲಿಸಿ ದರೆ ಶೇ 24ರಷ್ಟು ಏರಿಕೆಯಾಗಿದೆ ಎಂದು ಕಂಪನಿಯು ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.

ವರಮಾನದಲ್ಲಿ ಶೇ 0.5ರಷ್ಟು ಹೆಚ್ಚಳವಾಗಿದ್ದು, ₹22,319 ಕೋಟಿ ಗಳಿಸಿದೆ. ಪ್ರತಿ ಈಕ್ವಿಟಿ ಷೇರಿಗೆ ₹6 ಮಧ್ಯಂತರ ಲಾಭಾಂಶ ಘೋಷಿಸಿದೆ.

ವಿನಿಮಯ ದರ

$ ಡಾಲರ್	86.60
£ ಪೌಂಡ್	105.63
€ ಯುರೊ	89.17
¥ ಯೆನ್ (100ಕ್ಕೆ)	56

ಭಾರತೀಯನಿಗೆ 8 ವರ್ಷ ಶಿಕ್ಷೆ

ವಾಷಿಂಗ್ಟನ್ (ಪಿಟಿಐ): 2023ರ ಮೇ 22ರಂದು ಬಾಡಿಗೆ ಟ್ರಕ್‌ನೊಂದಿಗೆ ಶ್ವೇತಭವನದ ಮೇಲೆ ದಾಳಿ ನಡೆಸಲು ಯತ್ನಿಸಿದ್ದ ಭಾರತೀಯ ಸಾಯಿ ವರ್ಷಿತ್ ಕಂಡುಲಾಗೆ ಎಂಟು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ.

ನಾಜಿ ಸಿದ್ಧಾಂತದಿಂದ ಪ್ರೇರೇಪಿತಗೊಂಡಿದ್ದ ಸಾಯಿ, ಪ್ರಜಾಸತ್ತಾತ್ಮಕವಾಗಿ ಚುನಾಯಿತವಾಗಿದ್ದ ಅಮೆರಿಕನ್ ಸರ್ಕಾರವನ್ನು ಉರುಳಿಸುವ ಗುರಿಯೊಂದಿಗೆ ದಾಳಿ ನಡೆಸಿದ್ದ ಎಂದು ನ್ಯಾಯಾಂಗ ಇಲಾಖೆಯು ತಿಳಿಸಿದೆ.

ಅಮೆರಿಕದ ಆಸ್ತಿಗೆ ಉದ್ದೇಶಪೂರ್ವಕವಾಗಿ ಹಾನಿಗೊಳಿಸುವ ಯತ್ನ ನಡೆಸಿದ್ದ ಆರೋಪ ಹೊತ್ತಿದ್ದ ಕಂಡುಲಾ ತಪ್ಪೊಪ್ಪಿಕೊಂಡಿದ್ದರು. ಭಾರತದ ಚಂದಾ ನಗರದಲ್ಲಿ ಜನಿಸಿರುವ ಅವರು, ಅಮೆರಿಕದ ಗ್ರೀನ್ ಕಾರ್ಡ್ ಹೊಂದಿದ್ದಾರೆ.

ಒತ್ತೆಯಾಳು ಬಿಡುಗಡೆಗೆ ಒಪ್ಪಂದ: ನೆತನ್ಯಾಹು



ಜೆರುಸಲೇಂ (ಎಪಿ): ಗಾಜಾ ಪಟ್ಟಿಯಲ್ಲಿ ಒತ್ತೆಯಾಳುಗಳಾಗಿ ಇಟ್ಟುಕೊಂಡಿರುವವರ ಬಿಡುಗಡೆ ಮಾಡಲು ಒಪ್ಪಂದ ಆಗಿದೆ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಶುಕ್ರವಾರ ತಿಳಿಸಿದರು.

ಇದರೊಂದಿಗೆ ಇಸ್ರೇಲ್–ಹಮಾಸ್ ನಡುವಿನ ಕದನ ವಿರಾಮ ಒಪ್ಪಂದಕ್ಕೆ ಕವಿದಿದ್ದ ಕಾರ್ಮೋಡ ಸರಿದಂತಾಗಿದೆ.

ಸಂಪುಟ ಸಭೆ ಕರೆದು ಚರ್ಚಿಸಿ, ನಂತರ ಬಾಕಿ ಇರುವ ಒಪ್ಪಂದಕ್ಕೆ ಸರ್ಕಾರವು ಅನುಮೋದನೆ ನೀಡಲಿದೆ ಎಂದು ಅವರು ಹೇಳಿದರು. ಅದಾಗಿ ಸ್ವಲ್ಪವೇ ಹೊತ್ತಿನ ನಂತರ ಇಸ್ರೇಲ್ ಭದ್ರತಾ ಸಚಿವ ಸಂಪುಟವು ಕದನ ವಿರಾಮಕ್ಕೆ ಸಮ್ಮತಿ ಸೂಚಿಸಿದ್ದು, ಸಹಿ ಹಾಕಿದ ಅಧಿಕೃತ ಪ್ರಕಟಣೆ ಯಷ್ಟೆ ಹೊರಬೀಳಬೇಕಿದೆ.

ಗಾಜಾದಿಂದ ಬರುವ ಒತ್ತೆಯಾಳುಗಳನ್ನು ಸ್ವಾಗತಿಸಲು ಸಿದ್ಧತೆ ಮಾಡಿಕೊಳ್ಳುವಂತೆ ವಿಶೇಷ ಕಾರ್ಯಪಡೆಗೆ ಸೂಚಿಸಲಾಗಿದೆ. ಒಪ್ಪಂದದ ಬಗ್ಗೆ ಒತ್ತೆಯಾಳುಗಳ ಕುಟುಂಬಕ್ಕೆ ಮಾಹಿತಿ ನೀಡಲಾಗಿದೆ ಎಂದು ನೆತನ್ಯಾಹು ಅವರು ಮಾಹಿತಿ ನೀಡಿದರು.

ಒಪ್ಪಂದದ ಪ್ರಕಾರ, ಹಮಾಸ್ ಒತ್ತೆ ಇರಿಸಿಕೊಂಡಿರುವ 33 ಮಂದಿ ಬಿಡುಗಡೆಗೆ ಪ್ರತಿಯಾಗಿ, ಇಸ್ರೇಲ್‌ನ ಬಂಧನದಲ್ಲಿರುವ ನೂರಾರು ಪ್ಯಾಲೆಸ್ಟೀನಿಯರನ್ನು ಮುಂದಿನ ಆರು ವಾರಗಳಲ್ಲಿ ಬಿಡುಗಡೆ ಮಾಡಬೇಕಿದೆ. ಜೊತೆಗೆ, ಈ ಒಪ್ಪಂದದಿಂದ ಸ್ಥಳಾಂತರಗೊಂಡ ಸಾವಿರಾರು ಜನರು ಗಾಜಾದಲ್ಲಿ ಅಳಿದುಳಿದ ತಮ್ಮ ಮನೆಗಳಿಗೆ ಪುನಃ ತೆರಳಲು ಸಾಧ್ಯವಾಗಲಿದೆ.

72 ಮಂದಿ ಸಾವು: ಕದನ ವಿರಾಮ ಘೋಷಣೆಯಾದ ನಂತರ ಗಾಜಾಪಟ್ಟಿ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ 72 ಮಂದಿ ಮೃತಪಟ್ಟಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವಾಲಯ ತಿಳಿಸಿದೆ.


ಜನರು ಕದನ ವಿರಾಮ ಘೋಷಣೆ ಒಪ್ಪಂದದ ಸಂಭ್ರಮದಲ್ಲಿ ಇದ್ದಾಗಲೇ ಇಸ್ರೇಲ್ ಬಾಂಬ್ ದಾಳಿ ನಡೆಸಿದೆ ಎಂದು ಗಾಜಾದಲ್ಲಿನ ಪ್ಯಾಲೆಸ್ಟೀನಿಯನ್ನರು ತಿಳಿಸಿದ್ದಾರೆ.

ನೆತನ್ಯಾಹು ಸರ್ಕಾರವು ಕದನ ವಿರಾಮ ಒಪ್ಪಂದಕ್ಕೆ ಅನುಮೋದನೆ ನೀಡಿದರೆ ಇಸ್ರೇಲ್ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ವಾಪಸ್ ಪಡೆಯುವುದಾಗಿ ಬಲ ಪಂಥೀಯ ನಾಯಕ, ರಾಷ್ಟ್ರೀಯ ಭದ್ರತಾ ಸಚಿವ ಇಟಮಾನ್ ಬೆನ್ ಗಿವಿಯರ್ ಎಚ್ಚರಿಕೆ ನೀಡಿದ್ದಾರೆ. ಹಾಗೆಯೇ ಯುದ್ಧವನ್ನು ಮುಂದುವರಿಸಿದರೆ ತಮ್ಮ ಪಕ್ಷವು ಸರ್ಕಾರದ ಜತೆ ಮತ್ತೆ ಸೇರಲಿದೆ ಎಂದು ಹೇಳಿದ್ದಾರೆ.

ದೆಹಲಿ ವಿಧಾನಸಭಾ ಚುನಾವಣೆ: ಬಿಜೆಪಿಯಿಂದಲೂ ಭರ್ಜರಿ ಆಶ್ವಾಸನೆಗಳ ಪ್ರಣಾಳಿಕೆ

ಮಹಿಳೆಯರಿಗೆ ₹2,500 ನೆರವು

ನವದೆಹಲಿ (ಪಿಟಿಐ): ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು ಗೆದ್ದು ಅಧಿಕಾರಕ್ಕೆ ಬಂದರೆ ಮಹಿಳೆಯರಿಗೆ ಮಾಸಿಕ ₹2,500 ನೆರವು ನೀಡುವುದಾಗಿ ಘೋಷಿಸಿದೆ.



ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಪಕ್ಷದ ಪ್ರಣಾಳಿಕೆ 'ಸಂಕಲ್ಪ ಪತ್ರ'ದ ಮೊದಲ ಭಾಗವನ್ನು ಶುಕ್ರವಾರ ಬಿಡುಗಡೆಗೊಳಿಸಿದ್ದು, ಮತದಾರರಿಗೆ ಹಲವು ಭರವಸೆಗಳನ್ನು ನೀಡಲಾಗಿದೆ.

ಎಲ್ಲ ಗರ್ಭಿಣಿಯರಿಗೆ ₹21,000 ನೆರವು, ಹಿರಿಯ ನಾಗರಿಕರಿಗೆ ₹2,500 ಪಿಂಚಣಿ ಮತ್ತು ಬಡವರಿಗೆ ₹500ಕ್ಕೆ ಅಡುಗೆ ಅನಿಲ ಸಿಲಿಂಡರ್ ನೀಡುವುದಾಗಿಯೂ ಘೋಷಿಸಿದೆ.

ಬಿಜೆಪಿಯು ಅಧಿಕಾರಕ್ಕೆ ಬಂದರೆ ಈಗ ಇರುವ ಎಲ್ಲ ಜನ ಕಲ್ಯಾಣ ಯೋಜನೆಗಳನ್ನು ಮುಂದುವರಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಇತರ ಭರವಸೆಗಳು...

- ದೀಪಾವಳಿ ಮತ್ತು ಹೋಳಿ ಹಬ್ಬದ ಸಂದರ್ಭದಲ್ಲಿ ಉಚಿತ ಅಡುಗೆ ಅನಿಲ ಸಿಲಿಂಡರ್
- 60–70 ವರ್ಷದೊಳಗಿನ ಹಿರಿಯ ನಾಗರಿಕರಿಗೆ ಮಾಸಿಕ ₹ 2,500 ಪಿಂಚಣಿ
- 70 ವರ್ಷಕ್ಕಿಂತ ಮೇಲ್ಪಟ್ಟವರು, ವಿಧವೆಯರು ಮತ್ತು ಅಂಗವಿಕಲರಿಗೆ ಮಾಸಿಕ ₹ 3,000 ಪಿಂಚಣಿ
- ಗರ್ಭಿಣಿಯರಿಗೆ ಪೌಷ್ಟಿಕ ಆಹಾರದ ಆರು ಕಿಟ್‌ಗಳು
- ನವದೆಹಲಿಯಲ್ಲಿ ಆಯುಷ್ಮಾನ್ ಭಾರತ್ ಯೋಜನೆ ಜಾರಿ

ಎಎಪಿಯ ಇಬ್ಬರು ಕೌನ್ಸಿಲರ್ ಬಿಜೆಪಿಗೆ

ದೆಹಲಿ ವಿಧಾನಸಭೆ ಚುನಾವಣೆ ಹತ್ತಿರದಲ್ಲಿರುವಾಗ ಎಎಪಿಯ ಇಬ್ಬರು ಮಹಾನಗರ ಪಾಲಿಕೆ ಸದಸ್ಯರು ಪಕ್ಷ ತೊರೆದು ಶುಕ್ರವಾರ ಬಿಜೆಪಿ ಸೇರಿದ್ದಾರೆ.

ದೆಹಲಿ ಮಹಾನಗರ ಪಾಲಿಕೆಯ ಬಾಪ್ರೋಲಾ ವಾರ್ಡ್ ಸದಸ್ಯ ಸೋಲಂಕಿ ಮತ್ತು ಮಂಗಳಪುರಿಯ ವಾರ್ಡ್ ಸದಸ್ಯ ಗಿರ್ಸಾ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ ಮತ್ತು ಪಶ್ಚಿಮ ದೆಹಲಿ ಸಂಸದೆ ಕಮಲ್‌ಜೀತ್ ಸೆಹ್ರಾವತ್ ಅವರ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

ಜ.6ರಂದು 'ಪ್ಯಾರಿ ದೀದಿ ಯೋಜನೆ'ಯನ್ನು ಪ್ರಕಟಿಸಿದ್ದ ಕಾಂಗ್ರೆಸ್, ಮಹಿಳೆಯರಿಗೆ ಮಾಸಿಕ ₹2,500 ನೀಡುವುದಾಗಿ ಘೋಷಿಸಿತ್ತು. ಎಎಪಿಯು ಮಾಸಿಕ ₹2,100 ನೀಡುವುದಾಗಿ ಘೋಷಿಸಿದೆ.

'ವಿದ್ಯಾರ್ಥಿಗಳಿಗೆ ಬಸ್ ಪ್ರಯಾಣ ಉಚಿತ'

ದೆಹಲಿಯಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ ವಿದ್ಯಾರ್ಥಿಗಳಿಗೆ ಬಸ್‌ನಲ್ಲಿ ಉಚಿತ ಪ್ರಯಾಣ ಸೌಲಭ್ಯವನ್ನು (ವಿದ್ಯಾರ್ಥಿನಿಯರಿಗೆ ಈಗಾಗಲೇ ಈ ಸೌಲಭ್ಯವಿದೆ) ನೀಡಲಾಗುವುದು ಎಂದು ಎಎಪಿ ಶುಕ್ರವಾರ ಘೋಷಿಸಿದೆ.

ಎಲ್ಲ ವಿದ್ಯಾರ್ಥಿಗಳಿಗೆ ಮೆಟ್ರೊ ಪ್ರಯಾಣ ದರದಲ್ಲಿ ಶೇ 50ರಷ್ಟು ರಿಯಾಯಿತಿ ನೀಡಲು ಅನುಮತಿ ನೀಡುವಂತೆ ಒತ್ತಾಯಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವುದಾಗಿಯೂ ಎಎಪಿ ಹೇಳಿದೆ.



ಉಚಿತ ಕೊಡುಗೆಗಳನ್ನು ನೀಡುವುದು ದೇಶಕ್ಕೆ ಒಳ್ಳೆಯದು ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಅವರು ಇನ್ನಾದರೂ ಒಪ್ಪಿಕೊಳ್ಳಲಿ
ಅರವಿಂದ ಕೇಜ್ರಿವಾಲ್, ಎಎಪಿ ಮುಖ್ಯಸ್ಥ

ಪ್ರಜಾ ಮತ
ಜನತಂತ್ರದ ಹಬ್ಬ

'ಮೆಟ್ರೊ ಪ್ರಯಾಣ ದರ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆ. ಆದ್ದರಿಂದ ಪ್ರಧಾನಿಗೆ ಮನವಿ ಮಾಡಿದ್ದೇನೆ. ಈ ಯೋಜನೆಗೆ ಬೇಕಾದ ಅರ್ಧದಷ್ಟು ಹಣವನ್ನು ಭರಿಸಲು ಸಿದ್ಧರಿದ್ದೇವೆ' ಎಂದು ಕೇಜ್ರಿವಾಲ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಸೆಕ್ಷನ್ 306: ಯಾಂತ್ರಿಕ ಬಳಕೆ ಸಲ್ಲ'

ನವದೆಹಲಿ(ಪಿಟಿಐ): ಆತ್ಮಹತ್ಯೆ ಪ್ರಕರಣಗಳಲ್ಲಿ ಐಪಿಸಿ ಸೆಕ್ಷನ್ 306 ಅನ್ನು ಯಾಂತ್ರಿಕವಾಗಿ ಬಳಸುವುದನ್ನು ನಿಲ್ಲಿಸಬೇಕು. ಅಲ್ಲದೇ, ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿಯ ಕುಟುಂಬಕ್ಕೆ ಸಮಾಧಾನ ತರುವ ಏಕೈಕ ಉದ್ದೇಶದಿಂದಲೂ ಈ ಸೆಕ್ಷನ್ ಬಳಸಬಾರದು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಮಧ್ಯಪ್ರದೇಶದ ಮಹೇಂದ್ರ ಅವಸೆ ಎಂಬುವವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಮತ್ತು ಕೆ.ವಿ. ವಿಶ್ವನಾಥನ್ ಅವರಿದ್ದ ನ್ಯಾಯಪೀಠ ಈ ಮಾತು ಹೇಳಿದೆ.

'ಇಂತಹ ಪ್ರಕರಣಗಳಿಗೆ ಸಂಬಂಧಿಸಿ ತನಿಖಾ ಸಂಸ್ಥೆಗಳು ಮತ್ತಷ್ಟು ಸಂವೇದನಾಶೀಲವಾಗಿರುವಂತೆ ನೋಡಿಕೊಳ್ಳಬೇಕು' ಎಂದು ಹೇಳಿದೆ. ಐಪಿಸಿ ಸೆಕ್ಷನ್ 306, 'ಆತ್ಮಹತ್ಯೆಗೆ ಕುಮ್ಮಕ್ಕು' ನೀಡುವುದಕ್ಕೆ ಸಂಬಂಧಿಸಿದ್ದಾಗಿದೆ.

'ಪೊಲೀಸರು ತಕ್ಷಣವೇ ಈ ಸೆಕ್ಷನ್ ಅಡಿ ಪ್ರಕರಣ ದಾಖಲಿಸಲು ಮುಂದಾಗುತ್ತಾರೆ ಅನಿಸುತ್ತದೆ. ಆತ್ಮಹತ್ಯೆಗೆ ನಿಜವಾಗಿಯೂ ಕುಮ್ಮಕ್ಕು ನೀಡಿರುವ ವ್ಯಕ್ತಿಗಳು ಕಾನೂನು ಕುಣಿಕೆಯಿಂದ ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳುವುದು ಮುಖ್ಯ. ಆದರೆ, ಆತ್ಮಹತ್ಯೆ ಮಾಡಿಕೊಂಡಿರುವ ವ್ಯಕ್ತಿಯ ಕುಟುಂಬಕ್ಕೆ ತಕ್ಷಣವೇ ಸಮಾಧಾನ ನೀಡಬೇಕು ಎಂಬ ಉದ್ದೇಶದಿಂದ ಯಾವ ವ್ಯಕ್ತಿ ವಿರುದ್ಧವೂ ಕಾಯ್ದೆಯ ಈ ಅವಕಾಶವನ್ನು ಬಳಕೆ ಮಾಡಕೂಡದು' ಎಂದು ಪೀಠ ಹೇಳಿದೆ.

'ಇಂತಹ ಪ್ರಕರಣಗಳಲ್ಲಿ, ವಿಚಾರಣಾ ನ್ಯಾಯಾಲಯಗಳು ಕೂಡ ಬಹಳ ಎಚ್ಚರಿಕೆ ವಹಿಸಬೇಕು ಹಾಗೂ ವಿವೇಚನೆಯಿಂದ ನಿರ್ಧಾರ ಕೈಗೊಳ್ಳಬೇಕು' ಎಂದೂ ಪೀಠ ಹೇಳಿದೆ.

ಐಪಿಸಿ ಸೆಕ್ಷನ್ 306ರಡಿ ದಾಖಲಾಗಿರುವ ಪ್ರಕರಣದಿಂದ ತಮ್ಮನ್ನು ಖುಲಾಸೆಗೊಳಿಸಬೇಕು ಎಂದು ಕೋರಿ ಮಹೇಂದ್ರ ಅವಸೆ ಎಂಬುವವರು ಸಲ್ಲಿಸಿದ್ದ ಅರ್ಜಿಯನ್ನು ಮಧ್ಯಪ್ರದೇಶ ಹೈಕೋರ್ಟ್ ತಿರಸ್ಕರಿಸಿತ್ತು.

ಹೈಕೋರ್ಟ್‌ನ ಈ ಆದೇಶ ಪ್ರಶ್ನಿಸಿ, ಮಹೇಂದ್ರ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ, ಮಹೇಂದ್ರ ಅವರ ವಿರುದ್ಧ ಆರೋಪ ನಿಗದಿ ಮಾಡಲು ಯಾವುದೇ ಆಧಾರಗಳಿಲ್ಲ ಎಂದು ಅಭಿಪ್ರಾಯಪಟ್ಟಿದೆ.

ಆರ್‌.ಜಿ ಕರ್ ಪ್ರಕರಣ; ತೀರ್ಪು ಇಂದು

ಕೋಲ್ಕತ್ತ (ಪಿಟಿಐ): ನಗರದ ಆರ್.ಜಿ. ಕರ್ ವೈದ್ಯಕೀಯ ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿಯ ಮೇಲೆ ನಡೆದ ಅತ್ಯಾಚಾರ ಹಾಗೂ ಆಕೆಯ ಕೊಲೆ ಪ್ರಕರಣದ ಬಹು ನಿರೀಕ್ಷಿತ ತೀರ್ಪು ಶನಿವಾರ ಪ್ರಕಟವಾಗಲಿದೆ.

ಕಳೆದ ವರ್ಷ ಆಗಸ್ಟ್ 9ರಂದು ನಡೆದಿದ್ದ ಘಟನೆಯು ದೇಶದಾದ್ಯಂತ ಭಾರಿ ಆಕ್ರೋಶ ಮತ್ತು ಸುದೀರ್ಘ ಪ್ರತಿಭಟನೆಗೆ ಕಾರಣವಾಗಿತ್ತು.



ಸ್ಥಳೀಯ ಪೊಲೀಸರಿಗೆ ಸ್ವಯಂ ಸೇವಕನಂತೆ ಕೆಲಸ ಮಾಡುತ್ತಿದ್ದ ಸಂಜಯ್ ರಾಯ್ ಎಂಬಾತ ಈ ಪ್ರಕರಣದ ಮುಖ್ಯ ಆರೋಪಿ.

ಸಿಯಾಲ್ದಾ ನ್ಯಾಯಾಲಯದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಅನಿರ್ಬನ್ ದಾಸ್ ಅವರು ಪ್ರಕರಣದ ವಿಚಾರಣೆ ಆರಂಭಿಸಿದ 57 ದಿನಗಳ ಬಳಿಕ ತೀರ್ಪು ಹೊರ ಬೀಳಲಿದೆ.



ಒಂಟೆ ದಳ ಬಿಎಸ್‌ಎಫ್‌ನ ಒಂಟೆ ದಳದ ಸದಸ್ಯರು ನವದೆಹಲಿಯ ಕರ್ತವ್ಯ ಪಥದಲ್ಲಿ ಶುಕ್ರವಾರ ಗಣರಾಜ್ಯೋತ್ಸವ ಪರೇಡ್‌ನ ಪೂರ್ವಭಾವಿ ತಾಲೀಮಿನಲ್ಲಿ ಪಾಲ್ಗೊಂಡರು –ಪಿಟಿಐ ಚಿತ್ರ

ಕೇಜ್ರಿವಾಲ್ ಜಾಮೀನು ಪ್ರಶ್ನಿಸಿದ್ದ ಅರ್ಜಿ ವಿಚಾರಣೆ ಮಾ.21ಕ್ಕೆ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಜಾಮೀನು ಮಂಜೂರು ಮಾಡಿದ್ದನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿರುವ ಅರ್ಜಿಯನ್ನು ಮಾ.21ರಂದು ವಿಚಾರಣೆ ನಡೆಸಲು ದೆಹಲಿ ಹೈಕೋರ್ಟ್ ಪಟ್ಟಿ ಮಾಡಿದೆ.

ನ್ಯಾಯಮೂರ್ತಿ ವಿಕಾಸ್ ಮಹಾಜನ್ ಅವರು ಇ.ಡಿ ಪರ ವಕೀಲರ ಮನವಿ ಮೇರೆಗೆ ಶುಕ್ರವಾರದ ವಿಚಾರಣೆಯನ್ನು ಮುಂದೂಡಿದರು.

ಇ.ಡಿ ಪರ ವಕೀಲರ ಮನವಿಗೆ ಕೇಜ್ರಿವಾಲ್ ಪರ ಹಿರಿಯ ವಕೀಲರು ವಿರೋಧ ವ್ಯಕ್ತಪಡಿಸಿದರು. ಕಳೆದ ವರ್ಷ ಜುಲೈ 12ರಂದು ಸುಪ್ರೀಂ ಕೋರ್ಟ್ ಕೇಜ್ರಿವಾಲ್ ಅವರಿಗೆ ಮಧ್ಯಂತರ ಜಾಮೀನು ಮಂಜೂರು ಮಾಡಿತ್ತು.

ಸೈಫ್ ಚೇತರಿಕೆ: ಆರೋಪಿಗಾಗಿ ಶೋಧ

ಪ್ರಜಾವಾಣಿ ವಾರ್ತೆ

ಮುಂಬೈ: ಮನೆಯಲ್ಲಿಯೇ ದುಷ್ಕರ್ಮಿಯಿಂದ ಚಾಕು ಇರಿತಕ್ಕೆ ಒಳಗಾಗಿರುವ ಬಾಲಿವುಡ್ ನಟ, 54 ವರ್ಷದ ಸೈಫ್ ಅಲಿ ಖಾನ್ ಅವರಿಗೆ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ.

'ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ನಡೆದಾಡುವ ಸ್ಥಿತಿಯಲ್ಲಿ ಇದ್ದಾರೆ. ತೀವ್ರ ನಿಗಾಘಟಕದಿಂದ ವಿಶೇಷ ವಾರ್ಡ್‌ಗೆ ಸ್ಥಳಾಂತರಿಸಲಾಗಿದೆ' ಎಂದು ಶಸ್ತ್ರಚಿಕಿತ್ಸೆ ನಡೆಸಿದ ಲೀಲಾವತಿ ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

ಆರೋಪಿಯ ಪತ್ತೆಗೆ ಪೊಲೀಸರು ಹಲವು ತಂಡ ರಚಿಸಿದ್ದು, ಶೋಧ ತೀವ್ರಗೊಳಿಸಿದ್ದಾರೆ. ಆದರೆ, ಕೃತ್ಯ ನಡೆದ ಗುರುವಾರ ಬೆಳಗಿನ ಜಾವದ ಘಟನಾವಳಿ ಕುರಿತ ಹಲವು ಪ್ರಶ್ನೆಗಳಿಗೆ ಇನ್ನೂ ಉತ್ತರ ಸಿಕ್ಕಿಲ್ಲ.

ಚಾಕು ಇರಿತದ ಮಾಹಿತಿ ಬಂದ ಕೂಡಲೇ ಮುಂಬೈನ ಬಾಂದ್ರಾ ಠಾಣೆಯ ಪೊಲೀಸರು, ಅಪರಾಧ ನಿಗ್ರಹ ಘಟಕ ಆರೋಪಿಯ ಪತ್ತೆಗಾಗಿ ಹಲವು ತಂಡ ರಚಿಸಿ, ವ್ಯಾಪಕ ಶೋಧ ಆರಂಭಿಸಿತು.

ಆರೋಪಿಯು ರೈಲಿನಲ್ಲಿ ಪ್ರಯಾಣಿಸಿ ನೆರೆಯ ಪಾಲ್ಘರ್ ಜಿಲ್ಲೆಗೆ ಪಲಾಯನ ಮಾಡಿರುವ ಶಂಕೆ ಇದ್ದು, ಪೊಲೀಸರ ತಂಡವೊಂದು ವಾಸ್ಯ–ವಿರಾರ್ ವಲಯದಲ್ಲಿಯೂ ಠಿಕಾಣಿ ಹೂಡಿದೆ ಎಂದು ಮೂಲಗಳು ತಿಳಿಸಿವೆ.


ಶಂಕಿತನ ವಶ, ಬಿಡುಗಡೆ: ಆರೋಪಿ ಮುಖಚಹರೆಯ ಹೋಲಿಕೆಯಿದ್ದ, ವಾರಿಸ್ ಅಲಿ ಎಂದು ಗುರುತಿಸಲಾದ ವ್ಯಕ್ತಿಯನ್ನು ವಶಕ್ಕೆ ಪಡೆದ ಪೊಲೀಸರು ವಿಚಾರಣೆ ಬಳಿಕ ಬಿಟ್ಟುಕಳುಹಿಸಿದರು.

ಈತ ವೃತ್ತಿಯಿಂದ ಕಾರ್ಪೆಂಟರ್ ಎಂದು ಗೊತ್ತಾಗಿದ್ದು, ಎರಡು ದಿನದ ಹಿಂದೆ ನಟ ವಾಸವಿದ್ದ ವಸತಿ ಸಮುಚ್ಚಯದ ಫ್ಲ್ಯಾಟ್‌ವೊಂದರಲ್ಲಿ ಕೆಲಸ ಮಾಡಿದ್ದ ಎನ್ನಲಾಗಿದೆ.

ಚಾಕುವಿನಿಂದ ಇರಿದ ಆರೋಪಿಯ ಚಹರೆ ಅಪಾರ್ಟ್‌ಮೆಂಟ್‌ನ ಮಹಡಿಯೊಂದರಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆ ಆಗಿದೆ. ಭದ್ರತೆ ಭೇದಿಸಿ ಆರೋಪಿ ಫ್ಲ್ಯಾಟ್‌ಗೆ ಹೋದುದ್ದಾದರೂ ಹೇಗೆ? ಅಪಾರ್ಟ್‌ಮೆಂಟ್‌ನ ಭದ್ರತಾ ವ್ಯವಸ್ಥೆ, ಅಲ್ಲಿನ ಭದ್ರತಾ ಸಿಬ್ಬಂದಿ ಪಾತ್ರ ಕುರಿತು ಪ್ರಶ್ನೆಗಳು ಎದ್ದಿವೆ.

ಭದ್ರತೆಯಲ್ಲೇ ಲೋಪ: ಭದ್ರತಾ ಪರಿಣತರ ಪ್ರಕಾರ, ನಟನ ನಿವಾಸವಿದ್ದ ಅಪಾರ್ಟ್‌ಮೆಂಟ್‌ನ ಭದ್ರತಾ ವ್ಯವಸ್ಥೆಯಲ್ಲೇ ಲೋಪವಿದೆ. ಮನೆ ಕೆಲಸದವರು, ಕೆಲಸಗಾರರ ಹೇಳಿಕೆಗಳನ್ನು ಪೊಲೀಸರು ದಾಖಲಿಸುತ್ತಿದ್ದಾರೆ.

'ನಾನು ಸೈಫ್ ಅಲಿ ಖಾನ್, ಸ್ಟ್ರೆಚರ್ ತನ್ನಿ.. ಬೇಗ'



'ನಾನು ಸೈಫ್ ಅಲಿ ಖಾನ್. ಬೇಗ.. ಬೇಗ ಸ್ಟ್ರೆಚರ್ ತನ್ನಿ...' ಗುರುವಾರ ಬೆಳಗಿನ ಜಾವ 3 ಗಂಟೆ ವೇಳೆಗೆ ಆಟೊದಲ್ಲಿ ಆಸ್ಪತ್ರೆಗೆ ಬಂದಿದ್ದ ಖಾನ್ ಅಲ್ಲಿನ ಭದ್ರತಾ ಸಿಬ್ಬಂದಿಗೆ ಕೂಗಿ ಹೇಳಿದ್ದು ಹೀಗೆ....

ಅಲ್ಲಿಯವರೆಗೂ ತಾನು ಕರೆತಂದಿದ್ದ ವ್ಯಕ್ತಿ ಬಾಲಿವುಡ್ ನಟ ಸೈಫ್ ಅಲಿ ಖಾನ್ ಎಂದು ಆಟೊ ಚಾಲಕ ಭಜನ್ ಸಿಂಗ್ ರಾಣಾ ಅವರಿಗೂ ಗೊತ್ತಿರಲಿಲ್ಲ. ಕೃತ್ಯ ನಡೆದ ರಾತ್ರಿ ಆಸ್ಪತ್ರೆಗೆ ಕರೆತಂದ ಸಂದರ್ಭವನ್ನು ಆಟೊ ಚಾಲಕ ಸ್ಮರಿಸಿದರು.

'ಆ ದಿನ ರಾತ್ರಿ ನಾನು ಸದ್ಗುರು ಶರಣ್ ಅಪಾರ್ಟ್‌ಮೆಂಟ್ ಎದುರು ಹಾದುಹೋಗುತ್ತಿದ್ದೆ. ಮಹಿಳೆ ಸೇರಿದಂತೆ ಕೆಲವರು ಆಟೊ ತಡೆದರು. ಹಿಂದೆಯೇ, ರಕ್ತದ ಕಲೆಗಳಿದ್ದ ಕುರ್ತಾ ಧರಿಸಿದ್ದ ವ್ಯಕ್ತಿ ನಡೆದು ಬಂದು ಆಟೊ ಏರಿದರು' ಎಂದರು.

'ಅವರ ಕತ್ತು ಮತ್ತು ಬೆನ್ನಿನ ಮೇಲೆ ಗಾಯ ಆಗಿದ್ದನ್ನು ಗಮನಿಸಿದೆ. ಅವರ ಕೈಗೆ ಪೆಟ್ಟಾಗಿರುವುದು ಗಮನಕ್ಕೆ ಬರಲಿಲ್ಲ. ಗಾಯಗಳಾಗಿದ್ದ ವ್ಯಕ್ತಿಯ ಜೊತೆಗೆ 7–8 ವರ್ಷದ ಬಾಲಕ ಕೂಡಾ ಆಟೊ ಏರಿದ್ದ' ಎಂದು ಸ್ಮರಿಸಿದರು.

ಸೈಫ್ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ದೇಹದ ಸ್ಥಿತಿ ಕುರಿತು ಅವರ ಅಭಿಪ್ರಾಯವನ್ನು ಆಧರಿಸಿ 2–3 ದಿನದಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡಬಹುದು
ಡಾ. ನಿತಿನ್ ಢಾಂಗೆ, ಲೀಲಾವತಿ ಆಸ್ಪತ್ರೆ

ಸರ್ಕಾರ ಮತ್ತು ಪೊಲೀಸ್ ಇಲಾಖೆ ಈ ಕೃತ್ಯ ಕುರಿತು ತ್ವರಿತವಾಗಿ ಸ್ಪಂದಿಸಿವೆ. ಗೃಹ ಸಚಿವರು ಸೂಕ್ತ ಕ್ರಮಕೈಗೊಳ್ಳುತ್ತಿದ್ದಾರೆ.
ಚಂದ್ರಶೇಖರ ಭವಂಕುಲೆ
ಕಂದಾಯ ಸಚಿವ

ಸಂಕ್ಷಿಪ್ತ ಸುದ್ದಿ

16 ಮಂದಿ ಭಾರತೀಯರು ನಾಪತ್ತೆ

ನವದೆಹಲಿ(ಪಿಟಿಐ): ರಷ್ಯಾ ಸೇನೆಯಲ್ಲಿರುವ ಭಾರತೀಯರನ್ನು ವಾಪಸ್ ತವರಿಗೆ ಕಳುಹಿಸುವಂತೆ ಭಾರತವು ರಷ್ಯಾವನ್ನು ಒತ್ತಾಯಿಸಿದೆ.

ರಷ್ಯಾದ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ 16 ಭಾರತೀಯರು ನಾಪತ್ತೆಯಾಗಿರುವುದಾಗಿ ರಷ್ಯಾವು ಮಾಹಿತಿ ನೀಡಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಶುಕ್ರವಾರ ತಿಳಿಸಿದೆ.

ರಷ್ಯಾದ ಸೇನೆಯಲ್ಲಿ ತೊಡಗಿಸಿಕೊಂಡಿದ್ದವರಲ್ಲಿ ಇದುವರೆಗೆ 12 ಭಾರತೀಯರು ಮೃತಪಟ್ಟಿದ್ದಾರೆ. ಭಾರತೀಯ ಪ್ರಜೆಗಳು ರಷ್ಯಾ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಬಗ್ಗೆ 126 ಪ್ರಕರಣಗಳು ವರದಿಯಾಗಿದ್ದು, ಇದರಲ್ಲಿ 96 ಜನರು ಅಲ್ಲಿನ ಸಶಸ್ತ್ರ ಪಡೆಗಳಿಂದ ಬಿಡುಗಡೆ ಹೊಂದಿ, ಭಾರತಕ್ಕೆ ಮರಳಿದ್ದಾರೆ ಎಂದು ಎಂಇಎ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

'ರಷ್ಯಾ ಸೇನೆಯಲ್ಲಿ ಇನ್ನೂ 18 ಭಾರತೀಯ ಪ್ರಜೆಗಳು ಉಳಿದಿದ್ದಾರೆ. ಅವರಲ್ಲಿ 16 ವ್ಯಕ್ತಿಗಳ ಬಗ್ಗೆ ಸುಳಿವಿಲ್ಲ. ಅವರನ್ನು ನಾಪತ್ತೆಯಾದವರೆಂದು ರಷ್ಯಾ ವರ್ಗೀಕರಿಸಿದೆ. ಉಳಿದವರನ್ನು ಶೀಘ್ರ ಬಿಡುಗಡೆ ಮಾಡಿಸಿ, ದೇಶಕ್ಕೆ ವಾಪಸ್ ಕರೆತರಲು ನಾವು ಪ್ರಯತ್ನಿಸುತ್ತಿದ್ದೇವೆ' ಎಂದು ಜೈಸ್ವಾಲ್ ತಿಳಿಸಿದ್ದಾರೆ.

ಜ.31ರಿಂದ ಬಜೆಟ್ ಅಧಿವೇಶನ

ನವದೆಹಲಿ: ಸಂಸತ್ತಿನ ಬಜೆಟ್ ಅಧಿವೇಶನದ ಮೊದಲ ಭಾಗವು ಜನವರಿ 31ರಂದು ಆರಂಭಗೊಂಡು ಫೆಬ್ರುವರಿ 13ರಂದು ಕೊನೆಗೊಳ್ಳಲಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ದಾಖಲೆಯ ಎಂಟನೇ ಬಜೆಟ್ ಅನ್ನು ಫೆ.1ರಂದು ಮಂಡಿಸಲಿದ್ದಾರೆ.

ಸಂಪ್ರದಾಯದಂತೆ ಜ.31ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡುವ ಮೂಲಕ ಅಧಿವೇಶನ ಆರಂಭವಾಗಲಿದೆ. ಆ ಬಳಿಕ ಹಣಕಾಸು ಸಚಿವರು ಆರ್ಥಿಕ ಸಮೀಕ್ಷೆ ವರದಿಯನ್ನು ಮಂಡಿಸಲಿದ್ದಾರೆ. ಬಜೆಟ್ ಅಧಿವೇಶನದ ಎರಡನೇ ಭಾಗವು ಮಾರ್ಚ್ 10ರಂದು ಆರಂಭಗೊಂಡು ಏಪ್ರಿಲ್ 4ರಂದು ಕೊನೆಗೊಳ್ಳಲಿದೆ.

'ಕುಲಪತಿ ನೇಮಕ: ರಾಜ್ಯಪಾಲರದ್ದು ಮುಖ್ಯ ಪಾತ್ರ'

ಕೋಲ್ಕತ್ತ (ಪಿಟಿಐ): ರಾಜ್ಯದ ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕ ವಿಚಾರದಲ್ಲಿ ರಾಜ್ಯಪಾಲರು ಮಹತ್ವದ ಪಾತ್ರ ವಹಿಸುತ್ತಾರೆ. ಯುಜಿಸಿ ಇತ್ತೀಚೆಗೆ ಹೊರಡಿಸಿರುವ ಕರಡು ಅಧಿಸೂಚನೆಗೆ ರಾಜ್ಯಗಳು ಬದ್ಧವಾಗಿರಬೇಕು ಎಂದು ವಿಶ್ವವಿದ್ಯಾಲಯಗಳ ಅನುದಾನ ಆಯೋಗದ (ಯುಜಿಸಿ) ಮುಖ್ಯಸ್ಥ ಎಂ.ಜಗದೀಶ್ ಕುಮಾರ್ ಅವರು ಹೇಳಿದರು.

ಪಶ್ಚಿಮ ಬಂಗಾಳದಲ್ಲಿ ರಾಜ್ಯದ 34 ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕ ವಿಚಾರವಾಗಿ ಟಿಎಂಸಿ ಸರ್ಕಾರ ಮತ್ತು ರಾಜ್ಯಪಾಲ ಸಿ.ವಿ. ಆನಂದ್ ಅವರ ಮಧ್ಯೆ ಭಿನ್ನಾಭಿಪ್ರಾಯಗಳು ತಾರಕಕ್ಕೆ ಏರಿರುವ ಮಧ್ಯೆಯೇ ಕುಮಾರ್ ಅವರು ಈ ಹೇಳಿಕೆ ನೀಡಿದರು.



ಎಂ ಜಗದೀಶ್

ರಾಜ್ಯಪಾಲರು ರಾಜ್ಯದ ವಿಶ್ವವಿದ್ಯಾಲಯಗಳ ಪದನಿಮಿತ್ತ ಕುಲಾಧಿಪತಿಯಾಗಿರುತ್ತಾರೆ.

ಸ್ವಾತಂತ್ರ್ಯ ನಂತರ ಅಥವಾ ಅದಕ್ಕೂ ಮುಂಚಿನಿಂದಲೂ ಕುಲಪತಿಗಳನ್ನು ಆಯ್ಕೆ ಮಾಡುವ ವಿಶೇಷಾಧಿಕಾರವನ್ನು ರಾಜ್ಯಪಾಲರು ಹೊಂದಿದ್ದಾರೆ. ಯುಜಿಸಿಯ ಕರಡು ನಿಯಮಾವಳಿಯಲ್ಲೂ ಈ ವಿಚಾರವಾಗಿ ಹೊಸ ಬದಲಾವಣೆ ಇಲ್ಲ ಎಂದು ಹೇಳಿದರು. ವಿಶ್ವವಿದ್ಯಾಲಯಗಳನ್ನು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿಸುವ ಉದ್ದೇಶದಿಂದ ಹೊಸ ಕರಡು ನಿಯಮಾವಳಿಗಳನ್ನು ರೂಪಿಸಲಾಗಿದೆ ಎಂದು ತಿಳಿಸಿದರು.

ಕೋಟಾ: ನೀಟ್ ಆಕಾಂಕ್ಷಿ ಆತ್ಮಹತ್ಯೆ

ಕೋಟಾ(ಪಿಟಿಐ): ರಾಜಸ್ಥಾನದ ಕೋಟಾದಲ್ಲಿ ನೀಟ್ ಪರೀಕ್ಷೆಗೆ ತರಬೇತಿ ಪಡೆಯುತ್ತಿದ್ದ ಒಡಿಶಾ ಮೂಲದ ವಿದ್ಯಾರ್ಥಿಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ಶುಕ್ರವಾರ ತಿಳಿಸಿದರು.

ಇದರೊಂದಿಗೆ ಈ ವರ್ಷ ಕೋಟಾದಲ್ಲಿ ಆತ್ಮಹತ್ಯೆ ಮಾಡಿಕೊಂಡ ನೀಟ್ ಆಕಾಂಕ್ಷಿಗಳ ಸಂಖ್ಯೆ 3ಕ್ಕೆ ಏರಿಕೆಯಾಗಿದೆ. 2024ರಲ್ಲಿ 17 ಅಭ್ಯರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದರು.

ಮೃತ ಯುವಕನನ್ನು ಅಭಿಜೀತ್ ಗಿರಿ ಎಂದು ಗುರುತಿಸಲಾಗಿದ್ದು, ಕಳೆದ ವರ್ಷ ಏಪ್ರಿಲ್‌ನಿಂದ ಈತ ಕೋಟಾದಲ್ಲಿ ತರಬೇತಿ ಪಡೆಯುತ್ತಿದ್ದ.

ಇಲ್ಲಿನ ವಿಜಯ ನಗರ ಪ್ರದೇಶದ ಅಂಬೇಡ್ಕರ್ ಕಾಲೊನಿಯಲ್ಲಿ ಹಾಸ್ಟೆಲ್‌ನಲ್ಲಿ ವಾಸವಿದ್ದ ಅಭಿಜೀತ್ ಗುರುವಾರ ರಾತ್ರಿ ತನ್ನ ಕೋಣೆಯಲ್ಲಿ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದರು.

ಗಾಳಿಪಟದ ಮಾಂಜಾ: 22 ಜನ ಸಾವು

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ರಾಜ್ಯದಲ್ಲಿ ಉತ್ತರಾಯಣದ ಗಾಳಿಪಟ ಉತ್ಸವದ ವೇಳೆ ನಡೆದಿರುವ ಪ್ರತ್ಯೇಕ ಅವಘಡಗಳಲ್ಲಿ 22 ಜನರು ಮೃತಪಟ್ಟಿದ್ದಾರೆ. ಇವರಲ್ಲಿ ಹೆಚ್ಚಿನವರು ಮಾಂಜಾ ದಾರ ಕುತ್ತಿಗೆ ಸೀಳಿ ಮತ್ತು ಗಾಳಿ ಪಟ ಹಾರಿಸುವಾಗ ಆಯತಪ್ಪಿ ಟೆರೇಸ್‌ನಿಂದ ಬಿದ್ದು ಸತ್ತಿದ್ದಾರೆ.


ಮೃತಪಟ್ಟವರಲ್ಲಿ ಪಂಚಮಹಲ್ ಜಿಲ್ಲೆಯ ನಾಲ್ಕು ವರ್ಷದ ಬಾಲಕ ತನ್ನ ತಂದೆಯೊಂದಿಗೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಮಾರಕ ಗಾಜು ಲೇಪಿತ ದಾರ ಅಥವಾ ಮಾಂಜಾ ಆ ಬಾಲಕನ ಕುತ್ತಿಗೆಯನ್ನು ಸೀಳಿತ್ತು.

ಪಟಾನ್ ಜಿಲ್ಲೆಯ ಬಿಲ್ದರ್ ಒಬ್ಬರ ಮಗ ಗಾಳಿಪಟದ ದಾರದಿಂದ ಗಾಯಗೊಂಡ ನಂತರ ಆತನ ಕುತ್ತಿಗೆಗೆ ಸುಮಾರು 200 ಹೊಲಿಗೆಗಳನ್ನು ಹಾಕಲಾಗಿದೆ. ಭರೂಚ್‌ನಲ್ಲಿ 32 ವರ್ಷದ ವ್ಯಕ್ತಿಯೊಬ್ಬರು ಬೈಕ್‌ನಲ್ಲಿ ಹೋಗುತ್ತಿದ್ದಾಗ ಮಾಂಜಾ ಕುತ್ತಿಗೆ ಕೊಯ್ದು ಮೃತಪಟ್ಟಿದ್ದಾರೆ.

ರಾಜ್‌ಕೋಟ್, ಮೆಹ್ಸಾಣಾ, ಸೂರತ್ ಮತ್ತು ಅಹಮದಾಬಾದ್ ನಂತರದಲ್ಲಿ ಅತಿ ಹೆಚ್ಚು ಅವಘಡಗಳು ವಡೋದರಾದಿಂದ ವರದಿಯಾಗಿವೆ. ಅಂದಾಜಿನ ಪ್ರಕಾರ, ಹಬ್ಬದ ಸಮಯದಲ್ಲಿ 2,500ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ರಾಜ್ಯ ತುರ್ತು ಆರೋಗ್ಯ ಸೇವೆಯ ಮಾಹಿತಿಯ ಪ್ರಕಾರ, ಉತ್ತರಾಯಣ ಆಚರಿಸುವ ಜನವರಿ 14 ರಂದು ಗಾಳಿಪಟದ ದಾರದಿಂದ 168 ಮಂದಿ ಗಾಯಗೊಂಡ ಪ್ರಕರಣಗಳು ವರದಿಯಾಗಿವೆ. ಅಲ್ಲದೆ, ಜನವರಿ 15ರಂದು ಇಂತಹ 67 ಪ್ರಕರಣಗಳು ವರದಿಯಾಗಿವೆ. ಮಾಂಜಾ ತಯಾರಿಸುವುದು, ಮಾರಾಟ ಮಾಡುವುದು ಮತ್ತು ಸಂಗ್ರಹಿಸಿದ್ದಕ್ಕಾಗಿ 600ಕ್ಕೂ ಹೆಚ್ಚು ಜನರನ್ನು ಪೊಲೀಸರು ಬಂಧಿಸಿ, ಎಫ್‌ಐಆರ್ ದಾಖಲಿಸಿದ್ದಾರೆ.

ಜಲ್ಲಿಕಟ್ಟು: 7 ಮಂದಿ ಸಾವು



ಚೆನ್ನೈ(ಪಿಟಿಐ): ತಮಿಳುನಾಡಿನಲ್ಲಿ ಕಾಣುಂ ಪೊಂಗಲ್ ದಿನ ನಡೆದ ಜಲ್ಲಿಕಟ್ಟು, ಮಂಜುವಿರಾಟ್ಟು ಸ್ಪರ್ಧೆಗಳಲ್ಲಿ ಏಳು ಜನರು ಸಾವಿಗೀಡಾಗಿದ್ದು, ಹಲವು ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಆಟಗಾರರಿಗೆ ಬಿಸಿಸಿಐನಿಂದ 10 ಮಾರ್ಗಸೂಚಿ

ದೇಶಿ ಕ್ರಿಕೆಟ್‌ನಲ್ಲಿ ಆಡುವುದು ಕಡ್ಡಾಯ

ನವದೆಹಲಿ (ಪಿಟಿಐ): ರಾಷ್ಟ್ರೀಯ ತಂಡದ ಆಯ್ಕೆಗೆ ಪರಿಗಣಿಸಬೇಕಾದರೆ ಕಡ್ಡಾಯವಾಗಿ ದೇಶಿ ಕ್ರಿಕೆಟ್‌ನಲ್ಲಿ ಆಡಬೇಕು, ವಿದೇಶ ಕ್ರಿಕೆಟ್ ಪ್ರವಾಸದ ವೇಳೆ ಪತ್ನಿ, ಕುಟುಂಬ ಸದಸ್ಯರನ್ನು ಜೊತೆಗೆ ಇರಿಸಿಕೊಳ್ಳುವ ಅವಧಿ ಕಡಿತ ಸೇರಿದಂತೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಆಟಗಾರರು ಪಾಲಿಸಬೇಕಾದ 10 ಮಾರ್ಗಸೂಚಿಗಳನ್ನು ಗುರುವಾರ ರಾತ್ರಿ ಪ್ರಕಟಿಸಿದೆ.

ತಂಡದಲ್ಲಿ 'ಸ್ಟಾರ್ ಸಂಸ್ಕೃತಿ'ಗೆ ಕೊನೆಹಾಡುವುದು, ಶಿಸ್ತು ಮತ್ತು ಒಗ್ಗಟ್ಟು ಮೂಡಿಸುವ ಉದ್ದೇಶದಿಂದ ಈ ನಿಯಮಗಳನ್ನು ಮಂಡಳಿಯು ಜಾರಿಗೆ ತಂದಿದೆ ಎಂದು ವಿಶ್ಲೇಷಿಸಲಾಗಿದೆ

ಇದರಂತೆ ತಂಡದ ಎಲ್ಲ ಆಟಗಾರರು ಇನ್ನು ಮುಂದೆ ದೇಶಿ ಕ್ರಿಕೆಟ್‌ನಲ್ಲಿ ಆಡುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ಮೂಲಕ ರಣಜಿ ಸೇರಿದಂತೆ ದೇಶದ ಪ್ರಮುಖ ಟೂರ್ನಿಗಳನ್ನು ತಪ್ಪಿಸಿಕೊಳ್ಳುತ್ತಿದ್ದ ಆಟಗಾರರ ಮೇಲೆ ಚಾಟಿಬೀಸಿದೆ. ತಾರಾ ವರ್ಚಸ್ಸಿನ ಆಟಗಾರರು ದೇಶಿ ಕ್ರಿಕೆಟ್ ತಪ್ಪಿಸಿಕೊಳ್ಳುತ್ತಿದ್ದರು. ವಿರಾಟ್ ಕೊಹ್ಲಿ 2012ರ ನಂತರ ಒಂದೂ ರಣಜಿ ಟ್ರೋಫಿ ಪಂದ್ಯ ಆಡಿಲ್ಲ. ರೋಹಿತ್ ಶರ್ಮಾ 2015ರಲ್ಲಿ ಕೊನೆಯ ಬಾರಿ ರಣಜಿ ಟ್ರೋಫಿ ಪಂದ್ಯ ಆಡಿದ್ದರು.

ಇತ್ತೀಚಿನ ಟೆಸ್ಟ್ ಸರಣಿಗಳಲ್ಲಿ ತಂಡದ ಕಳಪೆ ನಿರ್ವಹಣೆಯ ಕಾರಣ ಈ ರೀತಿಯ ನಿರ್ಬಂಧಗಳನ್ನು ಹೇರುವಂತೆ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ಪರಾಮರ್ಶೆ ಸಭೆಯಲ್ಲಿ ಸಲಹೆ ನೀಡಿದ್ದರು ಎನ್ನಲಾಗಿದೆ. ತವರಿನಲ್ಲಿ ನ್ಯೂಜಿಲೆಂಡ್ ಎದುರು 0–3 ಮುಖಭಂಗ ಅನುಭವಿಸಿದ್ದ ಭಾರತ, ನಂತರ ಆಸ್ಟ್ರೇಲಿಯಾ ಪ್ರವಾಸದಲ್ಲೂ 1–3 ಹಿನ್ನಡೆ ಅನುಭವಿಸಿತ್ತು. ಹತ್ತು ವರ್ಷಗಳ ನಂತರ ಬಾರ್ಡರ್–ಗಾವಸ್ಕರ್ ಟ್ರೋಫಿ ಕಳೆದುಕೊಂಡಿತ್ತು.

ನಿಯಮಗಳನ್ನು ಪಾಲಿಸದಿದ್ದಲ್ಲಿ ಕೇಂದ್ರೀಯ ಗುತ್ತಿಗೆಯಲ್ಲಿ ಸಂಭಾವನೆ ಕಡಿತ ಮತ್ತು ಐಪಿಎಲ್‌ನಲ್ಲಿ ಪಾಲ್ಗೊಳ್ಳುವುದಕ್ಕೆ ನಿರ್ಬಂಧ ಹೇರಲಾಗುವುದು ಎಂದು ಮಂಡಳಿ ಎಚ್ಚರಿಕೆ ನೀಡಿದೆ.

ನಿಯಮದಲ್ಲಿ ವಿನಾಯಿತಿ ಅಗತ್ಯವಿದ್ದಲ್ಲಿ ಆಟಗಾರರು ಮುಖ್ಯ ಕೋಚ್ ಗಂಭೀರ್ ಅಥವಾ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಅವರಿಂದ ಪೂರ್ವಾನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ. 45 ದಿನಗಳಿಗಿಂತ ಹೆಚ್ಚು ಅವಧಿ ಹೊಂದಿರುವ ವಿದೇಶ ಪ್ರವಾಸದ ವೇಳೆ ಆಟಗಾರರ ಜೊತೆ ಕುಟುಂಬ ಸದಸ್ಯರು ಎರಡು ವಾರ ಮಾತ್ರ ಇರಬಹುದು.

ಇತರ ಕೆಲವು ನಿಯಮಗಳು

- ಸರಣಿಯ ವೇಳೆ ಆಟಗಾರರ ವೈಯಕ್ತಿಕ ಮ್ಯಾನೇಜರ್, ಬಾಣಸಿಗರಿಗೆ (ಷೆಫ್) ಅವಕಾಶವಿಲ್ಲ. ವಿಶೇಷ ಸಂದರ್ಭದಲ್ಲಿ ಬಿಸಿಸಿಐ ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ
- ಪ್ರವಾಸದ ವೇಳೆ ವಾಣಿಜ್ಯ ಉದ್ದೇಶದ ಜಾಹೀರಾತು ಶೂಟಿಂಗ್‌ನಲ್ಲಿ ಭಾಗಿಯಾವುದಕ್ಕೆ ನಿಷೇಧ ಹೇರಲಾಗಿದೆ
- ಆಟಗಾರರ ಪಂದ್ಯಕ್ಕೆ ತೆರಳುವಾಗ ಮತ್ತು ಹಿಂತಿರುಗುವಾಗ, ನೆಟ್ ಪ್ರಾಕ್ಟೀಸ್‌ಗೆ ತೆರಳುವ ವೇಳೆ ಕುಟುಂಬ ಸದಸ್ಯರು ಅದೇ ಬಸ್‌ನಲ್ಲಿ ಪಯಣಿಸುವಂತಿಲ್ಲ. ಎಲ್ಲ ಆಟಗಾರರು ಟೀಮ್ ಬಸ್‌ನಲ್ಲೇ ತೆರಳಬೇಕು. ಪ್ರತ್ಯೇಕ ವ್ಯವಸ್ಥೆ ಮಾಡುವಂತಿಲ್ಲ.
- ವಿದೇಶ ಪ್ರವಾಸದ ವೇಳೆ ಒಯ್ಯುವ ಬ್ಯಾಗೇಜ್ ತೂಕಕ್ಕೆ ಮಿತಿ ವಿಧಿಸಲಾಗಿದೆ. ದೀರ್ಘ ಪ್ರವಾಸಕ್ಕೆ ತೆರಳುವ ವೇಳೆ ಬ್ಯಾಗೇಜ್ ತೂಕ 150 ಕೆ.ಜಿ. ಮೀರುವಂತಿಲ್ಲ.

ಭಾರತ ತಂಡದ ಆಯ್ಕೆ ಇಂದು

ಮುಂಬೈ (ಪಿಟಿಐ): ಚಾಂಪಿಯನ್ಸ್ ಟ್ರೋಫಿ ಏಕದಿನ ಟೂರ್ನಿಗೆ ಭಾರತ ಕ್ರಿಕೆಟ್ ತಂಡವನ್ನು ಆಯ್ಕೆ ಮಾಡಲು ಅಜಿತ್ ಅಗರಕರ್ ನೇತೃತ್ವದ ಆಯ್ಕೆ ಸಮಿತಿ ಶನಿವಾರ ಇಲ್ಲಿ ಸೇರಲಿದೆ. ಬೆನ್ನು ನೋವಿಗೆ ಒಳಗಾಗಿರುವ ಅಗ್ರ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರ ಫಿಟ್ನೆಸ್ ಮತ್ತು 15ರ ಬಳಗದಲ್ಲಿ ಯಶಸ್ವಿ ಜೈಸ್ವಾಲ್‌ಗೆ ಅವಕಾಶ ಕಲ್ಪಿಸುವುದು ಸಮಿತಿಯ ಮುಂದಿರುವ ಸವಾಲು ಆಗಿದೆ.

ತಿಂಗಳಾಂತ್ಯದಲ್ಲಿ ಪ್ರವಾಸಿ ಇಂಗ್ಲೆಂಡ್ ವಿರುದ್ಧ ನಡೆಯಲಿರುವ ಸೀಮಿತ ಓವರುಗಳ ಸರಣಿಗೂ ತಂಡದ ಆಯ್ಕೆ ನಡೆಯಲಿದೆ. ಬೂಮ್ರಾ ಅವರು ಬಿಸಿಸಿಐನ ಶ್ರೇಷ್ಠತಾ ಕೇಂದ್ರದಲ್ಲಿದ್ದು, ಅವರ ಫಿಟ್ನೆಸ್ ಮೇಲೆ ನಿಗಾ ಇಡಲಾಗಿದೆ.

ಅಗರಕರ್ ಮತ್ತು ರೋಹಿತ್ ಶರ್ಮಾ ಆಯ್ಕೆ ಸಮಿತಿ ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ತಂಡದ ಘೋಷಣೆ ಮಾಡಲಿದ್ದಾರೆ. 37 ವರ್ಷ ವಯಸ್ಸಿನ ರೋಹಿತ್ ಅವರ ಉಪಸ್ಥಿತಿಯು ಅವರನ್ನು ಏಕದಿನ ತಂಡಕ್ಕೆ ನಾಯಕರಾಗಿ ಮುಂದುವರಿಸುವ ಸೂಚನೆಯ ಲಕ್ಷಣವಾಗಿದೆ.



ಕರ್ನಾಟಕದ ತಂಡದ ಪ್ರೀತಿ ಮಲ್ಲಪ್ಪ (ನೇರಳೆ ಪೋಷಾಕು) ಮತ್ತು ಗುಜರಾತ್ ತಂಡದ ನವೋಮಿ ಲಖನ್ ಪಾಲ್ (ನೀಲಿ) ಚೆಂಡಿಗಾಗಿ ಸೆಣಸಾಟ ನಡೆಸಿದರು ಚಿತ್ರ: ಪ್ರಶಾಂತ್ ಎಚ್‌.ಜಿ.

ಬ್ಯಾಸ್ಕೆಟ್‌ಬಾಲ್: ಕರ್ನಾಟಕ ಮಹಿಳೆಯರಿಗೆ ಜಯ

ಬೆಂಗಳೂರು: ಕರ್ನಾಟಕದ ಮಹಿಳೆಯರ ತಂಡವು ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭಗೊಂಡ ರಾಷ್ಟ್ರೀಯ 3x3 ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಮೊದಲ ದಿನ ಎರಡು ಪಂದ್ಯಗಳನ್ನು ಗೆದ್ದು, ಕ್ವಾರ್ಟರ್ ಫೈನಲ್‌ಗೆ ಸ್ಥಾನವನ್ನು ಖಚಿತಪಡಿಸಿಕೊಂಡಿತು.

ಮೇಖಲಾ ಗೌಡ, ಬಾಂಧವ್ಯಾ ಮಹೇಶ, ಸದಿಯಾ ಸೆಂತಿಕುಮಾರ್ ಮತ್ತು ಪ್ರೀತಿ ಮಲ್ಲಪ್ಪ ಅವರನ್ನು ಒಳಗೊಂಡ ಕರ್ನಾಟಕ ತಂಡವು 22-13ರಿಂದ ಹಿಮಾಚಲ ಪ್ರದೇಶ ತಂಡವನ್ನು ಮಣಿಸಿ ಶುಭಾರಂಭ ಮಾಡಿತು. ಎರಡನೇ ಪಂದ್ಯದಲ್ಲಿ 15–14ರಿಂದ ಗುಜರಾತ್ ತಂಡವನ್ನು ಮಣಿಸಿತು.

ಪುರುಷರಿಗೆ ನಿರಾಸೆ: ಅಭಿಷೇಕ್ ಗೌಡ, ಶಶಾಂಕ್ ರೈ, ಪ್ರತ್ಯಾಂಶು ತೋಮರ್ ಮತ್ತು ಏರಾನ್ ಒಳಗೊಂಡ ಕರ್ನಾಟಕ ಪುರುಷರ ತಂಡವು ಮೊದಲ ಪಂದ್ಯದಲ್ಲಿ 19–21ರಿಂದ ಉತ್ತರ ಪ್ರದೇಶ ತಂಡಕ್ಕೆ ಮಣಿಯಿತು.

ಟೆನಿಸ್: ಪ್ರಿ ಕ್ವಾರ್ಟರ್‌ಗೆ ಜೊಕೊ

ಮೆಲ್ಬರ್ನ್ (ಎಎಫ್‌ಪಿ): ಹತ್ತು ಬಾರಿಯ ಚಾಂಪಿಯನ್ ಸರ್ಬಿಯಾದ ನೊವಾಕ್ ಜೊಕೊವಿಕ್, ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್, ಜರ್ಮನಿಯ ಅಲೆಕ್ಸಾಂಡರ್ ಜ್ವೆರೇವ್ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಶುಕ್ರವಾರ ಪುರುಷರ ಸಿಂಗಲ್ಸ್ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಹ್ಯಾಟ್ರಿಕ್ ಕಿರೀಟದ ಮೇಲೆ ಕಣ್ಣಿಟ್ಟಿರುವ ಬೆಲಾರಸ್‌ನ ಅರಿನಾ ಸಬಲೆಂಕಾ, ಅಮೆರಿಕದ ಕೊಕೊ ಗಾಫ್ ಅವರೂ 16ರ ಘಟ್ಟಕ್ಕೆ ಮುನ್ನಡೆದರು. ಆದರೆ, ಮೂರನೇ ಬಾರಿ ಪ್ರಶಸ್ತಿ ಗೆಲ್ಲುವ ಪ್ರಯತ್ನದಲ್ಲಿದ್ದ ಜಪಾನ್‌ನ ನವೋಮಿ ಒಸಾಕಾ ಗಾಯಾಳಾಗಿ ಮೂರನೇ ಸುತ್ತಿನ ಅರ್ಧದಲ್ಲೇ ಸ್ಪರ್ಧೆಯಿಂದ ಹಿಂದೆ ಸರಿದರು.

ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಕಿರೀಟದ ಹೊಸ್ತಿಲಲ್ಲಿರುವ ಜೊಕೊವಿಚ್ ಮೂರನೇ ಸುತ್ತಿನಲ್ಲಿ 6-1, 6-4, 6-4ರಲ್ಲಿ ನೇರ ಸೆಟ್‌ಗಳಿಂದ ಥಾಮಸ್ ಮಚಾಕ್ ಅವರನ್ನು ಹಿಮ್ಮೆಟ್ಟಿಸಿದರು. ಸರ್ಬಿಯಾ ಆಟಗಾರ ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಝೆಕ್ ರಿಪಬ್ಲಿಕ್‌ನ ಮತ್ತೊಬ್ಬ ಆಟಗಾರ ಜಿರಿ ಲೆಹೆಕಾ ಅವರನ್ನು ಎದುರಿಸಲಿದ್ದಾರೆ. ಇಲ್ಲಿ ಗೆದ್ದವರು ಮುಂದಿನ ಸುತ್ತಿನಲ್ಲಿ ಅಲ್ಕರಾಜ್ ಅವರೊಂದಿಗೆ ಮುಖಾಮುಖಿಯಾಗಲಿದ್ದಾರೆ.

ಮೂರನೇ ಶ್ರೇಯಾಂಕದ ಅಲ್ಕರಾಜ್ 6-2, 6-4, 6-7 (3–7), 6-2ರಿಂದ ಪೋರ್ಚುಗಲ್‌ನ ನುನೊ ಬೋರ್ಗೆಸ್ ಅವರನ್ನು ಮಣಿಸಿದರು. ಎರಡನೇ ಶ್ರೇಯಾಂಕದ ಜ್ವೆರೇವ್ 6-3, 6-4, 6-4ರಿಂದ ಬ್ರಿಟನ್‌ನ ಜಾಕೋಬ್ ಫರ್ನ್ಲಿ ಅವರನ್ನು ಸೋಲಿಸಿದರು. ಅವರಿಗೆ ಮುಂದಿನ ಸುತ್ತಿನಲ್ಲಿ 14ನೇ ಶ್ರೇಯಾಂಕದ ಉಗೊ ಹಂಬರ್ಟ್ (ಫ್ರಾನ್ಸ್) ಎದುರಾಳಿಯಾಗಿದ್ದಾರೆ.

ಸಬಲೆಂಕಾ ಮುನ್ನಡೆ: ವಿಶ್ವದ ಅಗ್ರಮಾನ್ಯ ಆಟಗಾರ್ತಿ ಸಬಲೆಂಕಾ 7-6 (7/5), 6-4ರಿಂದ ಡೆನ್ಮಾರ್ಕ್‌ನ ಕ್ಲಾರಾ ಟೌಸನ್ ಅವರನ್ನು ಮಣಿಸಿದರು.

ಮೂರನೇ ಶ್ರೇಯಾಂಕದ ಗಾಫ್ 6-4, 6-2ರಿಂದ ಕೆನಡಾದ 30ನೇ ಶ್ರೇಯಾಂಕದ ಲೇಯ್ಲಾ ಫರ್ನಾಂಡಿಸ್ ಅವರನ್ನು ಮಣಿಸಿದರು.

ಬೋಪಣ್ಣ ಜೋಡಿ ಮುನ್ನಡೆ: ಪುರುಷರ ಡಬಲ್ಸ್‌ನಲ್ಲಿ ನಿರಾಸೆ ಮೂಡಿಸಿದ ಭಾರತದ ಅನುಭವಿ ಆಟಗಾರ ರೋಹನ್ ಬೋಪಣ್ಣ ಅವರು ಚೀನಾದ ಜೊತೆಗಾರ್ತಿ ಶುವಾಯ್ ಜಾಂಗ್ ಅವರೊಂದಿಗೆ ಮಿಶ್ರ ಡಬಲ್ಸ್‌ನಲ್ಲಿ ಎರಡನೇ ಸುತ್ತು ಪ್ರವೇಶಿಸಿದರು.

ಬೋಪಣ್ಣ– ಶುವಾಯ್ ಜೋಡಿಯು ಮೊದಲ ಸುತ್ತಿನಲ್ಲಿ 6-4, 6-4ರಿಂದ ಇವಾನ್ ದೋಡಿಗ್ ಮತ್ತು ಕ್ರಿಸ್ಟಿನಾ ಮ್ಲಾಡೆನೊವಿಕ್ ಅವರನ್ನು ಮಣಿಸಿತು.



ಗೆಲುವಿನ ಬಳಿಕ ಭಾವುಕರಾದ ಸರ್ಬಿಯಾದ ನೊವಾಕ್ ಜೊಕೊವಿಕ್ –ಎಎಫ್‌ಪಿ ಚಿತ್ರ

ಗೃಹ ಸಚಿವಾಲಯದ ಅಧಿಕಾರಿಗಳನ್ನು ಭೇಟಿ ಮಾಡಿದ ನಿಯೋಗ

ಮೈತೇಯಿ ಕಡೆಯಿಂದಲೂ ಶಾಂತಿ ಅಗತ್ಯ: ಕುಕಿ

ಪ್ರಜಾವಾಣಿ ವಾರ್ತೆ

ಗುವಾಹಟಿ: ಸಂಘರ್ಷ ಪೀಡಿತ ಮಣಿಪುರದಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಕುಕಿ ಸಮುದಾಯ ಶಾಂತಿ ಕಾಪಾಡಿಕೊಳ್ಳಬೇಕು ಎಂದು ಕೇಂದ್ರ ಗೃಹ ಸಚಿವಾಲಯ (ಎಂಎಚ್‌ಎ) ಶುಕ್ರವಾರ ಹೇಳಿದೆ.

ಮೈತೇಯಿ ಸಮುದಾಯದ ಕಡೆಯಿಂದಲೂ ಶಾಂತಿ ಕಾಪಾಡಿಕೊಳ್ಳುವ ಅಗತ್ಯವಿದೆ ಎಂದು ಕುಕಿ ಸಂಘಟನೆಗಳ ಪ್ರತಿನಿಧಿಗಳು ಸಚಿವಾಲಯ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಕುಕಿ ಜೋ ಸಮುದಾಯಗಳನ್ನು ಪ್ರತಿನಿಧಿಸುವ ಸರ್ವ ಸಂಘಟನೆಗಳ ವೇದಿಕೆಯಾದ ಕುಕಿ ಜೋ ಕೌನ್ಸಿಲ್‌ನ (ಕೆಜಡ್‌ಸಿ) ನಾಲ್ವರು ಸದಸ್ಯರ ನಿಯೋಗವು ಶುಕ್ರವಾರ ನವದೆಹಲಿಯಲ್ಲಿ ಕೇಂದ್ರ ಗೃಹ ಸಚಿವಾಲಯದ ಅಧಿಕಾರಿಗಳನ್ನು ಭೇಟಿ ಮಾಡಿತು.

ಮೈತೇಯಿ ಮತ್ತು ಕುಕಿ ಜೋ ಬುಡಕಟ್ಟು ಸಮುದಾಯಗಳ ನಡುವೆ 2023ರಲ್ಲಿ ಸ್ಫೋಟಗೊಂಡ ಜನಾಂಗೀಯ ಸಂಘರ್ಷದ ನಂತರ ಮೊದಲ ಬಾರಿಗೆ ಇಂತಹ ಪ್ರಮುಖ ಸಭೆ ನಡೆದಿದೆ.

'ಇದು ಒಂದು ರೀತಿಯಲ್ಲಿ ಸಂಘರ್ಷ ಶಮನಗೊಳಿಸುವ ನಿಟ್ಟಿನಲ್ಲಿ ಮಹತ್ವದ ಸಭೆಯಾಗಿತ್ತು. ಸಚಿವಾಲಯದ ಅಧಿಕಾರಿಗಳು ಪರಿಹಾರ ಕಂಡುಕೊಳ್ಳುವ ಸಲುವಾಗಿ ನಮಗೆ ಶಾಂತಿ ಕಾಪಾಡಿಕೊಳ್ಳುವಂತೆ ಹೇಳಿದರು. ಆದರೆ, ನಾವು ಕೂಡ ಮೈತೇಯಿ ಕಡೆಯಿಂದಲೂ ಶಾಂತಿ ಕಾಪಾಡಿಕೊಳ್ಳಬೇಕೆಂದು ತಿಳಿಸಿದ್ದೇವೆ. ಮೈತೇಯಿ ಜನರು ದಾಳಿ ನಡೆಸುವಾಗ ನಮ್ಮ ಜನರು, ರಕ್ಷಣೆಗಾಗಿ ಪ್ರತೀಕಾರ ತೀರಿಸಿಕೊಳ್ಳುವುದನ್ನು ಬಿಟ್ಟು ನಮಗೆ ಬೇರೆ ಆಯ್ಕೆ ಇಲ್ಲ' ಎಂದು ಕೌನ್ಸಿಲ್‌ನ ವಕ್ತಾರ ಗಿಂಜಾ ವುಯಲ್‌ಜಾಂಗ್ ಸಭೆಯ ನಂತರ 'ಪ್ರಜಾವಾಣಿ'ಗೆ ದೂರವಾಣಿಯಲ್ಲಿ ತಿಳಿಸಿದರು.

ಕೌನ್ಸಿಲ್‌ನ ಅಧ್ಯಕ್ಷ ಹೆನ್ಲಿಯಾಂತಂಗ್ ತಂಗ್ಲೆಟ್ ಅವರು ಕೌನ್ಸಿಲ್ ನಿಯೋಗದ ನೇತೃತ್ವ ವಹಿಸಿದ್ದರೆ, ಈಶಾನ್ಯದ ಈ ರಾಜ್ಯಕ್ಕೆ ಗೃಹ ಸಚಿವಾಲಯದ ಸಲಹೆಗಾರರಾಗಿರುವ ಎ.ಕೆ. ಮಿಶ್ರಾ ಅವರು ಸರ್ಕಾರದ ಪರವಾಗಿ ನೇತೃತ್ವ ವಹಿಸಿದ್ದರು. ಒಂದು ಗಂಟೆಗೂ ಹೆಚ್ಚು ಕಾಲ ಸಭೆ ನಡೆಯಿತು ಎಂದು ಅವರು ತಿಳಿಸಿದರು.

ಇದೇ ವೇಳೆ ಕೌನ್ಸಿಲ್, ಗೃಹ ಸಚಿವ ಅಮಿತ್ ಶಾ ಅವರಿಗೆ ಮನವಿ ಪತ್ರ ಸಲ್ಲಿಸಿದ್ದು, ಇದರಲ್ಲಿ 'ಪ್ರತ್ಯೇಕ ಆಡಳಿತ'ವೇ ಏಕೈಕ ಮಾರ್ಗ ಎಂದು ಪುನರುಚ್ಚರಿಸಿದೆ.

₹60 ಕೋಟಿ ಮೌಲ್ಯದ ಡ್ರಗ್ಸ್ ವಶ



ಕುಕಿ ಪ್ರಾಬಲ್ಯವಿರುವ ಚುರಾಚಾಂದ್‌ಪುರ್ ಜಿಲ್ಲೆಯ ಮಾತಾ ಗ್ರಾಮದಿಂದ ಗುರುವಾರ ಸುಮಾರು ₹60 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿರುವುದಾಗಿ ಅಸ್ಸಾಂ ರೈಫಲ್ಸ್ ಶುಕ್ರವಾರ ತಿಳಿಸಿದೆ.

ಮಹಿಳೆ ಸೇರಿ ಇಬ್ಬರನ್ನು ಬಂಧಿಸಲಾಗಿದೆ. ಮ್ಯಾನ್ಮಾರ್‌ನಿಂದ ಚುರಾಚಾಂದ್‌ಪುರಕ್ಕೆ ಈ ಡ್ರಗ್ಸ್ ಕಳ್ಳಸಾಗಣೆಯಾಗುತ್ತಿತ್ತು ಎಂದು ಅಸ್ಸಾಂ ರೈಫಲ್ಸ್ ಹೇಳಿಕೆಯಲ್ಲಿ ತಿಳಿಸಿದೆ.

ವಿಜಯ್ ಹಜಾರೆ ಟ್ರೋಫಿ ಫೈನಲ್ ಇಂದು: ಮಯಂಕ್ ಪಡೆಗೆ 5ನೇ ಪ್ರಶಸ್ತಿಯ ಗುರಿ

ಕರ್ನಾಟಕಕ್ಕೆ ಕರುಣ್ ಕಟ್ಟಿಹಾಕುವ ಸವಾಲು

ವಡೋದರ (ಪಿಟಿಐ): ಕರ್ನಾಟಕ ತಂಡ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಶನಿವಾರ ವಿದರ್ಭ ತಂಡವನ್ನು ಎದುರಿಸಲಿದ್ದು, ಐದನೇ ಬಾರಿ ಪ್ರಶಸ್ತಿ ಗೆದ್ದು ದಾಖಲೆ ಸರಿಗಟ್ಟುವತ್ತ ಚಿತ್ತ ನೆಟ್ಟಿದೆ. ಆದರೆ ಈ ಸಲ ಟೂರ್ನಿಯಲ್ಲಿ ರನ್‌ಗಳ ಮಹಾಪೂರ ಹರಿಸುತ್ತಿರುವ ವಿದರ್ಭ ನಾಯಕ ಕರುಣ್ ನಾಯರ್ ಅವರನ್ನು ಕಟ್ಟಿಹಾಕುವುದು ಅವರ 'ಮಾಜಿ ತಂಡ'ದ ಮುಂದಿರುವ ಸವಾಲಾಗಿದೆ.

ಹಿಂದೆ ಕರ್ನಾಟಕದ ಪ್ರಮುಖ ಬ್ಯಾಟರ್ ಆಗಿದ್ದ ಕರುಣ್, 2022ರಿಂದ ವಿದರ್ಭ ತಂಡಕ್ಕೆ ಆಡುತ್ತಿದ್ದಾರೆ. ನಾಯಕನಾಗಿ ಬಡ್ತಿ ಪಡೆದ ಬಳಿಕವಂತೂ ಭರ್ಜರಿ ಯಶಸ್ಸು ಕಾಣುತ್ತಿದ್ದಾರೆ. 33 ವರ್ಷ ವಯಸ್ಸಿನ ಆಟಗಾರ ಈ ಬಾರಿಯ ಟೂರ್ನಿಯಲ್ಲಿ 752 ರನ್‌ಗಳ ಅಭೂತಪೂರ್ವ ಸರಾಸರಿ ಹೊಂದಿದ್ದು, ಒಮ್ಮೆ ಮಾತ್ರ ಔಟ್ ಆಗಿದ್ದಾರೆ. 112*, 44*, 111*, 112, 122* ಮತ್ತು 88* ರನ್ ಗಳಿಸಿದ್ದಾರೆ.


ಇನ್ನು 79 ರನ್ ಗಳಿಸಿದರೆ ಅವರು ಎನ್. ಜಗದೀಶನ್ (2022–23ರಲ್ಲಿ 830 ರನ್) ಅವರ ದಾಖಲೆ ಮುರಿಯಬಹುದು. ಜೊತೆಗೆ ಇಂಗ್ಲೆಂಡ್ ವಿರುದ್ಧ ಏಕದಿನ ಸರಣಿಗೆ ಆಯ್ಕೆ ಅವಕಾಶ ಇನ್ನಷ್ಟು ಉಜ್ವಲಗೊಳಿಸಬಹುದು.

ಅವರಿಗೆ ಆರಂಭ ಆಟಗಾರರಾದ ಧ್ರುವ್ ಶೋರೆ, ಯಶ್ ರಾಥೋಡ್ ಅವರಿಂದ ಬೆಂಬಲ ಸಿಗುತ್ತಿದೆ. ಧ್ರುವ್ ಮತ್ತು ರಾಥೋಡ್ ತಲಾ 384 ರನ್ ಗಳಿಸಿದ್ದಾರೆ. ಹೀಗಾಗಿ ಕರ್ನಾಟಕ ಬೌಲರ್‌ಗಳ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ.



ಕರ್ನಾಟಕ ತಂಡದ ನಾಯಕ ಮಯಂಕ್

ನಾಯರ್‌ಗೆ ಗರಿಗೆದರಿದ ಕನಸು



ಬೆಂಗಳೂರು: ವಿಜಯ್ ಹಜಾರೆ ಟ್ರೋಫಿಯಲ್ಲಿ ಅತ್ಯಮೋಘ ಯಶಸ್ಸು ಕಾಣುತ್ತಿರುವ ವಿದರ್ಭ ತಂಡದ ನಾಯಕ ಕರುಣ್ ನಾಯರ್ ಅವರು ಎಂಟು ವರ್ಷಗಳ ನಂತರ ರಾಷ್ಟ್ರೀಯ ತಂಡಕ್ಕೆ ಮರಳುವ ಆಶಾವಾದದಲ್ಲಿ ಇದ್ದಾರೆ.

ಶೀಘ್ರದಲ್ಲೇ ಇಂಗ್ಲೆಂಡ್ ವಿರುದ್ಧ ಏಕದಿನ ಸರಣಿ ಮತ್ತು ಮುಂದಿನ ತಿಂಗಳು ಐಸಿಸಿ ಚಾಂಪಿಯನ್ಸ್ ಟ್ರೋಫಿಗೆ ಭಾರತ ತಂಡವನ್ನು ಆಯ್ಕೆಗಾರರು ಪ್ರಕಟಿಸಲಿದ್ದಾರೆ.

'ಯಾವತ್ತಿದ್ದರೂ ನನ್ನ ಕನಸು ಭಾರತ ತಂಡಕ್ಕೆ ಆಡುವುದು. ಈಗಲೂ ಆ ಕನಸು ಜೀವಂತವಾಗಿಟ್ಟು-ಕೊಂಡಿದ್ದೇನೆ. ಆ ಕನಸು ಈಡೇರಿಸಲು ಆಡುತ್ತಿದ್ದೇನೆ. ಹೀಗಾಗಿ ದೇಶಕ್ಕೆ ಆಡುವುದು ನನ್ನ ಮುಂದಿರುವ ಏಕೈಕ ಗುರಿ' ಎಂದು ಕರುಣ್ ಹೇಳಿದ್ದಾರೆ.

'ಇದು ತಂಡಕ್ಕೆ ನನ್ನ ಮೂರನೇ ಪುನರಾಗಮನದ ಯತ್ನ. ನನಗೆ ಸಿಗುವ ಪ್ರತಿಯೊಂದು ಪಂದ್ಯದಲ್ಲಿ ರನ್ ಗಳಿಸುತ್ತೇನೆ. ಉಳಿದಿದ್ದು ನನ್ನ ಕೈಯ್ಯಲ್ಲಿ ಇಲ್ಲ' ಎಂದು ಹೇಳಿದರು.

ವೇಗದ ಬೌಲರ್ ವಾಸುಕಿ ಕೌಶಿಕ್ (15 ವಿಕೆಟ್) ಮತ್ತು ಎಡಗೈ ವೇಗಿ ಅಭಿಲಾಷ್ ಶೆಟ್ಟಿ (14 ವಿಕೆಟ್) ಪರಿಣಾಮಕಾರಿ ಎನಿಸಿದ್ದಾರೆ. ಶ್ರೇಯಸ್ ಗೋಪಾಲ್ (18 ವಿಕೆಟ್) ಅವರು ಪ್ರಮುಖ ಸ್ಪಿನ್ನರ್ ಆಗಿ ಮಿಂಚಿದ್ದಾರೆ. ಅನುಭವಿ ಪ್ರಸಿದ್ಧಕೃಷ್ಣ ಅವರಿಂದ ಬೌಲಿಂಗ್‌ಗೆ ಇನ್ನಷ್ಟು ಬಲಬಂದಿದೆ

ನಾಯಕ ಮಯಂಕ್ ಅಗರವಾಲ್ ಅವರು ನಾಲ್ಕು ಶತಕ ಸೇರಿ 619 ರನ್ ಹೊಡೆದಿದ್ದಾರೆ. ಅವರ ಸರಾಸರಿ 103.16. ಆದರೆ ಇತರ ಆಟಗಾರರೂ ಯಶಸ್ಸು ಪಡೆದಿರುವುದು ತಂಡದ ವಿಶ್ವಾಸ ಹೆಚ್ಚಿಸಿದೆ. 21 ವರ್ಷ ವಯಸ್ಸಿನ ಆರ್. ಸ್ಮರಣ್ (340), ಕೆ.ವಿ.ಅನೀಶ್ (417) ಮತ್ತು ವಿಕೆಟ್ ಕೀಪರ್ ಕೃಷ್ಣನ್ ಶ್ರೀಜಿತ್ (225) ಅವರು ನಿರ್ಣಾಯಕ ಸಂದರ್ಭಗಳಲ್ಲಿ ನೆರವಿಗೆ ಬಂದಿದ್ದಾರೆ.

ಅನುಭವಿ ದೇವದತ್ತ ಪಡಿಕ್ಕಲ್ (188) ಆಸ್ಟ್ರೇಲಿಯಾ ಪ್ರವಾಸದ ಬಳಿಕ ತಂಡಕ್ಕೆ ಮರಳಿರುವುದು ಬ್ಯಾಟಿಂಗ್ ಶಕ್ತಿ ವೃದ್ಧಿಸಿದೆ. ಆಡಿದ ಎರಡು ಪಂದ್ಯಗಳಲ್ಲಿ ಅವರು ಕ್ರಮವಾಗಿ 102 (ಬರೋಡ ವಿರುದ್ಧ) ಮತ್ತು 86 ರನ್ (ಸೆಮಿಫೈನಲ್ ನಲ್ಲಿ ಹರಿಯಾ ವಿರುದ್ಧ) ಗಳಿಸಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಪೋರ್ಟ್ಸ್ 18

ವೇಟ್‌ಲಿಫ್ಟಿಂಗ್‌ನಲ್ಲಿ ಮನೋಜ್, ನಾಗರಾಜ್ ಪ್ರಥಮ

ಕಯಾಕಿಂಗ್: ಸಮರಾಗೆ ನಾಲ್ಕು ಚಿನ್ನ

• ವಿಕ್ರಂ ಕಾಂತಿಕೆರೆ
ನವೀನ್ ಕುಮಾರ್ ಜಿ.

ಮಂಗಳೂರು/ಉಡುಪಿ: ಬ್ರಹ್ಮಾವರದ ಹೇರೂರು ಸೇತುವೆ ಬಳಿಯ ಮಡಿಸಾಲು ಹೊಳೆಯ ಸುಂದರ ಪರಿಸರದಲ್ಲಿ ಅಮೋಘ ಪ್ರದರ್ಶನ ನೀಡಿದ ಬೆಂಗಳೂರು ನಗರ ಜಿಲ್ಲೆಯ ಸಮರಾ ಚಾಕೊ ಕರ್ನಾಟಕ ಕ್ರೀಡಾಕೂಟದ ಕಯಾಕಿಂಗ್‌ನಲ್ಲಿ ನಾಲ್ಕು ಚಿನ್ನ ಗೆದ್ದು ಶುಕ್ರವಾರ ಮಿಂಚಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ, ದಕ್ಷಿಣ ಕನ್ನಡ-ಉಡುಪಿ ಜಿಲ್ಲಾಡಳಿತ ಆಯೋಜಿಸಿರುವ ಕ್ರೀಡಾಕೂಟದ ಮಹಿಳೆಯರ 200 ಮತ್ತು 500 ಮೀಟರ್ಸ್‌ನ ಕೆ–1 ಹಾಗೂ ಕೆ–2 ವಿಭಾಗಗಳೆಡರಲ್ಲೂ ಅವರು ಪಾರಮ್ಯ ಮೆರೆದರು.

ಕೆ–1 ವಿಭಾಗದಲ್ಲಿ 3 ನಿಮಿಷ 17 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಸಮರಾ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹರಿಣಿ ಸ್ವಾಮಿನಾಥನ್ ಅವರನ್ನು ಹಿಂದಿಕ್ಕಿದರು. ಕೋಲಾರದ ಅದ್ವಿತಾ ತನ್ವಾನಿ ಕಂಚಿನ ಪದಕ ಗಳಿಸಿದರು. ಕೆ–2 ವಿಭಾಗದಲ್ಲಿ ಸಮರಾ ಮತ್ತು ಹರಿಣಿ ಸ್ವಾಮಿನಾಥನ್ ಜೋಡಿ 3 ನಿಮಿಷ 26 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಗೆದ್ದುಕೊಂಡಿತು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತೇಜಶ್ರೀ ಮತ್ತು ಅದ್ವಿತಾ ತನ್ವಾನಿ ಬೆಳ್ಳಿ ಪದಕ ಮತ್ತು ಮಂಗಳೂರಿನ ಅಬ್ಬಿತಾ ಪ್ರಶಾಂತ್ ಮತ್ತು ಅವ್ಯಾ ಮನು ಕಂಚಿನ ಪದಕ ಗೆದ್ದರು.

200 ಮೀಟರ್ಸ್ ಕೆ–1 ವಿಭಾಗದಲ್ಲಿ 1 ನಿಮಿಷ 18 ಸೆಕೆಂಡ್‌ಗಳಲ್ಲಿ ಗುರಿಮಟ್ಟಿದ ಸಮರಾ ಚಾಕೊ ಅಗ್ರಸ್ಥಾನ ಪಡೆದರು. 200 ಮೀಟರ್ಸ್ ಕೆ–2 ವಿಭಾಗದಲ್ಲೂ ಸಮರಾ–ಹರಿಣಿ ಜೋಡಿ ಚಿನ್ನದ ಪದಕ ಮುಡಿಗೇರಿಸಿಕೊಂಡರು.

ಮನೋಜ್, ನಾಗರಾಜ್‌ಗೆ ಚಿನ್ನ: ಮೂಡುಬಿದಿರೆ ಆಳ್ವಾಸ್ ಕಾಲೇಜಿನ ನಾಗರಾಜ್ ಕೆ.ಎಸ್ ಮತ್ತು ಉಜಿರೆ ಎಸ್‌ಡಿಎಂ ಕಾಲೇಜಿನ ಮನೋಜ್ ಜಿ.ಆರ್ ಪುರುಷರ ವೇಟ್‌ಲಿಫ್ಟಿಂಗ್‌ನಲ್ಲಿ ಕ್ರಮವಾಗಿ 61 ಕೆಜಿ ಮತ್ತು 55 ಕೆಜಿ ವಿಭಾಗದ ಚಿನ್ನ ತಮ್ಮದಾಗಿಸಿಕೊಂಡರು. ಮಹಿಳೆಯರ 49 ಕೆಜಿ ವಿಭಾಗದ ಚಿನ್ನ ಬೆಂಗಳೂರಿನ ಲಕ್ಷ್ಮಿ ಕೆ.ಜಿ ಅವರ ಪಾಲಾದರೆ ಬೆಂಗಳೂರು ಡಿವೈಇಎಸ್‌ನ ಪಲ್ಲವಿ 45 ಕೆಜಿ ವಿಭಾಗದ ಚಿನ್ನ ಗಳಿಸಿದರು.



500 ಮೀಟರ್ಸ್ ಕೆ2 ವಿಭಾಗದಲ್ಲಿ ಚಿನ್ನದ ಪದಕ ಗೆದ್ದ ಹರಿಣಿ ಸ್ವಾಮಿನಾಥನ್ ಮತ್ತು ಸಮರಾ ಚಾಕೊ

'ಅಥ್ಲೀಟ್ಸ್‌ಗೆ ಕೃಪಾಂಕ; ಬಹುಮಾನ ಮೊತ್ತ ಹೆಚ್ಚಳ'

ಮಂಗಳೂರು: 'ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಕ್ರೀಡಾಪಟುಗಳಿಗೆ ನೀಡುವ ಬಹುಮಾನ ಮೊತ್ತವನ್ನು ಹೆಚ್ಚಿಸಲಾಗುವುದು, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡಲು ಪ್ರಯತ್ನಿಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ರೀಡಾಕೂಟಕ್ಕೆ ಚಾಲನೆ ನೀಡಿ ಹೇಳಿದರು.

ಫಲಿತಾಂಶಗಳು: ಕಯಾಕಿಂಗ್: 200 ಮೀ, ಕೆ–1: ಸಮರಾ ಚಾಕೊ (ಬೆಂಗಳೂರು ನಗರ ಜಿಲ್ಲೆ)–1. ಕಾಲ: 1 ನಿಮಿಷ 18 ಸೆಕೆಂಡು, ಹರಿಣಿ ಎಸ್ (ಬೆಂಗಳೂರು ಗ್ರಾಮಾಂತರ)–2, ಆದ್ಯ ಕುಮಾರ್ (ಚಿತ್ರದುರ್ಗ)–3; ಕೆ–2: ಸಮರಾ ಚಾಕೊ-ಹರಿಣಿ ಎಸ್ (ಬೆಂಗಳೂರು)–1. ಕಾಲ: ತೇಜಶ್ರೀ-ಅದ್ವಿತಾ (ಬೆಂಗಳೂರು ಗ್ರಾ)–2, ಅಬ್ಬಿತಾ-ಅವ್ಯಾ (ಮಂಗಳೂರು)–3; 500 ಮೀಟರ್ಸ್ ಕೆ–1: ಸಮರಾ ಚಾಕೊ (ಬೆಂಗಳೂರು)–1. ಕಾಲ: 3ನಿ 17ಸೆ, ಹರಿಣಿ ಸ್ವಾಮಿನಾಥನ್ (ಬೆಂಗಳೂರು ಗ್ರಾಮಾಂತರ)–2, ಅದ್ವಿತಾ ತನ್ವಾನಿ (ಕೋಲಾರ)–3; ಕೆ–2: ಸಮರ ಚಾಕೊ-ಹರಿಣಿ ಸ್ವಾಮಿನಾಥನ್ (ಬೆಂಗಳೂರು)–1. ಕಾಲ: 3ನಿ 26ಸೆ, ತೇಜಶ್ರೀ-ಅದ್ವಿತಾ ತನ್ವಾನಿ (ಬೆಂಗಳೂರು ಗ್ರಾಮಾಂತರ)–2, ಅಬ್ಬಿತಾ-ಅವ್ಯಾ ಮನು (ಮಂಗಳೂರು)–3.

ವೇಟ್‌ಲಿಫ್ಟಿಂಗ್: ಪುರುಷರ 61 ಕೆಜಿ: ನಾಗರಾಜ್ ಕೆ.ಎಸ್ (ಆಳ್ವಾಸ್ ಮೂಡುಬಿದಿರೆ)–1. ಭಾರ: 220 ಕೆಜಿ (95 + 125); 55 ಕೆಜಿ: ಮನೋಜ್ ಆರ್. ಜಿ (ಎಸ್‌ಸಿಎಂ ಉಜಿರೆ)–1. ಭಾರ: 192 ಕೆಜಿ (82 + 110).

ಮಹಿಳೆಯರ 49 ಕೆಜಿ: ಲಕ್ಷ್ಮಿ ಬಿ (ಬೆಂಗಳೂರು)–1. ಭಾರ: 156 ಕೆಜಿ (71 + 85).

19 ವರ್ಷದೊಳಗಿನ ಮಹಿಳಾ ಟಿ20 ವಿಶ್ವಕಪ್ ಇಂದಿನಿಂದ

ಕೌಲಾಲಂಪುರ್ (ಪಿಟಿಐ): ಶನಿವಾರ ಆರಂಭವಾಗಲಿರುವ ಐಸಿಸಿ 19 ವರ್ಷದೊಳಗಿನ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪ್ರಾಬಲ್ಯ ಸಾಧಿಸಲು ಭಾರತದ ಉದಯೋನ್ಮುಖ ಆಟಗಾರ್ತಿಯರು ಉತ್ಸುಕರಾಗಿದ್ದಾರೆ.

ಭಾರತ ತಂಡವು ಭಾನುವಾರ ವೆಸ್ಟ್‌ಇಂಡೀಸ್ ವಿರುದ್ಧ ಆಡುವ ಮೂಲಕ ಅಭಿಯಾನ ಆರಂಭಿಸಲಿದೆ.

ಬೆಂಗಳೂರು ಎಫ್‌ಸಿಗೆ ಹೈದರಾಬಾದ್ ಸವಾಲು

ಹೈದರಾಬಾದ್ (ಪಿಟಿಐ): ಪಾಯಿಂಟ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಶನಿವಾರ ಆತಿಥೇಯ ಹೈದರಾಬಾದ್ ಎಫ್‌ಸಿ ತಂಡವನ್ನು ಎದುರಿಸಲಿದೆ.

ತವರಿನಲ್ಲಿ ನಡೆದ ಕೊನೆಯ ಪಂದ್ಯದಲ್ಲಿ ಮೊಹಮ್ಮಡನ್ ಎಸ್‌ಸಿ ವಿರುದ್ಧ ಆಘಾತಕಾರಿ ಸೋಲು ಕಂಡಿದ್ದ ಸುನಿಲ್ ಚೆಟ್ರಿ ಬಳಗವು ಗೆಲುವಿನ ಹಳಿಗೆ ಮರಳುವ ಪ್ರಯತ್ನದಲ್ಲಿದೆ. 15 ಪಂದ್ಯಗಳಲ್ಲಿ ಎಂಟನ್ನು ಗೆದ್ದು 27 ಅಂಕ ಪಡೆದಿದೆ. 15 ಪಂದ್ಯಗಳಲ್ಲಿ ಎರಡನ್ನು ಗೆದ್ದು 9 ಅಂಕ ಗಳಿಸಿರುವ ಹೈದರಾಬಾದ್ ತಂಡವು ಪಾಯಿಂಟ್ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ.

ಸೆಮಿಫೈನಲ್‌ಗೆ ಭಾರತ ತಂಡಗಳ ಪ್ರವೇಶ

ಕೊಕ್ಕೊ ವಿಶ್ವಕಪ್

ನವದೆಹಲಿ (ಪಿಟಿಐ): ನಿರೀಕ್ಷೆಯಂತೆ ಭಾರತ ಪುರುಷರ ತಂಡ 100–40 ಅಂತರದಲ್ಲಿ ಶ್ರೀಲಂಕಾವನ್ನು ಸೋಲಿಸಿ ವಿಶ್ವಕಪ್ ಕೊಕ್ಕೊ ಟೂರ್ನಿಯ ಸೆಮಿಫೈನಲ್ ತಲುಪಿತು. ಮಹಿಳೆಯರ ತಂಡ ಶುಕ್ರವಾರ ಕ್ವಾರ್ಟರ್‌ಫೈನಲ್‌ನಲ್ಲಿ 109–16 ರಿಂದ ಬಾಂಗ್ಲಾದೇಶ ತಂಡವನ್ನು ಸದೆಬಡಿದು ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟಿತು.

ಮಹಿಳಾ ತಂಡ ಶನಿವಾರ ನಡೆಯುವ ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ದಕ್ಷಿಣ ಆಫ್ರಿಕಾ ವನಿತೆಯರು ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ 51–46 ರಿಂದ ಕೆನ್ಯಾ ತಂಡವನ್ನು ಸೋಲಿಸಿದರು.

ರಾಮಜಿ ಕಶ್ಯಪ್, ಪ್ರತೀಕ್ ವೈಕರ್ ಮತ್ತು ಆದಿತ್ಯ ಗಣಪುಲೆ ಅವರು ಮೊದಲ 'ಟರ್ನ್'ನಲ್ಲೇ ಉತ್ತಮ ಪ್ರದರ್ಶನ ನೀಡಿ ಪುರುಷರ ತಂಡದ ಭರ್ಜರಿ ಗೆಲುವಿಗೆ ಬುನಾದಿ ಹಾಕಿಕೊಟ್ಟರು. ಮೊದಲ ಟರ್ನ್‌ನಲ್ಲೇ ಭಾರತ 58 ಪಾಯಿಂಟ್ಸ್ ಗಳಿಸಿತು. ಲಂಕಾ ತಂಡಕ್ಕೆ ಒಂದೂ ಪಾಯಿಂಟ್ ಗಳಿಸಲು ಬಿಡಲಿಲ್ಲ. ಎರಡು ಮತ್ತು ಮೂರನೇ ಸರದಿಯಲ್ಲೂ ಪ್ರಾಬಲ್ಯ ಮುಂದುವರಿಯಿತು.

ಪುರುಷರ ತಂಡವೂ ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ಎದುರು ಆಡಲಿದೆ. ದಕ್ಷಿಣ ಆಫ್ರಿಕಾ 58–38ರಿಂದ ಇಂಗ್ಲೆಂಡ್ ತಂಡವನ್ನು ಸೋಲಿಸಿ ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು.



ಶೂಟರ್ ಮನು ಭಾಕರ್, ಪ್ಯಾರಾ ಅಥ್ಲೀಟ್ ಪ್ರವೀಣ್ ಕುಮಾರ್, ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಚೆಸ್ ಚಾಂಪಿಯನ್ ಡಿ. ಗುಕೇಶ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶುಕ್ರವಾರ ಮೇಜರ್ ಧ್ಯಾನ್‌ಚಂದ್ ಖೇಲ್‌ರತ್ನ ಪ್ರಶಸ್ತಿ ಪ್ರದಾನ ಮಾಡಿದರು –ಪಿಟಿಐ ಚಿತ್ರ

ರಾಷ್ಟ್ರೀಯ ಕ್ರೀಡಾ ಪ್ರಶಸ್ತಿ ಪ್ರದಾನ • ನಾಲ್ವರಿಗೆ ಖೇಲ್ ರತ್ನ ಗೌರವ

ಪ್ಯಾರಾ ಅಥ್ಲೀಟ್‌ಗಳಿಗೆ ಭಾರಿ ಚಪ್ಪಾಳೆ

ನವದೆಹಲಿ (ಪಿಟಿಐ): ಮನು ಭಾಕರ್ ಮತ್ತು ಡಿ.ಗುಕೇಶ್ ಅವರು ಶುಕ್ರವಾರ ರಾಷ್ಟ್ರಪತಿ ಭವನದಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಪ್ರಶಸ್ತಿ ಪ್ರದಾನ ಸಮಾರಂಭದ ಆಕರ್ಷಣೆಯಾಗಿದ್ದರು. ಆದರೆ ಕಿವಿಗಡ-ಚಿಕ್ಕುವ ಕರತಾಡನಗಳು ಕೇಳಿಬಂದಿದ್ದು ಸುಮಾರು ಅರ್ಧದಷ್ಟು ಸಂಖ್ಯೆಯಲ್ಲಿದ್ದ ಪ್ಯಾರಾ ಅಥ್ಲೀಟುಗಳಿಗೆ.

ನಾಲ್ಕು ಮಂದಿ ಸಾಧಕರು ಪ್ರತಿಷ್ಠಿತ ಮೇಜರ್ ಧ್ಯಾನ್‌ಚಂದ್ ಖೇಲ್‌ರತ್ನ ಗೌರವಕ್ಕೆ ಪಾತ್ರರಾದರು. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಪಡೆದ ಮನು ಭಾಕರ್, ವಿಶ್ವ ಚೆಸ್ ಚಾಂಪಿಯನ್, 18 ವರ್ಷ ವಯಸ್ಸಿನ ಡಿ.ಗುಕೇಶ್, ರಾಷ್ಟ್ರೀಯ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಪ್ಯಾರಾಲಿಂಪಿಕ್ಸ್ ಹೈಜಂಪ್ ಸ್ವರ್ಣ ವಿಜೇತ ಪ್ರವೀಣ್ ಕುಮಾರ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಈ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.

22 ವರ್ಷ ವಯಸ್ಸಿನ ಭಾಕರ್, ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಗೆದ್ದ ಸ್ವತಂತ್ರ ಭಾರತದ ಮೊದಲ ಕ್ರೀಡಾಪಟು. ಆಗಸ್ಟ್‌ನಲ್ಲಿ ನಡೆದ ಒಲಿಂಪಿಕ್ಸ್‌ನ ಶೂಟಿಂಗ್‌ನಲ್ಲಿ 10 ಮೀ. ಏರ್ ಪಿಸ್ತೂಲ್ ವೈಯಕ್ತಿಕ ಮತ್ತು 10 ಮೀ. ಏರ್ ಪಿಸ್ತೂಲ್ ಮಿಶ್ರ ವಿಭಾಗದಲ್ಲಿ ಕಂಚಿನ ಪದಕಗಳನ್ನು ಜಯಿಸಿದ್ದರು.

ಟೋಕಿಯೊ ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತ ಹಾಕಿ ತಂಡಕ್ಕೆ ಹರ್ಮನ್‌ಪ್ರೀತ್ ನಾಯಕರಾಗಿದ್ದರು. ಪ್ಯಾರಾ ಅಥ್ಲೀಟ್ ಪ್ರವೀಣ್, ಟೋಕಿಯೊದಲ್ಲಿ ಬೆಳ್ಳಿ ಗೆದ್ದರೆ, ನಾಲ್ಕು ವರ್ಷಗಳ ನಂತರ ಪ್ಯಾರಿಸ್‌ನಲ್ಲಿ ಚಿನ್ನ ಗೆದ್ದಿದ್ದರು. ಅವರ ಎಡಗಾಲಿನ ಉದ್ದ ಕಡಿಮೆಯಿದೆ.

ಅರ್ಜುನ ಪ್ರಶಸ್ತಿ: 32 ಮಂದಿ ಅಥ್ಲೀಟುಗಳಿಗೆ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಇವರಲ್ಲಿ 17 ಮಂದಿ ಪ್ಯಾರಾ ಅಥ್ಲೀಟುಗಳು ಇದ್ದಿದ್ದು ವಿಶೇಷ. ಪ್ಯಾರಿಸ್ ಒಲಿಂಪಿಕ್ಸ್ ನಲ್ಲಿ ಪದಕ ಗೆದ್ದ ಅಥ್ಲೀಟುಗಳ ಜೊತೆಗೆ ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಅಥ್ಲೀಟುಗಳಿಗೂ ಈ ಬಾರಿ ಗೌರವಿಸಲಾಗಿದೆ.

ಪ್ಯಾರಿಸ್‌ನಲ್ಲಿ ಪದಕ ಗೆದ್ದ ಅಮನ್ ಸೆಹ್ರಾವತ್ (ಕುಸ್ತಿ), ಶೂಟರ್‌ಗಳಾದ ಸ್ವಪ್ನಿಲ್ ಕುಸಳೆ ಮತ್ತು ಸರಬ್ಜೋತ್ ಸಿಂಗ್ (ಭಾಕರ್ ಜೊತೆ ಶೂಟಿಂಗ್ ಮಿಶ್ರ ವಿಭಾಗದಲ್ಲಿ ಪದಕ), ಕಂಚು ಗೆದ್ದ ಹಾಕಿ ತಂಡದಲ್ಲಿದ್ದ ಜರ್ಮನ್‌ಪ್ರೀತ್, ಸುಖಜೀತ್, ಸಂಜಯ್ ಮತ್ತು ಅಭಿಷೇಕ್ ಇವರಲ್ಲಿ ಒಳಗೊಂಡಿದ್ದಾರೆ.

ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ಈ ಬಾರಿ 29 ಪದಕಗಳನ್ನು ಗೆದ್ದು ಅಮೋಘ ಸಾಧನೆ ದಾಖಲಿಸಿತ್ತು.

ರಾಷ್ಟ್ರಪತಿ ಮುರ್ಮು ಅವರು ಶಿಷ್ಟಾಚಾರ ಬದಿಗೊತ್ತಿ ವೀಲ್ ಚೇರ್ ಅಥ್ಲೀಟುಗಳ ಬಳಿ ಹೋಗಿ ಅವರನ್ನು ಸ್ವಾಗತಿಸಿದರು.

ಖೇಲ್ ರತ್ನ ಪ್ರಶಸ್ತಿಯು ₹25 ಲಕ್ಷ ನಗದು, ಅರ್ಜುನ ಮತ್ತು ದ್ರೋಣಾಚಾರ್ಯ ಪ್ರಶಸ್ತಿಯು ತಲಾ ₹15 ಲಕ್ಷ ನಗದು ಬಹುಮಾನ ಹೊಂದಿದೆ.

ಮುರಳಿಕಾಂತ ಪೇಟ್ಕರ್‌ಗೆ ಮೆಚ್ಚುಗೆ



ರಾಷ್ಟ್ರಪತಿ ಭವನದ ದರ್ಬಾರ್ ಹಾಲ್‌ನಲ್ಲಿ ಮನಮಿಡಿಯುವ ಸನ್ನಿವೇಶ ಎದುರಾಗಿದ್ದು ಅರ್ಜುನ ಪ್ರಶಸ್ತಿ (ಜೀವಮಾನ ಸಾಧನೆ) ಪಡೆದ ಮುರಳಿಕಾಂತ ಪೇಟ್ಕರ್ ಅವರು ಪ್ರಶಸ್ತಿ ಸ್ವೀಕರಿಸುವಾಗ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೇ ಅರ್ಧದಷ್ಟು ಮುಂದೆ ಬಂದರು. ಊರುಗೋಲು ಆಸರೆಯಿಂದ ಬಂದ ಪೇಟ್ಕರ್ ಅವರನ್ನು ಬರಮಾಡಿಕೊಂಡರು.

80 ವರ್ಷ ವಯಸ್ಸಿನ ಯುದ್ಧವೀರರಾದ ಪೇಟ್ಕರ್, ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಕ್ರೀಡಾಪಟುವಾಗಿದ್ದಾರೆ. 1972ರಲ್ಲಿ ಹಿಡೆಲ್‌ಬರ್ಗ್ ಕೂಟದ 50 ಮೀ. ಫ್ರೀಸ್ಟೈಲ್ ಈಜಿನಲ್ಲಿ ಅವರು ವಿಶ್ವದಾಖಲೆಯೊಡನೆ ಚಿನ್ನ ಗೆದ್ದಿದ್ದರು.

1965ರ ಭಾರತ–ಪಾಕ್ ಯುದ್ಧದ ವೇಲೆ ಗುಂಡಿನ ಗಾಯದಿಂದ ಅವರು ಸೊಂಟದ ಕೆಳಗಿನ ಭಾಗದ ಸ್ವಾಧೀನ ಕಳೆದುಕೊಂಡಿದ್ದರು. ಮೂಲತಃ ಬಾಕ್ಸರ್ ಆಗಿದ್ದ ಅವರು ನಂತರ ಪ್ಯಾರಾ ಈಜಿನಲ್ಲಿ ಆಸಕ್ತಿ ಬೆಳೆಸಿಕೊಂಡು ಯಶಸ್ಸು ಪಡೆದವರು. ಅವರಿಗೆ ಮೆಚ್ಚುಗೆ ಸೂಚಿಸಿದವರಲ್ಲಿ ನಟ ಕಾರ್ತಿಕ್ ಆರ್ಯನ್ ಒಳಗೊಂಡಿದ್ದರು. ಪೇಟ್ಕರ್ ಅವರ ಸಾಧನೆ ಆಧಾರಿತ ಚಲನಚಿತ್ರ 'ಚಂದು ಚಾಂಪಿಯನ್'ನಲ್ಲಿ ಅವರು ಪೇಟ್ಕರ್ ಪಾತ್ರ ನಿರ್ವಹಿಸಿದ್ದರು.


ಸಾತ್ವಿಕ್–ಚಿರಾಗ್ ಜೋಡಿ ಸೆಮಿಗೆ: ಸಿಂಧು ನಿರ್ಗಮನ

ನವದೆಹಲಿ (ಪಿಟಿಐ): ಭಾರತದ ಸ್ಟಾರ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದರು. ಆದರೆ, ಅನುಭವಿ ಆಟಗಾರ್ತಿ ಪಿ.ವಿ. ಸಿಂಧು ಮೂರು ಗೇಮ್‌ಗಳ ರೋಚಕ ಹೋರಾಟದಲ್ಲಿ ಸೋತು ಹೊರಬಿದ್ದರು.

2022ರ ಚಾಂಪಿಯನ್ಸ್ ಸಾತ್ವಿಕ್– ಚಿರಾಗ್ ಅವರು ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ 21-10, 21-17 ರಿಂದ ಕೊರಿಯಾದ ಜಿನ್ ಯೋಂಗ್ ಮತ್ತು ಕಾಂಗ್ ಮಿನ್ ಹ್ಯುಕ್ ಅವರನ್ನು ಮಣಿಸಿದರು.

ಸಿಂಧುಗೆ ನಿರಾಸೆ: ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು 9-21, 21-19, 17-21ರಿಂದ ಪ್ಯಾರಿಸ್ ಒಲಿಂಪಿಕ್ಸ್ ಕಂಚು ವಿಜೇತೆ ಗ್ರೆಗೋರಿಯಾ ಮರಿಸ್ಕಾ ತುಂಜಂಗ್ (ಇಂಡೊನೇಷ್ಯಾ) ಅವರಿಗೆ ಮಣಿದರು. ಈ ಮೂಲಕ ಮಹಿಳಾ ಸಿಂಗಲ್ಸ್‌ನಲ್ಲಿ ಭಾರತದ ಅಭಿಯಾನ ಕ್ವಾರ್ಟರ್ ಫೈನಲ್‌ನಲ್ಲೇ ಅಂತ್ಯಗೊಂಡಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಕೊನೆಯ ಭರವಸೆಯಾಗಿದ್ದ ಕಿರಣ್ ಜಾರ್ಜ್ ಅವರೂ ಹೊರಬಿದ್ದರು. ಕ್ವಾರ್ಟರ್ ಫೈನಲ್‌ನಲ್ಲಿ ಕಿರಣ್ ಅವರು 13-21, 19-21ರಿಂದ ಚೀನಾದ ಹಾಂಗ್ ಯಾಂಗ್ ವೆಂಗ್ ಅವರಿಗೆ ಶರಣಾದರು.



ಸೋತ ನಿರಾಸೆಯಲ್ಲಿ ಪಿ.ವಿ. ಸಿಂಧು